ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್


ಕಾಡಿನಲ್ಲಿ ಡೊನಾಲ್ ಆಂಡರ್‌ಸನ್ ಜೊತೆ

ನವೆಂಬರ್ 28, 2012 ಪುಟ 20 ರೂ. 14/-



ಪೂಜಾ ಗಾಂಧಿ ಮದುವೆ

ಭಾವಿ ಗಂಡ ಮಹಾ ಪ್ರಚಂಡ!



ಗಡ್ಕರಿ ಮನೆಯಲ್ಲಿ ಬಾಲಕಿಯನ್ನು ಕೊಂದದ್ದು ಯಾರು?



ವಲಸೆ ಹಕ್ಕಿಗಳು: ಕಾಂಗ್ರೆಸ್ ಪರ ಅಲೆ?

ಶಿರಸಿ
ಹೈಗರ ಸ್ವಾಮಿಗಳ ರಾಜಕೀಯ

ಚಿತ್ರದುರ್ಗ
ಬಿಜೆಪಿಗೆ ಆಗಲಿದೆ ಎಡವಟ್ಟು

ಕುಂದಗೋಳ
ಅಕ್ಕಿಗೆ ಲಕ್ಕು ಚಿಕ್ಕನಗೌಡನಿಗೆ ಚೊಂಬು!

ಅಂಚಿನಿಂದ

ಡಾ. ವಾಸು ಎಚ್.ವಿ.



ಮತ್ತೆ ಗೆದ್ದ ಒಬಾಮಾ... ಸೋತವರು ಯಾರು?


ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದ ನಂತರ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಒಬಾಮಾ ಮಾಡಿದ ಭಾಷಣದಲ್ಲಿ ಅತ್ಯಂತ ಹೆಚ್ಚಾಗಿ ಹೊಗಳಿದ್ದು ಯಾರನ್ನು ಎಂಬುದು ಅರ್ಥಗರ್ಭಿತವಾಗಿದೆ. ತನ್ನನ್ನು 20 ವರ್ಷದ ಹಿಂದೆ ಮದುವೆಯಾದ ಹೆಂಡತಿ ಮಿಷೆಲ್‌ರ ಕುರಿತು ಹೇಳಿದ ರೊಮ್ಯಾಂಟಿಕ್ ಮಾತುಗಳ ಕುರಿತಾಗಿ ಈಗಾಗಲೇ ಕನ್ನಡ ಪತ್ರಿಕೆಗಳಲ್ಲೂ ಬರೆಯಲಾಗಿದೆ. ಅದು ಅಮೆರಿಕದ ವಿಶಿಷ್ಟ ಶೈಲಿಯ ಭಾಗವಷ್ಟೇ. ಅದರಲ್ಲೂ ಒಬಾಮಾ ಎಂಬ ಮೋಡಿ ಭಾಷಣ ಮಾಡುವ ಕಲೆಗಾರ ಅಂತಹ ಅದನ್ನೇ. 'ನಾವಿಬ್ಬರೂ ತೀವ್ರ ಹಣಾಹಣಿ ನಡೆಸಿರಬಹುದು. ಅದು ನಾವು ಈ ದೇಶವನ್ನು ಎಷ್ಟು ಆಳವಾಗಿ ಪ್ರೀತಿಸುತ್ತೇವೆ ಮತ್ತು ಅದರ ಭವಿಷ್ಯದ ಕುರಿತು ಬಹಳ ಕಾಳಜಿ ಹೊಂದಿರುವ ಕಾರಣದಿಂದ ಮಾತ್ರ. ಜಾರ್ಜ್‌ರಿಂದ ಲೆನೋರ್‌ವರೆಗೆ ಮತ್ತು ಅವರ ಮಗ ಮಿಟ್‌ನವರೆಗೆ ರೋಮ್ನಿ ಕುಟುಂಬವು ತಮ್ಮ ಸಾರ್ವಜನಿಕ ಸೇವೆಯ ಮೂಲಕ ಅಮೆರಿಕಕ್ಕೆ ಬಹಳಷ್ಟನ್ನು ನೀಡಿದೆ. ಆ ಪರಂಪರೆಯನ್ನು ನಾನು ಗೌರವಿಸುತ್ತೇನೆ ಮತ್ತು ಈ ಸಂದರ್ಭದಲ್ಲಿ ಅದನ್ನು ಶ್ಲಾಘಿಸಬಯಸುತ್ತೇನೆ. ನಾವು ಈ ದೇಶವನ್ನು ಹೇಗೆ ಜೊತೆಯಾಗಿ ಮುಂದಕ್ಕೊಯ್ಯಬಹುದೆನ್ನುವುದನ್ನು ಅವರೊಡನೆ ಕೂತು ಚರ್ಚಿಸಲು ನಾನು ಎದುರು ನೋಡುತ್ತಿದ್ದೇನೆ.'

ಈ ಮಾತುಗಳೂ ಕೇವಲ ಸೋತ ಎದುರಾಳಿಯ ಕುರಿತು ತೋರಿದ ಸಭ್ಯತೆಯ ಮಾತುಗಳೆಂದು ಭಾವಿಸಲು ಸಾಧ್ಯವೇ ಇಲ್ಲ. ತನ್ನ ಮುಂದಿನ ಆರ್ಥಿಕ ನೀತಿಗಳನ್ನು ರಿಪಬ್ಲಿಕನ್ ಸಂಸದರ ಜೊತೆ ಸೇರಿಯೇ ರೂಪಿಸಲು ಒಬಾಮಾ ಆಗಲೇ ಯೋಜಿಸಿಯಾಗಿದೆ. ಅಮೆರಿಕದ ಸಂಸತ್ತು ಸದ್ಯಕ್ಕೆ ಇರುವ ರೀತಿಯೇ ಹಾಗಿದೆ. ಅದರಲ್ಲಿ ಅಧ್ಯಕ್ಷ ಒಂದು ಪಕ್ಷದವನಿದ್ದರೆ, ಸಂಸತ್ತಿನ ಮೆಜಾರಿಟಿ ಇನ್ನೊಂದು ಪಕ್ಷದ್ದಾಗಿರುತ್ತದೆ.

ತನ್ನ ವಿಜಯದ ಭಾಷಣದಲ್ಲಿ ಒಬಾಮಾ ದೀರ್ಘವಾಗಿ ಫ್ಯಾಮಿಲಿ ಸೆಂಟಿಮೆಂಟ್‌ನ ಪ್ರದರ್ಶನವನ್ನು ತಪ್ಪಿಸಲು ಸಾಧ್ಯವಿರಲಿಲ್ಲ. ಆದರೆ ಹೊರತಾಗಿ ಮುಖ್ಯವಾಗಿ ಇಬ್ಬರು ವ್ಯಕ್ತಿಗಳನ್ನು ಹಾಗೂ ಒಂದು ದೊಡ್ಡ ಗುಂಪನ್ನು ಆತ ವಿಶೇಷವಾಗಿ ಹೊಗಳಿದ.

ತನ್ನ ಹೆಂಡತಿಗಿಂತಲೂ ಮೊದಲು ಪ್ರಶಂಸಿಸಿದ್ದು ತನ್ನ ಇದುವರೆಗಿನ ಉಪಾಧ್ಯಕ್ಷ ಜೋ ಬಿಡೆನ್‌ರನ್ನು. 'ಯಾವುದೇ ಅಧ್ಯಕ್ಷ ಬಯಸಬಹುದಾದ ಅತ್ಯುತ್ತಮ ಉಪಾಧ್ಯಕ್ಷ' ಎಂದು ಒಬಾಮಾ ಆತನ ಬಗ್ಗೆ ಹೇಳಿದ್ದಲ್ಲದೇ, ಭಾಷಣ ಮುಗಿದ ಕೂಡಲೇ ತನ್ನ ಕುಟುಂಬದೊಂದಿಗೆ ಆಲಂಗಿಸಿಕೊಂಡದ್ದು ಜೋ ಬಿಡೆನ್‌ರನ್ನೇ. ಇದು ಕೇವಲ ಸಂಪ್ರದಾಯವೂ ಅಲ್ಲ; ಅಥವಾ ಒಬಾಮಾ ತೋರಿದ ಸಜ್ಜನಿಕೆಯ ಹೆಗ್ಗುರುತೂ ಅಲ್ಲ. ಏಕೆಂದರೆ ಜೋ ಬಿಡೆನ್ ಮತ್ತು ಆತ ಪ್ರತಿನಿಧಿಸುವ 'ಅಮೆರಿಕದ ಇಸ್ರೇಲ್ ಪ್ರತಿನಿಧಿಗಳು' ಬೆಂಬಲಿಸದೇ ಇದ್ದರೆ ಯಾವುದೇ ವ್ಯಕ್ತಿ ಅಮೆರಿಕದ ಅಧ್ಯಕ್ಷನಾಗಲಾರ. ಅಮೆರಿಕದ ಫೆಡರಲ್ ಬ್ಯಾಂಕ್ (ಇದು ಖಾಸಗಿ ಬ್ಯಾಂಕೋ, ಸರ್ಕಾರೀ ಬ್ಯಾಂಕೋ ಗೊತ್ತಾಗದಷ್ಟು ಅಮೆರಿಕ ಆರ್ಥಿಕತೆಯ ಮೇಲೆ ಪ್ರಭಾವ ಹೊಂದಿರುವ ಹಣಕಾಸು ಸಂಸ್ಥೆ)ನ್ನೂ ಸೇರಿದಂತೆ ಅಲ್ಲಿನ ಆರ್ಥಿಕತೆ ಹಾಗೂ ರಾಜಕಾರಣವನ್ನು ನಿಯಂತ್ರಿಸುವಲ್ಲಿ ಯಹೂದಿ ಕುಬೇರರ ಪಾಲು ದೊಡ್ಡದು. ಇಸ್ರೇಲ್‌ನ ಅತ್ಯಂತ ದುಷ್ಟ ಹಾಗೂ ಕ್ರೂರನೀತಿಗಳ ಪ್ರತೀಕವಾದ ಜಿಯೋನಿಸಂಅನ್ನು ಪೋಷಿಸುವಲ್ಲಿ ಅವರ ಪಾತ್ರ ಮಹತ್ವದ್ದು.


ಜೋ ಬಿಡೆನ್ ತನ್ನ ರಾಜಕೀಯ ಸಿದ್ಧಾಂತದ ಕುರಿತು 'ನೀವು ಜಿಯೋನಿಸ್ಟ್ ಆಗಲು ಜ್ಯೂ (ಯಹೂದಿ) ಆಗಿರಬೇಕೆಂದೇನೂ ಇಲ್ಲ; ನಾನೊಬ್ಬ ಜಿಯೋನಿಸ್ಟ್' ಎಂದು ಬಹಿರಂಗವಾಗಿಯೇ ಹೇಳಬಲ್ಲಷ್ಟು ಪ್ರತಿಗಾಮಿ ಉದ್ಧಟ. ಈ ಲಾಬಿಯು ಒಬಾಮಾರ ಮೊದಲ ಅವಧಿಯಲ್ಲಿ ಎಂತೆಂತಹ ಸ್ಥಾನಗಳಲ್ಲಿತ್ತು (ಬಾಕ್ಸ್ ನೋಡಿ) ಎಂಬುದು ಈ 'ಬದಲಾವಣೆಯ ಅಧ್ಯಕ್ಷ'ನ ನೀತಿಯ ಕುರಿತು ತಿಳಿಸುತ್ತದೆ.



ಅದೆಲ್ಲ ಇರಲಿ, ತನ್ನ 'ವಿಕ್ಟರಿ ಭಾಷಣ'ದಲ್ಲಿ ಜೋಗಿಂತಲೂ ಮೊದಲೇ ಸಜ್ಜನಿಕೆ ತೋರಿದ್ದು ತನ್ನಿಂದ ಸೋತ ರಿಪಬ್ಲಿಕನ್ ಅಭ್ಯರ್ಥಿ ಮಿಟ್ ರೋಮ್ನಿಯ ಬಗ್ಗೆ. ರೋಮ್ನಿ ಸೋತದ್ದಕ್ಕೆ ಒಂದು ಕಾರಣ, ಅಪಾರ ಶ್ರೀಮಂತಿಕೆಯನ್ನು (250 ಮಿಲಿಯನ್ ಡಾಲರ್‌ಗಳು) ಹೊಂದಿರುವ ರೋಮ್ನಿಗೆ ಜನಸಾಮಾನ್ಯರ ಕಷ್ಟ ಅರ್ಥವಾಗಲು ಸಾಧ್ಯವಿಲ್ಲ ಎಂಬ ಅಮೆರಿಕದ ಮಧ್ಯಮವರ್ಗದ ಅಭಿಪ್ರಾಯ ಎಂಬುದು ಹಲವು ವಿಶ್ಲೇಷಕರ ಅಭಿಪ್ರಾಯ. ಆದರೆ ಒಬಾಮಾ ಪ್ರಶಂಸಿಸಿದ್ದು ಹೊಗಳಿದ್ದು, ಅಲ್ಲೇ ಮುಂದೆ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ತನ್ನ ಪ್ರಚಾರ ತಂಡವನ್ನು. 'ಎಂದೆಂದೂ ನಿಮಗೆ ಋಣಿಯಾಗಿರುವ ಅಧ್ಯಕ್ಷನ ಹಾರೈಕೆಗಳೊಂದಿಗೆ ನೀವು ಇಲ್ಲಿಂದ ತೆರಳುವಿರಿ' ಎಂಬ ಭರವಸೆ ಅವರಿಗೆ ಒಬಾಮಾರಿಂದ ಸಿಕ್ಕಿತು. ಈ ಚುನಾವಣೆಯಲ್ಲಿ 2.6 ಬಿಲಿಯನ್ ಡಾಲರ್‌ಗಳನ್ನು (14,300 ಕೋಟಿ ರೂ.ಗಳು) ಕೇವಲ ಪ್ರಚಾರಕ್ಕಾಗಿ ಅಧಿಕೃತವಾಗಿ ಖರ್ಚು ಮಾಡಲಾಯಿತು ಎಂಬುದು, ಪ್ರಚಾರದ ಹಾಗೂ ಪ್ರಚಾರದ ತಂಡದ ಮಹತ್ವವನ್ನು ತಿಳಿಸುತ್ತದೆ. ಅಧಿಕೃತವಾಗಿಯೇ ಪಡೆಯುವ ವಂತಿಗೆಯ ಮೂಲಕ ಅತ್ಯಂತ ಅಬ್ಬರದ ಪ್ರಚಾರವನ್ನು ಒಬಾಮಾ ನಡೆಸಿದ್ದು.

ಒಬಾಮಾರ ಮೊದಲ ಅವಧಿಯ ಆಡಳಿತದ ಅತ್ಯಂತ ಪ್ರಮುಖ ಸಾಧನೆಯೆಂದು ಬಣ್ಣಿಸಲ್ಪಡುವ ವೈದ್ಯಕೀಯ ವಿಮಾ ಯೋಜನೆಯನ್ನು ಒಬಾಮಾ ಕೇರ್ ಎಂದೇ ಕರೆಯಲಾಗುತ್ತಿದೆ. ಎಲ್ಲಾ ಸಾಮಾನ್ಯ ಅಮೆರಿಕನ್ನರಿಗೂ ಅಸಾಮಾನ್ಯ ಅನುಕೂಲಗಳಾಗಿವೆ ಎಂದು ಈ ಪ್ರಚಾರದುದ್ದಕ್ಕೂ ಬಿಂಬಿಸಲಾಯಿತು. ಒಬಾಮಾರ ಚುನಾವಣಾ ವೆಚ್ಚಕ್ಕಾಗಿ ಕೈಸರ್ ಪರ್ಮನೆಂಟೆ ಎಂಬ ವೈದ್ಯಕೀಯ ಸೇವೆಯ ಖಾಸಗಿ ಸಂಸ್ಥೆ ಅಧಿಕೃತವಾಗಿಯೇ 5 ಲಕ್ಷ ಡಾಲರ್‌ಗಳನ್ನು ನೀಡಿತು. ಭಾರತದಂತೆಯೇ ಅಮೆರಿಕದಲ್ಲೂ ಉದ್ದಿಮೆದಾರರು ಸಾಮಾನ್ಯವಾಗಿ ಇಬ್ಬರೂ ಅಭ್ಯರ್ಥಿಗಳಿಗೆ ಕಾಸು ನೀಡುತ್ತಾರಾದರೂ ಕೈಸರ್ ಕಂಪೆನಿ ರೋಮ್ನಿಗೆ ಹಣವನ್ನೇನೂ ನೀಡಲಿಲ್ಲ. ಅಂದರೆ ಒಬಾಮಾ ಕೇರ್ ಮಾಡಿದ್ದು ಯಾರಿಗೆ ಎಂಬುದು ಸ್ಪಷ್ಟವಾಯಿತು. ಚುನಾವಣಾ ವೆಚ್ಚದ ಉಳಿದ ಹಣವನ್ನೂ ಇಂತಹ ಇನ್ನಿತರ ಫಲಾನುಭವಿಗಳೇ ಭರಿಸಿದ್ದರು ಎಂದು ಹೇಳಲು ಹೆಚ್ಚಿನ ಜ್ಞಾನದ ಅಗತ್ಯವೇನೂ ಇಲ್ಲ.

ವಿಜಯೀ ಭಾಷಣದ ಇನ್ನುಳಿದ ಭಾಗದಲ್ಲಿ ಅಮೆರಿಕ ಎಂತಹ ಅದ್ಭುತ ರಾಷ್ಟ್ರ, ಅದಕ್ಕೆ ಇನ್ನೂ ಮುಂದೆ ಏನೇನು ಕಾದಿದೆ ಎಂಬ ಕುರಿತು ಮೋಡಿ ಭಾಷಣದ ತುಣುಕುಗಳೇ ಹೊರತು ಇನ್ನೇನಿರಲಿಲ್ಲ. ಅಮೆರಿಕದ ಪ್ರಜಾಪ್ರಭುತ್ವದ ಕುರಿತೂ ಅಪಾರ ಹೆಮ್ಮೆಯನ್ನು ಪ್ರಕಟಿಸಿದ ಒಬಾಮಾ, ದೂರದೂರದ ದೇಶಗಳಲ್ಲಿ ಇಂತಹ ಒಂದು ಓಟಿನ ವ್ಯವಸ್ಥೆಯೇ ಇಲ್ಲದಿರುವಾಗ ನಮ್ಮ ದೇಶದಲ್ಲಿ ನೋಡಿ ಎಷ್ಟು ಅದ್ಭುತ ಸಂಗತಿ ನಡೆಯುತ್ತಿದೆ ಎಂದೂ ಉದ್ಗರಿಸಿದ! ಆತನ ಭಾಷಣದುದ್ದಕ್ಕೂ ಚೀರಾಡಿ (ಇಂಗ್ಲಿಷಿನ cheers ಈ ಸಂದರ್ಭದಲ್ಲಿ ಬಳಸುವುದೇ ಸೂಕ್ತವೆನಿಸುತ್ತದೆ) ಚಪ್ಪಾಳೆ ತಟ್ಟಿದ್ದು 60 ಬಾರಿ ಎಂದು ಲೆಕ್ಕ ಹಾಕಲಾಗಿದೆ. ಆದರೆ ಅವೆಲ್ಲಾ ಮಾತುಗಳು ಎಷ್ಟು ಪೊಳ್ಳು ಎಂದು ತಿಳಿಯಬೇಕೆಂದರೆ ಅಮೆರಿಕದ ಚುನಾವಣಾ ವ್ಯವಸ್ಥೆಯ ಟೊಳ್ಳು ಮತ್ತು ಅದು ಜಗತ್ತಿನೆಲ್ಲೆಡೆ ಪ್ರಜಾತಂತ್ರವನ್ನು



ದಮನಿಸಲು ಮಾಡುತ್ತಿರುವ ಪ್ರಯತ್ನವನ್ನು ಅವಲೋಕಿಸಬೇಕು.

ಅದೇ ಭಾಷಣದಲ್ಲೇ ಒಬಾಮಾ ಓಟು ಹಾಕಲು ಬಹು ಉದ್ದದ ಸಾಲುಗಳಲ್ಲಿ ಗಂಟೆಗಟ್ಟಲೆ ಜನರು ಕಾಯಬೇಕಾಗಿ ಬಂದುದನ್ನು ಪ್ರಸ್ತಾಪಿಸಿದ್ದಾನೆ. ಅದನ್ನು ಸರಿಪಡಿಸೋಣ ಬಿಡಿ ಎಂದೂ ಹೇಳಿದ. ಕ್ಯೂಗಳಲ್ಲಿ ಗಂಟೆಗಟ್ಟಲೆ ಜನರು ಕಾಯಬೇಕಾಗಿ ಬಂದುದು ಮಾತ್ರವಲ್ಲ, ಓಟಿಂಗ್ ಯಂತ್ರಗಳು ಕೆಟ್ಟು ಹೋಗುವುದು, ರಿಜಿಸ್ಟರ್‌ನಿಂದ ಹೆಸರುಗಳು ಅಳಿಸಿಹೋಗುವುದು, ಒಬ್ಬರಿಗೆ ಓಟು ಹಾಕಿದರೆ ಇನ್ನೊಬ್ಬರಿಗೆ ಓಟು ಬೀಳುವುದು ಇವೆಲ್ಲಾ ಸಾಮಾನ್ಯ. ರೋಮ್ನಿ ಕುಟುಂಬಕ್ಕೆ ಹತ್ತಿರದ ಒಂದು ಕಂಪೆನಿಯೇ ಈ ಸಾರಿ ಬಳಸಲಾದ ಓಟಿಂಗ್ ಯಂತ್ರಗಳ ಮೇಲೆ ಹೂಡಿಕೆ ಮಾಡಲು ಹೋಗಿ ಅದೊಂದು ವಿವಾದವಾಗಿತ್ತು!

ತನ್ನ ದೇಶದ ಚುನಾವಣೆಯನ್ನು ಈ ರೀತಿ ನಡೆಸುವ ಅಮೆರಿಕದ ಅತ್ಯುನ್ನತ ಜನರು, ಚುನಾವಣೆ ನಡೆಯುತ್ತಿದ್ದ ಇದೇ ಅವಧಿಯಲ್ಲೇ ಸಿರಿಯಾದ ಪ್ರಭುತ್ವವನ್ನು ಬುಡಮೇಲು ಮಾಡುವ ಸಂಚಿನಲ್ಲೂ ತೊಡಗಿದ್ದರು. ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್‌ಳ ನೇರ ಉಪಸ್ಥಿತಿಯ (ಚುನಾವಣಾ ಫಲಿತಾಂಶ ಬರುವ ಕೇವಲ 4 ದಿನ ಹಿಂದೆ) ಮಧ್ಯ ಪ್ರಾಚ್ಯದ ಕತಾರ್‌ನ ರಾಜಧಾನಿ ದೋಹಾ ಹೋಟೆಲಿನಲ್ಲಿ ಸಭೆಯೊಂದನ್ನು ಕರೆಯಲಾಗಿತ್ತು. ಸಭೆಯಲ್ಲಿ 'ಸರ್ವಾಧಿಕಾರಿ' ಸಿರಿಯಾ ಪ್ರಭುತ್ವದ ವಿರು ಸೆಣಸಬೇಕಾದ ಒಕ್ಕೂಟ ಹೇಗಿರಬೇಕೆಂದು ಅಮೆರಿ ಅಧಿಕಾರಿಗಳು ನಿರ್ದೇಶನ ಕೊಟ್ಟರು. ತಮ ನಿಷ್ಠೆಯಿಂದಿರುವವರೇ ಅದರ ಮುಖ್ಯಸ್ಥರಾಗಬೇಕೆ ಪ್ರಯತ್ನದಲ್ಲಿದ್ದ ಅವರು 'ಯಾರೇ ಮುಖ್ಯಸ್ಥರಾದ ಇರಲೇಬೇಕಾದ ವ್ಯಕ್ತಿಗಳು ಮತ್ತು ಸಂಸ್ಥೆಗಳು' ಎ ಒಂದು ಪಟ್ಟಿಯನ್ನು ಸಿದ್ಧಪಡಿಸಿ ತಂದಿದ್ದರು. ಇ ಅಮೆರಿಕದ ಪ್ರಜಾತಂತ್ರದ ಪರಿ!

ಒಬಾಮಾ ಎಂಬ ಹುಸಿನಾಯಕನ ಅದ್ಭುತ ಭಾಷ ಪೊಳ್ಳುತನವನ್ನು ಗುರುತಿಸದಿದ್ದರೆ ಮೋ ಹೋಗಿಬಿಡುತ್ತೇವೆ. ಅಮೆರಿಕದ ಮತದಾರರ ರೀತಿಯ ಕಳೆದ 4 ವರ್ಷಗಳಲ್ಲಿ ಆರ್ಥಿಕ ಕುಸಿತವನ್ನು ತಡೆಯ ಕಾರ್ಪೊರೇಟ್ ಶಕ್ತಿಗಳ ಪರ ನಿರಂತರವಾಗಿ ಕೆ ಮಾಡುತ್ತಿದ್ದರೂ, ಒಬಾಮಾ ಕೇರ್ ಎಂಬ ಹೆಸರಿ ಖಾಸಗಿ ವೈದ್ಯಕೀಯ ಮಾಫಿಯಾಗಳಿಗೆ ಮಿಲಿಯಗಟ ಲಾಭ ತಂದುಕೊಡುವ ಯೋಜನೆ ರೂಪಿಸಿದ್ದ 7.9%ರಷ್ಟು ಪ್ರಮಾಣದ ನಿರುದ್ಯೋಗ ಅಮೆರಿ ಯುವಜನತೆಯನ್ನು ಕಾಡುತ್ತಿದ್ದರೂ ಒಬಾಮಾಗೇ ಓ ಹಾಕಿದ್ದಾರೆ. ಭಾರತದ ಮತದಾರರ ರೀತಿಯಲ್ಲಿ.

ಹಾಗಿದ್ದರೆ ರೋಮ್ನಿ ಗೆದ್ದಿದ್ದರೆ ಒಳ್ಳೆಯದಿತ್ತೇ? ಒಬಾಮಾನ ಎಲ್ಲಾ ನೀತಿಗಳನ್ನು ಒಬಾಮಾ ಮುಖವಾ ನವಿರು ರೂಪವೂ ಇಲ್ಲದೇ ಅನುಭವಿಸಬೇಕಾಗು ಅಷ್ಟೇ. ಹಾಗಾದರೆ ಯಾರು ಬಂದರೂ ಅಷ್ಟೇ ತ ಎಂದು ಜಾಣರು ಕೇಳಬಹುದು. ಇದು ಕೇವಲ ಅನಿಸಿಕೆಯೆಂತಲೂ ಹೇಳಬಹುದು. ಅಲ್ಲ, 'ಯಾವ ಪ್ರಭುತ್ವವು ತಾನು ಪ್ರತಿನಿಧಿಸುವ ವರ್ಗದ ಹಿತ ಕಾಯುವ ಒಂದು ಉಪಕರಣ ಅಷ್ಟೇ' ಎನ್ನುವ ಪ್ರಭು ಕುರಿತ ಮಾರ್ಕ್ಸ್‌ವಾದೀ ವ್ಯಾಖ್ಯಾನವನ್ನು ಮೀರಿ ಇನ್ನೊಂದು ಸರಿಯಾದ ವ್ಯಾಖ್ಯಾನ ಇದುವರೆಗೂ ಬಂ ಈ ವ್ಯಾಖ್ಯಾನವನ್ನು ಮಾರ್ಕ್ಸ್ ಹೇಳಿದ ಕಾರಣಕ್ಕೆ ಒಪ್ಪದ ಪ್ರಸಿದ್ಧ ಪ್ಯಾಲೆಸ್ಟೀನಿಯನ್ ಬರಹಗಾರ ಡಾ.ಎಡ್ವರ್ಡ್ ಅಕ್ಬ ಅವರು ಹೇಳಿದ ಒಂದು ಮಾತನ್ನು ಗಮನಿಸಬೇ 'ಅಮೆರಿಕದ ಅಧ್ಯಕ್ಷ ಮತ್ತು ಆತನ ಇಡೀ ಆಡಳಿ ಅಂತರರಾಷ್ಟ್ರೀಯ ಬಡ್ಡಿ ವ್ಯಾಪಾರಿಗಳು, ಮಿಲಿ ಉದ್ದಿಮೆದಾರರು, ಇಂಧನ ಕಂಪೆನಿಗಳು ಮ ಕಾರ್ಪೊರೇಟ್‌ಶಾಹಿಗಳ ಉಪಕರಣವೆನ್ನಲು ಎ ಸಾಕ್ಷ್ಯಗಳನ್ನು ಬೇಕಾದರೂ ಒದಗಿಸಬಹುದು. ಜಗ ಸಂಪನ್ಮೂಲಗಳೆಲ್ಲವನ್ನೂ ನಿಯಂತ್ರಿಸುವ, ಸಂಪ ಶ್ರೀಮಂತರೆಡೆಗೆ ಹರಿಸುವ, ಜಗತ್ತಿನ ಸಾಮಾ ಜನರೆಲ್ಲರನ್ನೂ ತಮ್ಮ ತಿಜೋರಿ ತುಂಬಿಸಲು ಬಳಸ ಆ ಜನರ ಪ್ರತಿರೋಧವನ್ನು ದಮನಿಸುವ ಮ ಮನುಷ್ಯರನ್ನು ತಮ್ಮ ಸಹಜೀವಿಗಳ ಮೇಲೆ ಯುದ್ಧಗಳಿಗೂ ಗುರಿ ಮಾಡುವ ಒಂದು ವ್ಯವಸ್ಥೆಯ ನಡೆಸಲು ಅಮೆರಿಕ ಸರ್ಕಾರವು ಅವರ ಬಳಕೆಯಾಗುತ್ತದೆ. ಹಾಗಾಗಿಯೇ ಗುಲಾಮರ ವ್ಯಾ ಮಾದಕ ವಸ್ತುಗಳ ಕಳ್ಳಸಾಗಾಣಿಕೆ, ಅಕ್ರಮ ಹಣಕ ದಂಧೆ, ಅಮೆರಿಕದ ಹಣಕಾಸು ಸಂಸ್ಥೆಗಳ ದುರ್ಬಳಕೆಯ ಕೊಬ್ಬಿರುವ ಅಮೆರಿಕದ ಯಹೂದಿ ಕುಬೇರರ ನೆರವಿ ಗೆದ್ದು ಬಂದಿರುವ ಅಧ್ಯಕ್ಷ ಯಾರೂ ಇಲ್ಲ."

ನನ್ನ ಸ್ನೇಹಿತರು ಯಾರೆಂದು ಹೇಳಿದರೆ ನಾನ್ಯಾರೆಂದು ಹೇಳುವಿರಾ?

ಮೊದಲ ಅವಧಿಯಲ್ಲಿ ಒಬಾಮಾ ಮಾಡಿಕೊಂಡ ನೇಮಕಗಳು ಆತನ ಆಡಳಿತ ಹೇಗಿದ್ದಿರಬಹುದೆಂಬುದ ತೋರಿಸುತ್ತವೆ. ಈ ಅವಧಿಯಲ್ಲಿ ಶ್ವೇತಭವನದ ಮುಖ್ಯಸ್ಥನಾಗಿದ್ದ ರ್‍ಯಾಮ್ ಇಸ್ರೇಲ್ ಇಮ್ಯಾನುವೆಲ್ ಇಸ್ರೇ ನಾಗರಿಕನಾಗಿದ್ದು ಇಸ್ರೇಲ್ ಸೈನ್ಯದಲ್ಲೂ ಕೆಲಸ ಮಾಡಿದ್ದಾನೆ. ಈತನ ತಂದೆ ಬೆಂಜಮಿನ್ ಇಮ್ಯಾನುವೆಲ್ ಒಬ್ಬ ಪ ಜಿಯೋನಿಸ್ಟ್. ಬುಷ್‌ನ ಆಡಳಿತದಲ್ಲಿ ಪೆಂಟಗನ್‌ನ ಮುಖ್ಯಸ್ಥನಾಗಿದ್ದ ರಾಬರ್ಟ್ ಗೇಟ್ಸ್ ಅಧ್ಯಕ್ಷನ ಆಪ್ತನಾಗಿ ಇರಾಕ್ ಯುದ್ಧವೂ ಸೇರಿದಂತೆ ಹಲವಾರು ಹತ್ಯಾಕಾಂಡಗಳಲ್ಲಿ ಈತನ ಪಾತ್ರವಿತ್ತು. ಒಬಾಮಾ ಇದೇ ಗೇಟ್ಸ್‌ನ ಯುದ್ಧ ಸೆಕ್ರೆಟರಿ (ಪೆಂಟಗನ್‌ನ ಮುಖ್ಯಸ್ಥ)ಯನ್ನಾಗಿ ಮುಂದುವರೆಸಿದ್ದರು. ಇನ್ನು ಪೊಡೆಸ್ಟ್ ಗ್ರೂಪ್ ಎಂಬ ಲ ಸಂಸ್ಥೆ (ಅದು ವಾಲ್‌ಮಾರ್ಟ್ ಸೇರಿದಂತೆ ಹಲವು ದೈತ್ಯ ಕಂಪೆನಿಗಳ ಪರವಾಗಿ ಕೆಲಸ ಮಾಡುತ್ತದೆ)ಯ ಮುಖ ಪೊಡೆಸ್ಟಾ, ವಾರೆನ್ ಬಫೆಟ್ ಇತ್ಯಾದಿಗಳು ಒಬಾಮಾನ ಸಲಹೆಗಾರರಾಗಿದ್ದರು.


ಹಿಂದಿನ ಚುನಾವಣೆಯ ಸಂದರ್ಭದಲ್ಲಿ ಯಾರ್‍ಯಾರಿಂದ ಹಣ ಪಡೆದರು ಎಂಬುದರ ಸಣ್ಣ ಪಟ್ಟಿಯನ್ನಷ್ಟೇ ಕೊಡಬಹುದು. ಯುಬಿಎಸ್ ಎಂಬ ಯೂರೋಪ್‌ನ ಎರಡನೇ ದೊಡ್ಡ ಬ್ಯಾಂಕ್ ಆತನಿಗೆ 1,65,000 ಡಾಲರ್‌ಗಳ ನೀಡಿತು. ಎಕ್ಸೆಲಾನ್ ಕಾರ್ಪೊರೇಷನ್ ಎಂಬ ಅಮೆರಿಕದ ಅತ್ಯಂತ ದೊಡ್ಡ ಅಣುಶಕ್ತಿ ಕಂಪೆನಿ 1,65,0 ಡಾಲರ್‌ಗಳನ್ನು ನೀಡಿತ್ತು (ಇದಾದನಂತರ ಇಂಡೋ-ಯುಎಸ್ ನ್ಯೂಕ್ಲಿಯಾರ್ ಡೀಲ್ ಆಯಿತು). ಗೋಲ್ಡ್‌ಮನ್ ಸ್ಯಾಕ್ಸ್ ಎಂಬ ಕಂಪೆನಿ 1,43,000 ಡಾಲರ್‌ಗಳನ್ನು, ಸಿಟಿಗ್ರೂಪ್ 50 ಸಾವಿರ ಡಾಲರ್‌ಗಳನ್ನೂ, ಮೋರ್ಗನ್ ಸ್ಟಾನ್ಲಿ ಸಾವಿರ ಡಾಲರ್‌ಗಳನ್ನೂ ನೀಡಿತ್ತು, ಕಿರ್ಕ್‌ಲ್ಯಾಂಡ್ ಮತ್ತು ಎಲ್ಲಿಸ್ ಎಂಬ ಕಾನೂನು ಸಂಸ್ಥೆಯೊಂದು 70 ಸಾ ಡಾಲರ್‌ಗಳನ್ನು ನೀಡಿತ್ತು, ಈ ಸಂಸ್ಥೆ ಜಿಎಂ ಮತ್ತು ಸಿಗರೇಟ್ ಕಂಪೆನಿಯೊಂದರ ಪರವಾಗಿ ಕೆಲಸ ಮಾಡುತ್ತದೆ.

ಜಾಗತಿಕವಾಗಿ ಮೊದಲ ಅವಧಿಯಲ್ಲಿ ಕಿಸಿದಿದ್ದೇನು? ಈಗಿನ ಡ್ರೋಣ್ ದಾಳಿ ಏನನ್ನು ಹೇಳುತ್ತಿದೆ?

ಬುಷ್ ಅವಧಿಯಲ್ಲಿ ಆಕ್ರಮಣಕ್ಕೊಳಗಾಗಿದ್ದ ಅಫ್ಘಾನಿಸ್ತಾನ ಮತ್ತು ಇರಾಕ್‌ಗಳಿಂದ ಒಬಾಮಾ ಸೈನ್ಯವನ್ನು ವಾಪಸ್ಸು ತೆಗೆಯಬಹುದೆಂಬ ನಿರೀಕ್ಷೆ ಸಂಪೂರ್ಣ ಸುಳ್ಳಾಯಿತು. ಬದಲಿಗೆ ನಿರಂತರವಾಗಿ ಪಾಕಿಸ್ತಾನ, ಅಫ್ಘಾನಿಸ್ತಾನದ ಗಡಿಯಲ್ಲಿ ಎರಡೂ ದೇಶಗಳ ಅನುಮತಿ ಇಲ್ಲದೇ ಬಾಂಬ್ ದಾಳಿ ನಡೆಯುತ್ತಲೇ ಇದೆ. ಬಿನ್ ಲಾಡೆನ್, ಗಡಾಫಿ ಇತ್ಯಾದಿ 'ಭಯೋತ್ಪಾದಕ'ರನ್ನು ನೇರ ಕಾರ್ಯಾಚರಣೆಗಳಲ್ಲಿ ಕೊಂದನಂತರವೂ ಅಮೆರಿಕದ ಭಯೋತ್ಪಾದನೆ ನಿಂತಿಲ್ಲ, ಅಮೆರಿಕಕ್ಕೆ ಭಯೋತ್ಪಾದನೆಯ ಭಯವೂ ಕಡಿಮೆಯಾಗಿಲ್ಲ. ಇದೀಗ 2ನೇ ಅವಧಿಗೆ ಗೆದ್ದ ಮೂರು ದಿನಗಳಲ್ಲೇ ಸಿರಿಯಾದ ಮೇಲೆ ಡ್ರೋಣ್ ದಾಳಿ ನಡೆಸಿ ಹಲವಾರು ನಾಗರಿಕರನ್ನು ಕೊಲ್ಲಲಾಗಿದೆ!

ಪ್ರತಿಭಾವಂತೆಯನ್ನು ಪರದೆಯ ಹಿಂದೆ ಸರಿಸಿದರೆ...

ಕಳೆದ ವಾರ ಜಗತ್ತಿನ ಎರಡು ಪ್ರಮುಖ ದೇಶಗಳಲ್ಲಿ ಚುನಾವಣೆಗಳು ನಡೆದವು. ಆದರೆ ಅವೆರಡೂ ಬಹಳ ಭಿನ್ನವಾಗಿದ್ದವು. ಅತ್ತ ಪಶ್ಚಿಮದಲ್ಲಿರುವ ಅಮೆರಿಕದಲ್ಲಿ ಬರಾಕ್ ಒಬಾಮಾ



ಎರಡನೆ ಬಾರಿಗೆ ಅಧ್ಯಕ್ಷ ಗಾದಿಗೆ ಗೆದ್ದಾಗ ಅವರ ಪಕ್ಕದಲ್ಲೇ ಅವರ ಹೆಂಡತಿ ಮಿಷೆಲ್ ಒಬಾಮಾ ಕೂಡ ಇದ್ದರು. ಒಬಾಮಾ ಮಾಡಿದ 'ವಿಜಯ ಭಾಷಣ'ದಲ್ಲಿ ತಮ್ಮ ಪತ್ನಿಗೆ ತಮ್ಮ ಪ್ರೀತಿಯನ್ನು ಬಹಿರಂಗವಾಗಿ ಘೋಷಿಸಿದರು. ವಾಸ್ತವವಾಗಿ ಮಿಷೆಲ್‌ಅನ್ನು ಅಮೆರಿಕನ್ನರು ಗುರುತಿಸುವುದು ಬರಾಕ್ ಅವರ ಪತ್ನಿ ಎಂಬ ಕಾರಣಕ್ಕೆ ಮಾತ್ರ.

ಹೀಗೆ ಅತ್ತ ಒಬಾಮಾ ಮರು ಗೆಲುವನ್ನು ಸಾಧಿಸಿದ ವಾರವೇ ಇತ್ತ ಪೂರ್ವದಲ್ಲಿರುವ ಚೈನಾ ದೇಶದಲ್ಲೂ ಮುಂದಿನ ಅಧ್ಯಕ್ಷರ ಚುನಾವಣೆಗಳು ನಡೆದವು. ಚೈನಾದ ಕಮ್ಯೂನಿಸ್ಟ್ ಪಕ್ಷದ ಹಿರಿಯರು ಖಾಸಗಿ ರೀತಿಯಲ್ಲಿ ಸಭೆಯೊಂದನ್ನು ನಡೆಸಿ ಕ್ಸೀ ಜಿಂಗ್‌ಪಿಂಗ್ ಎಂಬಾತನನ್ನು ನೂತನ ಅಧ್ಯಕ್ಷನಾಗಿ ಘೋಷಿಸಿದರು. ವಾಸ್ತವವಾಗಿ ಈ ಕ್ಸಿ ಜಿನ್‌ಪಿಂಗ್ ಈಗ ಚೈನಾದ ಉಪಾಧ್ಯಕ್ಷನಾಗಿದ್ದರೂ ಆತ ಯಾರೆಂಬುದೇ ಬಹಳಷ್ಟು ಚೈನಾ ದೇಶದ ಪ್ರಜೆಗಳಿಗೂ ಗೊತ್ತಿಲ್ಲ. ಬದಲಾಗಿ ಆತನ ಪತ್ನಿ ಪೆಂಗ್ ಲಿಯಾನ್ ಚೈನಾ ದೇಶದಲ್ಲಿ ಬಹಳ ಜನಪ್ರಿಯವಾಗಿರುವ ಹಾಡುಗಾರ್ತಿ. ಎಷ್ಟರಮಟ್ಟಿಗೆ ಎಂದರೆ ಜಿನ್‌ಪಿಂಗ್ ಬಗ್ಗೆ ಚೂರುಪಾರು ಗೊತ್ತಿದ್ದವರೂ ಆತನನ್ನು "ಪೆಂಗ್ ಲಿಯಾನ್ ಗಂಡ" ಎಂದೇ ಕರೆಯುತ್ತಿದ್ದರು. ಒಂದೆರಡು ತಿಂಗಳ ನಂತರ ಅಧ್ಯಕ್ಷನಾಗಿ ಜಿನ್‌ಪಿಂಗ್ ಅಧಿಕಾರ ಸ್ವೀಕರಿಸುವ ಸಮಾರಂಭದಲ್ಲಿ ಆತನಿಗಿಂತಲೂ ಜನಪ್ರಿಯವಾಗಿರುವ, ಜನರಿಗೆ ಪರಿಚಿತವಾಗಿರುವ ಆತನ ಪತ್ನಿ ಪೆಂಗ್ ಲಿಯಾನ್ ಮಾತ್ರ ಎಲ್ಲೂ ಕಾಣಿಸಿಕೊಳ್ಳುವುದಿಲ್ಲ. ಮಾತ್ರವಲ್ಲ ಚೈನಾ ದೇಶದ ಸರ್ಕಾರ ಎಂತಹದ್ದೆಂದರೆ ಸದ್ಯದಲ್ಲೇ ಆಕೆಯನ್ನು ಕುರಿತು ಅಂತರಜಾಲದಲ್ಲಿ ಲಭ್ಯವಿರುವ ಎಲ್ಲ ಮಾಹಿತಿಯನ್ನೂ ಅಳಿಸಿ ಹಾಕಿದರೂ ಅಚ್ಚರಿ ಇಲ್ಲ.

ಸುಂದರಿಯಾದ, ಪ್ರತಿಭಾವಂತೆಯಾದ ಪೆಂಗ್ ಲಿಯಾನ್ ತನ್ನ 18ನೇ ವಯಸ್ಸಿನಲ್ಲೇ ಚೈನಾದ ಪೀಪಲ್ಸ್ ಲಿಬರೇಷನ್ ಆರ್ಮಿ ಸೇರಿಕೊಂಡಳು. ಆದರೆ ಕಾಲಕ್ರಮೇಣ ಆಕೆ ಚೆನ್ನಾಗಿ ಹಾಡಬಲ್ಲಳು ಎಂದು ಹಿರಿಯ ಅಧಿಕಾರಿಗಳ ಅರಿವಿಗೆ ಬಂತು. ಆಗ ಅವರು ಆಕೆಯನ್ನು ಚೈನಾದ ವಿವಿಧ ಭಾಗಗಳಲ್ಲಿರುವ ಸೈನ್ಯದ ಶಿಬಿರಗಳಿಗೆ ಕಳುಹಿಸಿ ಅಲ್ಲಿದ್ದ ಸೈನಿಕರಲ್ಲಿ ಸ್ಫೂರ್ತಿ ತುಂಬಲು ದೇಶಪ್ರೇಮ, ದೇಶಸೇವೆ, ದೇಶಭಕ್ತಿ ಕುರಿತ ಜಾನಪದ ಹಾಡುಗಳನ್ನು ಹಾಡಲು ನಿಯೋಜಿಸುತ್ತಿದ್ದರು. ಒಂದು ವೆಬ್‌ಸೈಟ್ ಪ್ರಕಾರ 'ತನ್ನ ಜೇನಿನಂತಹ ಕಂಠದಿಂದ ಪೆಂಗ್ ಲಿಯಾನ್ ಸೈನಿಕರನ್ನು ಮೋಡಿ ಮಾಡುತ್ತಿದ್ದರು'. ಹೀಗೆ ಸಾರ್ವಜನಿಕರ ಗಮನಕ್ಕೆ ಬಂದ ಪೆಂಗ್ ಲಿಯಾನ್ ಕಳೆದ ಇಪ್ಪತ್ತು ಹೊಸ ವರ್ಷವನ್ನು ಸ್ವಾಗತಿಸುವ ಟಿವಿ ಕಾರ್ಯಕ್ರಮ ಒಂದರಲ್ಲಿ ಭಾಗವಹಿಸಲಾರಂಭಿಸಿದರು. ಆ ಮೂಲಕ ಚೈನಾ ದೇಶದ ಉದ್ದಗಲಕ್ಕೂ ಪರಿಚಿತರಾದರು. ತನ್ನ ಸೌಂದರ್ಯ ಮತ್ತು ಪ್ರತಿಭೆಯ ಮೂಲಕ ಚೈನಾ ದೇಶದ ಜನರ ಮನಸ್ಸನ್ನು ಸೂರೆಗೊಂಡರು. ಜೊತೆಗೆ ಪೀಪಲ್ಸ್ ಲಿಬರೇಷನ್ ಆರ್ಮಿಯಲ್ಲಿ ಮೇಜರ್ ಜನರಲ್ ಸ್ಥಾನಕ್ಕೆ ಏರಿದವರು.

ಇಪ್ಪತ್ತು ವರ್ಷಗಳ ಹಿಂದೆ ಚೈನಾದಲ್ಲಿ ತಾರಾಪಟ್ಟವನ್ನು ಪೆಂಗ್ ಲಿಯಾನ್ ಅಲಂಕರಿಸಿದ್ದಾಗ





ಆಕೆಯ ಭಾವಿ ಪತಿ ಜಿನ್‌ಪಿಂಗ್ ಯಾರ ಗಮನವನ್ನೂ ಸೆಳೆಯದಿದ್ದ ಸಾಮಾನ್ಯ ರಾಜಕಾರಣಿ ಆಗಿದ್ದ. ಸ್ನೇಹಿತರ ಮೂಲಕ ಅವರಿಬ್ಬರೂ ಭೇಟಿ ಆಗುವುದೆಂದು ನಿರ್ಧಾರವಾದಾಗ ಜಿನ್‌ಪಿಂಗ್ ತನ್ನನ್ನು ತನ್ನ ಸೌಂದರ್ಯ ಮತ್ತು ಪ್ರತಿಭೆಗೆ ಮಾತ್ರ ಇಷ್ಟಪಡದೆ ತನ್ನ ವ್ಯಕ್ತಿತ್ವವನ್ನು ಮೆಚ್ಚಬೇಕೆಂಬ ಕಾರಣಕ್ಕೆ ಪೆಂಗ್ ಲಿಯಾನ್ ಸೈನ್ಯದ ದಗಲೆಬಗಲೇ ಯೂನಿಫಾರ್ಮ್ ಧರಿಸಿ ಹೋಗಿದ್ದರು. ಅವರಿಬ್ಬರ ನಡುವೆ ಪ್ರೇಮಾಂಕುರವಾಗಿ ಕೊನೆಗೆ ಮದುವೆಯಾದರು.

ಚೈನಾದ ಕಮ್ಯೂನಿಸ್ಟ್ ಪಕ್ಷದಲ್ಲಿ ಒಂದೊಂದೇ ಹಂತವನ್ನು ಜಿನ್‌ಪಿಂಗ್ ಏರುತ್ತಾ ಹೋದಂತೆ ಪಿಂಗ್ ಕೂಡ ದೇಶವಿದೇಶಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಕೊಡುತ್ತಾ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಾ ಹೋದರು.

ಆದರೆ ಯಾವಾಗ ತನ್ನ ಪತಿ ಜಿನ್‌ಪಿಂಗ್ ಚೈನಾ ದೇಶದ ಉಪಾಧ್ಯಕ್ಷರಾದರೋ ಆ ಕ್ಷಣದಿಂದ ಪೆಂಗ್ ಲಿಯಾನ್ ಸಾರ್ವಜನಿಕವಾಗಿ ಹಾಡುವುದಿರಲಿ, ಕಾಣಿಸಿಕೊಳ್ಳುವುದನ್ನೂ ಕಡಿತಗೊಳಿಸಲಾರಂಭಿಸಿದರು. ಇದಕ್ಕೆ ಕಾರಣ ಬರುವ ವರ್ಷಗಳಲ್ಲಿ ಜಿನ್‌ಪಿಂಗ್ ಚೈನಾದ ಅಧ್ಯಕ್ಷ ಸ್ಥಾನಕ್ಕೇರುತ್ತಾರೆ, ಆದ್ದರಿಂದ ಅಧ್ಯಕ್ಷನ ಪತ್ನಿಯಾದ ತಾನೂ ಈ ಹಿಂದಿನ ಚೈನಾದ ಅಧ್ಯಕ್ಷರ ಪತ್ನಿಯರಂತೆ ಸಾರ್ವಜನಿಕರ ದೃಷ್ಟಿಯಿಂದ ಕಣ್ಮರೆ ಆಗಬೇಕು ಎಂಬು ಉದ್ದೇಶ.

ನಮ್ಮ ದೇಶದಂತೆ ಚೈನಾ ದೇಶದಲ್ಲೂ ಲಿಂಗ ತಾರತಮ್ಯತೆ ಇದೆ. ಆದರೆ ನಾವು ಇಲ್ಲಿ ಮಂತ್ರಿ, ಮುಖ್ಯಮಂತ್ರಿ, ಪ್ರಧಾನಿ, ರಾಷ್ಟ್ರಪತಿ ತರಹದ ಉನ್ನತ ಸ್ಥಾನಗಳಿಗೂ ಮಹಿಳೆಯರು ಏರಿರುವುದನ್ನು ನೋಡಿದ್ದೇವೆ. ಹಾಗೆಯೇ ನಮ್ಮ ರಾಜಕಾರಣಿಗಳು ಪ್ರಮಾಣವಚನವನ್ನು ಸ್ವೀಕರಿಸುವಾಗ ಅವರ ಪತ್ನಿಯರು ಮತ್ತು ಮಕ್ಕಳು ಕೂಡ ಜನರೆದುರಿಗೆ ಕಾಣಿಸಿಕೊಳ್ಳುತ್ತಾರೆ. ವಿದೇಶಗಳಿಗೆ ನಮ್ಮ ಪ್ರಧಾನಿ ಭೇಟಿ ಕೊಟ್ಟಾಗ ಅವರೊಂದಿಗೆ ಅವರ ಪತ್ನಿಯೂ ಹೋಗುವುದು ವಾಡಿಕೆ. ಆದರೆ ಚೈನಾ ದೇಶದ ರಾಜಕೀಯದಲ್ಲಿ



ಕಂಡಹಾಗೆ

editorlankesh@gmail.com • ಗೌರಿ ಲಂಕೇಶ್

ಇಲ್ಲಿಯವರೆಗೂ ಯಾವ ಮಹಿಳೆ ಮುಖ್ಯ ಹುದ್ದೆಗಳಿಗೆ ಏರಿದ ಉದಾಹರಣೆಯೇ ಇಲ್ಲ. ಹಾಗೆಯೇ ಆ ದೇಶದ ಅಧ್ಯಕ್ಷ, ಪ್ರಧಾನಿ ವಿದೇಶಗಳಿಗೆ ಹೋದಾಗ ಅವರ ಪತ್ನಿಯರು ಹೋಗುವುದು, ಹೋದರೂ ಮಾಧ್ಯಮಗಳ ಮುಂದೆ ಕಾಣಿಸಿಕೊಳ್ಳುವುದು ಅಪರೂಪ. ಅಷ್ಟೇ ಅಲ್ಲ, ಚೈನಾ ದೇಶದ ರಾಜಕೀಯ ನಾಯಕರ ಪತ್ನಿಯರನ್ನು ಒಂದು ರೀತಿಯಲ್ಲಿ ಪರದೆಯ ಹಿಂದೆಯೇ ಇಡಲಾಗುತ್ತದೆ ಎಂದರೂ ತಪ್ಪಾಗಲಾರದು. ಅದಕ್ಕೆ ಮುಖ್ಯ ಕಾರಣ ಚೈನಾದಲ್ಲಿ ಮಹಿಳಾ ನಾಯಕಿಯರನ್ನು 'ದುಷ್ಟರು' ಎಂಬಂತೆ ಪರಿಗಣಿಸುವುದೇ ಆಗಿದೆ. ಉದಾಹರಣೆಗೆ, ಚೈನಾದಲ್ಲಿ ರಾಜಕೀಯ ಕ್ರಾಂತಿಯನ್ನೇ ತಂದ ಮಾವೋ ಅವರ ಪತ್ನಿಗೆ ಏನಾಯಿತು ನೋಡಿ. ಮಾವೋ ತೀರಿಕೊಂಡ ನಂತರ ಆಕೆ ಅಧಿಕಾರವನ್ನು ತನ್ನ ಕೈಗಳಿಗೆ ಪಡೆಯಲು ಯತ್ನಿಸಿದಳು ಎಂಬ ಆರೋಪದ ಮೇಲೆ ಬಂಧಿಸಲಾಯಿತು. ಕೊನೆಗೆ ಆಕೆ ಆತ್ಮಹತ್ಯೆ ಮಾಡಿಕೊಂಡ ಸತ್ತಳು ಎಂದು ಹೇಳಲಾಯಿತು. ಅಷ್ಟೇ ಯಾಕೆ, ಇತ್ತೀಚೆಗೆ ಬೋ ಕ್ಸಿಲೈ ಎಂಬ ಹಿರಿಯ ಚೀನೀ ರಾಜಕಾರಣಿಯ ಪತ್ನಿ ಗುಕೈಲೈ ಎಂಬಾಕೆ ಬ್ರಿಟನ್ನಿನ ಪ್ರಜೆಯೊಬ್ಬನ ಕೊಲೆ ಕೇಸಿನಲ್ಲಿ ಸಿಕ್ಕಿಹಾಕಿಕೊಂಡಿದ್ದಾಳೆ. ಆ ಮೂಲಕ ಮಹಿಳೆಯರಿಗೆ ಅಧಿಕಾರ ಕೊಟ್ಟರೆ ಅವರು ದುಷ್ಟರಾಗುತ್ತಾರೆ ಎಂಬ ಚೀನಿ ಜನರ ಭಾವನೆಗೆ ಮತ್ತಷ್ಟು ಇಂಬು ಕೊಟ್ಟಿದ್ದಾಳೆ.

ಅದೇನೇ ಇರಲಿ, ಪೆಂಗ್ ಲಿಯಾನ್ ಎಂಬ ಸುಂದರ, ಪ್ರತಿಭಾವಂತ ಮಹಿಳೆ ತನ್ನ ಎಲ್ಲ ವೈಯಕ್ತಿಕ ಆಸಕ್ತಿ, ಕಾಳಜಿ, ಜನಪ್ರಿಯತೆ ಎಲ್ಲವನ್ನೂ ಕಡೆಗಣಿಸಿ ಬದುಕಿದ್ದೂ ಸತ್ತಂತೆ ತೆರೆಯ ಹಿಂದಕ್ಕೆ ಸರಿಯುವುದು ಎಲ್ಲಾ ಸೂಕ್ಷ್ಮ ಮನಸ್ಸಿನವರಲ್ಲಿ ಖಂಡಿತವಾಗಿಯೂ ಬೇಸರ ಮೂಡಿಸುತ್ತೆ... ●

ಮಂಗಳೂರಿನ ಜೈಲಿನಲ್ಲೂ ಕೋಮುಗಲಭೆ

ಕೇಸರಿ ಕೋಮುವಾದಿಗಳ ಕಾರ್ಯಕ್ಷೇತ್ರವಾಗಿರುವ ಮಂಗಳೂರಿನಲ್ಲಿ ಮೊನ್ನೆ ಒಂದು ವಿಚಿತ್ರ ಘಟನೆ ನಡೆದಿದೆ. ಅದು ಕೈದಿಗಳಿಗೆ ಸಂಬಂಧಿಸಿದ್ದು. ಹೇಳಿಕೇಳಿ ನೂರು ವರ್ಷದಷ್ಟು ಹಳೆಯದಾದ ಮಂಗಳೂರು ಜೈಲಿನ ಕೆಪಾಸಿಟಿಯೇ ಹೆಚ್ಚೆಂದರೆ 150 ಜನ. ಆದರೆ ಅಲ್ಲಿ ಬಂಧಿಸಿಟ್ಟಿರುವುದು ಸುಮಾರು 250 ಜನರನ್ನು. ಅದಕ್ಕಿಂತ ಮುಖ್ಯವಾಗಿ ಆ ಜೈಲಿನಲ್ಲಿ ಮಂಗಳೂರಿನ ಮುಸಲ್ಮಾನ್ ಭೂಗತಲೋಕದ ರೌಡಿಗಳು ಮತ್ತು ಸಂಘಪರಿವಾರದ ಪಾಪದ ಪುಂಡುಗಳನ್ನು ಒಟ್ಟೊಟ್ಟಿಗೆ ಇಡಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಎರಡೂ ವಿರೋಧಿ ಗುಂಪುಗಳ ನಡುವೆ ಕಚ್ಚಾಟ ನಡೆಯದೇ ಇರುತ್ತದೆಯೇ?

ಎರಡು ವಾರಗಳ ಹಿಂದೆ ಬಕ್ರೀದ್ ಹಬ್ಬ ಬಂತಲ್ಲಾ ಆಗ ಭೂಗತಲೋಕದ ಕುಖ್ಯಾತ ದಾವೂದ್ ಇಬ್ರಾಹಿಂನ ಸಹಚರನಾದ, ಸದ್ಯ ಮಂಗಳೂರು ಜೈಲಿನಲ್ಲಿ ಬಂಧಿ ಆಗಿರುವ ರಶೀದ್ ಮಲಾಬರಿ ತನಗೆ ಮತ್ತು ತನ್ನ ಮಿತ್ರರಿಗೆ ಹೊರಗಿನಿಂದ ಬಿರಿಯಾನಿ ತರಿಸಿದ್ದನಂತೆ. ಬಿರಿಯಾನಿಯ ಘಮಘಮ ವಾಸನೆ ಜೈಲಿನಲ್ಲಿ ಹರಡುತ್ತಿದ್ದಂತೆ ಕೋಮುಗಲಭೆಗಳು ಮತ್ತು ಮಂಗಳೂರಿನ ಹೋಮ್‌ಸ್ಟೇ ಮೇಲೆ ದಾಳಿ ಭಾಗವಹಿಸಿ ಸಿಕ್ಕಿಬಿದ್ದಿರುವ ಹಿಂದೂ ಧರ್ಮದ 'ವೀರಪುತ್ರ'ರ ಮೂಗಿಗೂ ಬಡಿದಿದೆ. ಬೇರೆ ಎಲ್ಲಾ ವಿಷಯದಲ್ಲೂ ಮುಸಲ್ಮಾನರೆಂದರೆ ಕಿಡಿ ಕಾರುವ ಈ ಹಿಂದೂ ಪುಂಡರಿಗೆ ಬಕ್ರೀದ್ ಹಬ್ಬ ಆಚರಿಸುವ ಆಸೆ ಹುಟ್ಟಿತೋ ಏನೋ. ತಮಗೂ ನಾನ್ ವೆಜ್ ಊಟ ಬೇಕೆಂದು ಪಟ್ಟು ಹಿಡಿದರು. ಆಗ ಜೈಲ್ ಅಧಿಕಾರಿ ಅವರಿಗೂ





ಬಿರಿಯಾನಿ ಕೊಡುವಂತೆ ಸೂಚಿಸಿದರು.

ಆದರೆ ಮಾನ ಮರ್ಯಾದೆ ಬಿಟ್ಟು ಮುಸಲ್ಮಾನರಿಂದ ಬಿರಿಯಾನಿ ಪಡೆದು ತಿನ್ನುವುದು ಹೇಗೆ ಎಂಬ ಪ್ರಶ್ನೆ ಹಿಂದೂ ಪುಂಡರ ಮುಂದೆ ಎದ್ದು ನಿಂತಿದೆ. "ರಶೀದ್ ಮಲಾಬರಿ ಓರ್ವ ದೇಶದ್ರೋಹಿ. ಅವನು ತನ್ನ ಹಣದಿಂದ ತರಿಸಿರುವ ಬಿರಿಯಾನಿ ನಮಗೆ ಬೇಡ" ಎಂದರಂತೆ. "ಬೇಡ ಅಂದರೆ ಬಿಡಿ" ಎಂದು ಜೈಲರ್ ಹೇಳಿದರೆ "ಆದರೆ ಅದು ಹೇಗೆ ನೀವು ಊಟದ ವ್ಯವಸ್ಥೆಯಲ್ಲಿ ಕೈದಿಗಳ ನಡುವೆ ಭೇದಭಾವ ಮಾಡುತ್ತೀರಿ. ನಮಗೂ ಹೊರಗಿನಿಂದ ಚಿಕನ್ ತರಿಸಿ" ಎಂದು ಗೋಳುಹೊಯ್ದುಕೊಂಡರಂತೆ. ಜೈಲಧಿಕಾರಿಗೆ ಪಾಪ ಅನ್ನಿಸಿತೋ ಏನೋ, ಅವರಿಗೂ ಬಿರಿಯಾನಿ ತರಿಸಿದರಂತೆ. ಆದರೆ ಇವರು ಎತ್ತಿದ್ದ ಪ್ರಶ್ನೆಗಳು ರಶೀದ್ ಮಲಾಬರಿಯ ಪುಂಡರನ್ನು ಕೆರಳಿಸಿದೆ. ಬಿರಿಯಾನಿ ಹಂಚುವಾಗ ಅವರು ಇವರ ಮೇಲೆ ಬಿದ್ದು, ಇವರು ಅವರ ಮೇಲೆ ಬಿದ್ದು . .. . ಮಾರಾಮಾರಿ ಹೊಡೆದಾಟ ನಡೆದಿದೆ. ಈ ಹೊಡೆದಾಟ ವನ್ನು ತಡೆಯಲು ಹೋದ ಮೂವರು ಪೊಲೀಸರಿಗೂ ಸಮಾ ಪೆಟ್ಟು ಬಿದ್ದಿದೆ.


ಈ ಗುದ್ದಾಟ, ಕಿತ್ತಾಟ ಆದ ಒಂದೇ ವಾರದಲ್ಲಿ ಮಂಗಳೂರು ಜೈಲಿನ ಆವರಣದಲ್ಲಿ ಒಂದು ಚಮತ್ಕಾರವೇ ನಡೆದುಹೋಯಿತು. ಹಳೇ ಜೈಲಿನಿಂದ ಸುಮಾರು 75 ಮೀಟರ್‌ನಷ್ಟು ದೂರದಲ್ಲಿ ಒಂದು ಹೊಸ ಕಟ್ಟಡ ತಲೆ ಎತ್ತಿನಿಂತಿತ್ತಾದರೂ ಅದು ಇನ್ನೂ ಸಂಪೂರ್ಣವಾಗಿರಲಿಲ್ಲ. ಆದರೆ ಹಿಂದೂ-ಮುಸ್ಲಿಮರ ನಡುವೆ ಜೈಲಿನಲ್ಲಿ ಸಮರವೇ ನಡೆದಿದ್ದರಿಂದ ತರಾತುರಿಯಲ್ಲಿ ಆ ಕಟ್ಟಡವನ್ನು ಸಂಪೂರ್ಣಗೊಳಿಸಲಾಯಿತು. ಮಾತ್ರವಲ್ಲ ಹಲವು ಕೈದಿಗಳನ್ನು ಉನ್ನತ ಪೊಲೀಸ್ ಅಧಿಕಾರಿಗಳ ಕಾವಲಿನಲ್ಲಿ ಬಿಗಿಬಂದೋಬಸ್ತಿನಲ್ಲಿ ವರ್ಗಾಯಿಸಲಾಯಿತು. ಅಂದಹಾಗೆ ಈ ಹೊಸ ಕಟ್ಟಡಕ್ಕೆ ತಗುಲಿದ ವೆಚ್ಚ ಬರೋಬ್ಬರಿ ನಾಲ್ಕು ಕೋಟಿ ರೂಪಾಯಿಗಳು.

ಈಗ ಉಳಿದಿರುವ ಪ್ರಶ್ನೆ ಯಾವುದೆಂದರೆ ಹೊಸ ಕಟ್ಟಡಕ್ಕೆ ವರ್ಗ ಮಾಡಿದ ಕೈದಿಗಳೆಲ್ಲ ಒಂದೇ ಧರ್ಮಕ್ಕೇ ಸೇರಿದವರೋ ಅಥವಾ ಹಳೆ ಮತ್ತು ಹೊಸ - ಎರಡೂ ಕಟ್ಟಡಗಳಲ್ಲಿ ಎರಡೂ ಧರ್ಮದವರು ಇದ್ದಾರೋ. ಯಾಕೆಂದರೆ ಬೇರೆ ಬೇರೆ ಕಡೆ ಬೇರೆಬೇರೆ ಧರ್ಮದವರನ್ನು ಹಾಕಲಾಗಿದೆ ಎಂದಾದರೆ ಸಂಘಪರಿವಾರದ ಅನಿಷ್ಟ ಕೋಮುವಾದ ಬಿಜೆಪಿ ಆಡಳಿತದಲ್ಲಿ ಬಂದೀಖಾನೆಗಳಿಗೂ ಹೊಕ್ಕಿದೆ ಎಂದು ಸಾಬೀತಾಗುತ್ತದೆ ಅಲ್ಲವೆ?! ●





ಗಡ್ಕರಿ ಮನೆಯಲ್ಲಿ ಹೆಣವಾದ ಏಳು ವರ್ಷ ವಯಸ್ಸಿನ ಯೋಗಿತಾ



ಗಡ್ಕರಿ ಮನೆಯಲ್ಲಿ ಪುಟ್ಟ ಬಾಲೆಯನ್ನು ಕೊಂದದ್ದು ಯಾರು?

ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿಯ ಮೇಲೆ ಮತ್ತೊಂದು ಕೇಸು ದಾಖಲಾಗಿದೆ. ಇದು ಮಾಮೂಲಿ ಭ್ರಷ್ಟಾಚಾರದ ಕೇಸಲ್ಲ; ಅತ್ಯಂತ ಹೇಯವಾದದ್ದು; ಅದು ಏಳು ವರ್ಷದ ಬಾಲಕಿಯೊಬ್ಬಳ ಮೇಲೆ ಅತ್ಯಾಚಾರವೆಸಗಿ ಕೊಲೆಗೈದ ಕೇಸಿಗೆ ಸಂಬಂಧಿಸಿದ್ದು. ಈ ನೀಚಕೃತ್ಯ ನಡೆದದ್ದು 2009ರ ಮೇ 19ರಂದು, ಅಂದರೆ ಇಲ್ಲಿಗೆ ಮೂರೂವರೆ ವರ್ಷಗಳ ಹಿಂದೆ. ಕೃತ್ಯ ನಡೆದ ಸ್ಥಳ ಬೇರೆಲ್ಲೋ ಅಲ್ಲ, ನಾಗಪುರದ ಮಹಲ್ ಏರಿಯಾದಲ್ಲಿರುವ ನಿತಿನ್ ಗಡ್ಕರಿಯ ಸ್ವಂತ ಮನೆಯ ಆವರಣದಲ್ಲೇ!

ಈ ನತದೃಷ್ಟ ಬಾಲಕಿ ಯೋಗಿತಾಳ ತಾಯಿ ವಿಮಲ ನಿತಿನ್ ಗಡ್ಕರಿಯ ಮನೆಯಲ್ಲಿ ಮನೆಗೆಲಸ ಮಾಡುತ್ತಾಳೆ. ಈ ಘೋರಕೃತ್ಯ ನಡೆದ ದಿನ ಮಧ್ಯಾಹ್ನ ಸುಮಾರು ಒಂದು ಗಂಟೆಯ ವೇಳೆಗೆ ತನ್ನ ಮಗಳು ಯೋಗಿತಾಳನ್ನು ಶಾಲೆಯಿಂದ ಕರೆತಂದು ಗಡ್ಕರಿ ಮನೆಯ ಆವರಣದಲ್ಲಿ ಆಡಲು ಬಿಟ್ಟು, ಹತ್ತಿರದ ಮನೆಯೊಂದರಲ್ಲಿ ಕೆಲಸಕ್ಕೆಂದು ವಿಮಲ ಹೋಗಿದ್ದಳು. ಅಲ್ಲೇ ಇದ್ದ ಗಡ್ಕರಿ ಕಾರಿನ ಡ್ರೈವರ್ ಮತ್ತು ಪೊಲೀಸ್ ಗಾರ್ಡ್‌ಗಳು ಹೇಗೂ ಯೋಗಿತಾಗೆ ಚೆನ್ನಾಗಿ ಪರಿಚಿತರಾಗಿದ್ದರಿಂದ ತನ್ನ ಮಗಳನ್ನು ನೋಡಿಕೊಳ್ಳುವಂತೆ ಅವರನ್ನು ವಿಮಲ ವಿನಂತಿಸಿದ್ದಳು. ನಂತರ ಸಂಜೆ ನಾಲ್ಕು ಗಂಟೆಗೆ ವಾಪಸ್ ಬಂದು ನೋಡಿದಾಗ ಆಕೆಯ ಮುದ್ದಿನ ಮಗಳು ಕಾಣಲಿಲ್ಲ, ಗಾರ್ಡ್‌ಗಳನ್ನು ಕೇಳಿದ್ದಕ್ಕೆ, ಇಲ್ಲೇ ಎಲ್ಲೋ ಆಟವಾಡುತ್ತಿರಬೇಕು ಎಂದರು. ಮತ್ತೆ ಸಂಜೆ ಕರೆದುಕೊಂಡು ಹೋಗೋಣ ಎಂದುಕೊಂಡು ಮತ್ತೊಂದು ಕೆಲಸ ಮುಗಿಸಿಕೊಂಡು ವಾಪಸ್ ಬಂದಳು. ಆಗ ಸಂಜೆ ಸುಮಾರು 6.30 ಆಗಿದ್ದಿರಬೇಕು.

ಮಗಳನ್ನು ಹುಡುಕಿಕೊಂಡು ಬಂದ ವಿಮಲಳಿಗೆ ಮನೆಯ ಆವರಣದಲ್ಲಿದ್ದ ಗಡ್ಕರಿಯ ಕಾರಿನ ಡ್ರೈವರ್ ಮನೋಹರ್ ಪೆಂಢ್ಸೆ 'ಯೋಗಿತಾ ಕಾರಿನಲ್ಲಿ ನಿದ್ರಿಸುತ್ತಿದ್ದಾಳೆ' ಎಂದು ತಿಳಿಸಿದ. ಎಂದಿಗೂ ಕಾರಿನ ಕಡೆ ತಲೆಹಾಕದ ಮಗಳು ಕಾರಿನಲ್ಲಿ ಮಲಗಿದ್ದಾಳೆ ಎಂಬ ವಿಷಯ ಕೇಳಿ ಆಶ್ಚರ್ಯಕ್ಕೊಳಗಾದ ತಾಯಿ ಕಾರಿನತ್ತ ಧಾವಿಸಿದಳು. ಆದರೆ ಅಲ್ಲಿ ಕಂಡು ಬಂದ ದೃಶ್ಯ ಅತ್ಯಂತ ಭಯಾನಕವಾಗಿತ್ತು,

ಮಗುವಿನ ಮುಖ ಊದಿಕೊಂಡಿತ್ತು, ತುಟಿ ಮತ್ತು ಕೆನ್ನೆಯ ಮೇಲೆ ಗಾಯಗಳಾಗಿದ್ದವು. ಮೂಗಿನಿಂದ ರಕ್ತ ಒಸರುತ್ತಿತ್ತು, ಮಗುವಿನ ತೊಡೆ ಮತ್ತು ಅಂಡರ್‌ವೇರ್‌ನಲ್ಲಿ ರಕ್ತದ ಕಲೆಗಳಿದ್ದವು. ದೇಹದಲ್ಲಿ ಹಲವಾರು ಕಡೆ ಹಸಿ ಗಾಯಗಳಿದ್ದವು. ಮಗುವನ್ನು ಎಬ್ಬಿಸಲು ಪ್ರಯತ್ನಿಸಿದ ತಾಯಿಗೆ ತನ್ನ ಮಗು ಜೀವಂತವಾಗಿಲ್ಲ ಎಂದು ತಿಳಿದೊಡನೆ ರೋದಿಸಲು ಶುರು ಮಾಡಿದಳು. ಆದರೆ ಅಷ್ಟರಲ್ಲಾಗಲೇ ಸೈಕಲ್ ರಿಕ್ಷಾವೊಂದನ್ನು ಕರೆಸಿದ ಕಾರಿನ ಡ್ರೈವರ್ ಮತ್ತು ಗಡ್ಕರಿಯ ಆಪ್ತ ಸಹಾಯಕ ಸುಧೀರ್ ವಿಮಲಾ ತನ್ನ ಮಗುವನ್ನು ರಿಕ್ಷಾದಲ್ಲಿ ಹಾಕಿಕೊಂಡು ಹೋಗುವಂತೆ ಒತ್ತಾಯಿಸಿ ಗಡ್ಕರಿಯ ಮನೆಯ ಆವರಣದಿಂದಲೇ ಅವರಿಬ್ಬರನ್ನು ಹೊರಕ್ಕೆ ಅಟ್ಟಿಬಿಟ್ಟರು.

ತಾಯಿ ವಿಮಲ ಹೇಳುವ ಪ್ರಕಾರ ಗಡ್ಕರಿಯ ಮನೆಯ ಆವರಣಕ್ಕೆ ಈಕೆ ಪ್ರವೇಶಿಸಿದಾಗ ಗಡ್ಕರಿಯ ನೆರೆಯವರಾದ ಡಾಕ್ಟರ್ ಪೆರಾಂಜೆ ಎಂಬುವವರು ಕೂಡಾ ಮಗುವಿನ ಬಳಿ ಇದ್ದರು. ವಿಮಲ ಗೇಟನೊಳಗೆ ಪ್ರವೇಶಿಸುತ್ತಿದ್ದಂತೆ ಅವರು ಅಲ್ಲಿಂದ ಜಾಗ ಖಾಲಿ ಮಾಡಿದರು. ಗಡ್ಕರಿಯಂಥ ಪ್ರಭಾವಿ ವ್ಯಕ್ತಿಗಳನ್ನು ಎದುರು ಹಾಕಿಕೊಳ್ಳುವ ಉಸಾಬರಿ ಅವರಿಗೆ ಬೇಕಿರಲಿಲ್ಲ, ಅಷ್ಟು ಮಾತ್ರವಲ್ಲದೆ ನಿತಿನ್ ಗಡ್ಕರಿಯ ಮಗ ನಿಖಿಲ್ ಗಡ್ಕರಿ ಬಾಲ್ಕನಿಯಲ್ಲಿ ನಿಂತು ಎಲ್ಲವನ್ನೂ ವೀಕ್ಷಿಸುತ್ತಿದ್ದ.





ಕೋಟ್ಯಾಧಿಪತಿ ಗಡ್ಕರಿಯ ಟೊಣಪ ಪುತ್ರ ನಿಖಿಲ್ ಮದುವೆಯಲ್ಲಿ ಚಡ್ಡಿಗಳ ನಾಯಕ ಅಡ್ವಾನಿ ಮತ್ತು ಮತ್ತು ನರಹಂತಕ ನರೇಂದ್ರ ಮೋದಿ

ಈ ಘಟನೆ ನಡೆದಾಗ ನಿತಿನ್ ಗಡ್ಕರಿ ಊರಿನಲ್ಲಿರಲಿಲ್ಲ, ಮುಂಬೈನಿಂದ ನಾಗಪುರಕ್ಕೆ ರಾತ್ರಿ 8ರ ವಿಮಾನದಲ್ಲಿ ಬಂದಿಳಿದರು. ಗಡ್ಕರಿಯ ಪತ್ನಿ ಕೂಡ ಕಾರ್ಯನಿಮಿತ್ತ ಬೇರೊಂದು ಊರಿಗೆ ಹೋಗಿದ್ದರು. ಗಡ್ಕರಿಯ ಇಬ್ಬರು ಗಂಡು ಮಕ್ಕಳು ಮಾತ್ರ ಮನೆಯಲ್ಲೇ ಇದ್ದರೆಂದು ಗಡ್ಕರಿಯ ಆಪ್ತ ಸಹಾಯಕ ಸುಧೀರ್ ದಿವೆಯೇ ಒಪ್ಪಿಕೊಂಡಿದ್ದ.

ಮಗುವಿನ ಶವವನ್ನು ಕಂಡು ವಿಮಲಳ ನೆರೆಹೊರೆಯವರು ಆಕ್ರೋಶಗೊಂಡರು. ಕೂಡಲೇ ಪೊಲೀಸ್ ಕಂಪ್ಲೈಂಟ್ ಕೊಡಲೆಂದು ಹತ್ತಿರದ ಕೊತ್ವಾಲಿ ಪೊಲೀಸ್ ಸ್ಟೇಷನ್‌ಗೆ ತೆರಳಿದರು. ಆಗ ಸಂಜೆ ಸುಮಾರು 7.30. ಆದರೆ ಪೊಲೀಸರು ಕಂಪ್ಲೈಂಟ್ ತೆಗೆದುಕೊಳ್ಳಲು ನಿರಾಕರಿಸಿದರು. ಇಲ್ಲದ ಸಬೂಬು ಹೇಳುತ್ತಾ ಕಾಲಹರಣ ಮಾಡಿದರು. ಯೋಗಿತಾಳ ಕುಟುಂಬ ವರ್ಗದವರು ಹಾಗೂ ಕೆಲವು ಸಂಘ ಸಂಸ್ಥೆಗಳು ಎಫ್‌ಐಆರ್ ದಾಖಲಿಸದ ಹೊರತು ಠಾಣೆಯಿಂದ ಹೋಗುವುದಿಲ್ಲವೆಂದು ಹಠಹಿಡಿದ ಪರಿಣಾಮವಾಗಿ ವಿಧಿಇಲ್ಲದೆ 20ನೇ ತಾರೀಕು ಬೆಳಗಿನ ಜಾವ 2.30ರ ವೇಳೆಗೆ ಎಫ್‌ಐಆರ್ ದಾಖಲಿಸಿದರು. ಇದು ಕೊಲೆ ಕೇಸು ಅಂತ ಸಂಬಂಧಿಸಿದವರು ಎಷ್ಟೇ ಬಡಕೊಂಡರೂ ಪೊಲೀಸರು ದಾಖಲಿಸಿದ್ದು ಮಾತ್ರ ಆಕಸ್ಮಿಕ ಸಾವು ಎಂದು. ಅಲ್ಲಿಗೆ ಈ ಕೇಸಿನ ಹಣೆಬರಹ ಏನಾಗಬೇಕೆಂಬುದನ್ನು ಪೊಲೀಸರು ಮೊದಲೇ ನಿರ್ಧರಿಸಿಬಿಟ್ಟಿದ್ದರು ಎಂಬುದು ಸ್ಪಷ್ಟ.




ಯೋಗಿತಾಳ ಫೋಟೋದೊಂದಿಗೆ ಆಕೆಯ ಅಕ್ಕ ಕಿರಣ್

ನಂತರ ಸ್ಥಳ ಪಂಚನಾಮೆ ಮಾಡಿದಾಗ ಅಲ್ಲಿ ಹಾಜರಿದ್ದ ಬಂಧುಗಳು ಮತ್ತು ನೆರೆಹೊರೆಯವರು ಮಗುವಿನ ಮೈಮೇಲಿದ್ದ ಗಾಯದ ಗುರುತುಗಳ ಹಾಗೂ ರಕ್ತದ ಕಲೆಗಳ ಬಗ್ಗೆ ತಿಳಿಸಿರುವುದಾಗಿ ಪಂಚನಾಮೆಯಲ್ಲಿ ದಾಖಲಾಗಿದೆ. ಪೋಸ್ಟ್‌ಮಾರ್ಟಂ ವರದಿಯಲ್ಲೂ ಮಗುವಿನ ಮೈಮೇಲೆ 17 ಗಾಯಗಳಿದ್ದುದಾಗಿಯೂ, ಅವೆಲ್ಲವೂ ಮಗುವಿನ ಸಾವು ಸಂಭವಿಸುವ ಮುಂಚೆಯಷ್ಟೇ ಆದ ಹೊಸ ಗಾಯಗಳೆಂತಲೂ ಸ್ಪಷ್ಟವಾಗಿ ಒಪ್ಪಿಕೊಳ್ಳಲಾಗಿದೆ. ಆದರೆ ಅಂತಿಮ ಅಭಿಪ್ರಾಯದಲ್ಲಿ ಮಾತ್ರ "ಲೈಂಗಿಕ ಅತ್ಯಾಚಾರ ನಡೆದಿದೆ ಎಂದು ಹೇಳಲು ಸಾಧ್ಯವಿಲ್ಲ, ಮಗುವಿನ ಮರ್ಮಾಂಗದಲ್ಲಿ ಆಗಿದ್ದ ಗಾಯ ಹಾಗೂ ಊತ ಸ್ವಚ್ಛತೆಯ ಕೊರತೆಯಿಂದ ಆಗಿರುವ ಸಾಧ್ಯತೆಯಿದೆ. ನೈರ್ಮಲ್ಯದ ಕೊರತೆ ಇರುವ ಬಡ ಮಕ್ಕಳಲ್ಲಿ ಇದು ಸಾಮಾನ್ಯ" ಎಂಬ ಅತ್ಯಂತ ನಾಚಿಕೆಗೇಡಿನ, ಅಮಾನುಷವಾದ ವರದಿಯನ್ನು ನೀಡಲಾಗಿದೆ.


ಪೊಲೀಸರ ಪ್ರಕಾರ ಅಂದು ಮಗು ಇದ್ದಕ್ಕಿದ್ದಂತೆ ಕಾರಿನೊಳಕ್ಕೆ ಪ್ರವೇಶಿಸಿಬಿಟ್ಟಿತು; ಕಾರಿನ ಡೋರ್ ಲಾಕ್ ಆಗಿರಲಿಲ್ಲ, ಮಗು ಪ್ರವೇಶಿಸಿದ ನಂತರ ಅತ್ಯಾಧುನಿಕ ಕಾರಾದ್ದರಿಂದ ಆಟೋಮ್ಯಾಟಿಕ್ ಆಗಿ ಲಾಕ್ ಆಗಿಬಿಟ್ಟಿತು. ಕಾರಿನಲ್ಲಿ ಸಿಕ್ಕಿಬಿದ್ದ ಮಗು ಗಾಳಿಯ ಕೊರತೆಯಿಂದ ಉಸಿರುಗಟ್ಟಿ ಸತ್ತಿದೆ. ಇದು ಪೊಲೀಸರು ಬಿಡುತ್ತಿರುವ ಚಂದಮಾಮಾ ಕತೆ. ಹಾಗಾದರೆ ಮಗುವಿನ ದೇಹದ ಮೇಲೆ, ತುಟಿಯ ಮೇಲೆ, ಮರ್ಮಾಂಗದಲ್ಲಿ ರಕ್ತ ಗಾಯಗಳು ಆಗಿದ್ದಾದರೂ ಹೇಗೆ? ಎಂಬ ಪ್ರಶ್ನೆಗೆ ಪಾತಕಿಗಳ ರಕ್ಷಣೆಗೆ ನಿಂತಿರುವ ಪೊಲೀಸ್ ಅಧಿಕಾರಿಗಳಿಂದ ಯಾವ ಉತ್ತರವೂ ಬಂದಿಲ್ಲ.

ಯಾವುದೇ ಆಮಿಷಗಳಿಗೆ ಬಲಿಯಾಗದೆ ನ್ಯಾಯಕ್ಕಾಗಿ ದೃಢವಾಗಿ ನಿಂತ ಕುಟುಂಬವನ್ನು ಮಣಿಸಲು ಗೂಂಡಾಗಳು ಅಖಾಡಕ್ಕೆ ಇಳಿದರು. ನಡುರಾತ್ರಿಯಲ್ಲಿ ಅಶೋಕ್-ವಿಮಲ ಮನೆಗೆ ಪೊಲೀಸ್ ವೇಷದಲ್ಲಿ ನುಗ್ಗಿದ ಆಗಂತುಕರು ಕೇಸು ವಾಪಸ್ ಪಡೆಯದಿದ್ದರೆ ಉಳಿದ ಇಬ್ಬರು ಹೆಣ್ಣುಮಕ್ಕಳ ಸಮೇತ ಇಡೀ ಕುಟುಂಬವನ್ನೇ ಕೊಂದು ಹಾಕುವುದಾಗಿ ಬೆದರಿಕೆ ಹಾಕಿದರು. ಇದರಿಂದ ಭಯಭೀತರಾದ ಯೋಗಿತಾಳ ಕುಟುಂಬವರ್ಗದವರು ಪೊಲೀಸರಿಗೆ ದೂರು ಕೊಟ್ಟರೆ ಅಂಥಾ ಯಾವುದೇ ಘಟನೆ ನಡೆದಿಲ್ಲ ಎಂದು ಹೇಳಿ ಪೊಲೀಸರು ಕೈ ಎತ್ತಿದ್ದಾರೆ. ಹೀಗಿರುವಾಗ ಇನ್ನೂ ಈ ಬಡ ಕುಟುಂಬಕ್ಕೆ ನಾಗಪುರ ಪೊಲೀಸರಿಂದ ರಕ್ಷಣೆ ಸಿಗುತ್ತದೆ ಎಂದು ನಿರೀಕ್ಷಿಸಲಾಗುತ್ತದೆಯೆ?



ರೋದಿಸುತ್ತಿರುವ ಯೋಗಿತಾ ತಾಯಿ ವಿಮಲ

ಈ ಕೇಸನ್ನು ಪೊಲೀಸರು ಹಳ್ಳ ಹಿಡಿಸುತ್ತಿರುವುದರಿಂದ ಬಾಲಕಿಯ ತಂದೆ ಅಶೋಕ್ (ಈತ ಸಣ್ಣ ಹೋಟೆಲ್ ಒಂದರಲ್ಲಿ ಕೆಲಸ ಮಾಡುತ್ತಾನೆ) 'ಮನೆಗೆಲಸಗಾರರ ಒಕ್ಕೂಟ'ದ ಅಧ್ಯಕ್ಷ ಜಮ್ಮು ಆನಂದ್ ಮತ್ತು ಕಿಶೋರ್ ಇಂಗ್ಲೆ ಸಹಾಯದೊಂದಿಗೆ ಹೈಕೋರ್ಟ್‌ನಲ್ಲಿ ದಾವೆ ಹೂಡಿದ. ನಾಗಪುರ ಪೊಲೀಸರು ಈ ಕೇಸಿನಲ್ಲಿ ಅಪರಾಧಿಗಳನ್ನು ರಕ್ಷಿಸಲು ಸುಳ್ಳಿನ ಕಂತೆಗಳನ್ನು ಕಟ್ಟುತ್ತಿದ್ದಾರೆಂದು ಆಧಾರ ಸಮೇತವಾಗಿ ಕೋರ್ಟಿನ ಗಮನಕ್ಕೆ ತಂದರು. ಆರೋಪಿಗಳು ಬಹಳ ಪ್ರಭಾವಶಾಲಿ ವ್ಯಕ್ತಿಗಳಾದ್ದರಿಂದ ಈ ಕೇಸಿನ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂದು ಮನವಿ ಮಾಡಿದರು. ಮಹಾರಾಷ್ಟ್ರ ಪೊಲೀಸರಿಗೆ ಛೀಮಾರಿ ಹಾಕಿದ ನಾಗಪುರ ಹೈಕೋರ್ಟ್ ಪೀಠ ಈ ಕೇಸಿನ ಬಗ್ಗೆ ತನಿಖೆ ನಡೆಸುವಂತೆ ಸಿಐಡಿಗೆ ವಹಿಸಿತು. ವಿಷಯ ಕೋರ್ಟ್ ಮೆಟ್ಟಲೇರಿ ವಿಚಾರಣೆ ಬಿರುಸು ಪಡೆದುಕೊಂಡಂತೆ



ನಾಗಪುರದ ಹೈಕೋ

ಪೊಲೀಸರು ಎಫ್‌ಐಆರ್‌ನಲ್ಲಿ ಆಕಸ್ಮಿಕ ಸಾವು ಎನ್ ಬದಲಿಗೆ ಕೊಲೆ ಕೇಸನ್ನು ದಾಖಲಿಸಿದರು. ಜೊತೆಗೆ ಸ ನಾಶದ ಸೆಕ್ಷನ್ 201ನ್ನೂ ನಮೂದಿಸಿದರು. ಆ ಆರೋಪಿತರು ಮಾತ್ರ ಅನಾಮಧೇಯ ವ್ಯಕ್ತಿಗಳು.

ಸಿಐಡಿಗೆ ಬಂದ ನಂತರವಾದರೂ ಕೇಸು ಸರಿದಾರಿಯ ನಡೆಯಬಹುದು ಎಂದು ನಿರೀಕ್ಷಿಸಿದ್ದವರಿಗೆ ಅಲ್ಲಿಯ ನಿರಾಶೆ ಕಾದಿತ್ತು, ಕೇಸಿನ ಬಗ್ಗೆ ಹತ್ತಾರು ಮಂದಿ ಸಾಕ್ಷ್ಯಗಳನ್ನೇ ದಾಖಲಿಸಿದ ಸಿಐಡಿಯವರು ಇದು ಆಕ ಸಾವು ಎಂಬ ತೀರ್ಮಾನಕ್ಕೆ ಬಂದು ಮತ್ತೆ ತನಿ ಪೂರ್ಣಗೊಂಡಿರುವುದರಿಂದ ಈ ಕೇಸನ್ನು ಮುಕ್ತಾ ಮಾಡಬೇಕೆಂದು ನಿರ್ಣಯಿಸಿದರು.


ಆದರೆ ನಾಗಪುರ ಪೀಠದಲ್ಲಿ ಕುಳಿತಿದ್ದ ಜಡ್ಜ್ ಸಿ ವರದಿಯನ್ನು ಸಾರಾಸಗಟಾಗಿ ತಿರಸ್ಕರಿಸಿ ಹೊಸದಾಗಿ ತನಿ ಆದೇಶಿಸಿದ್ದಾರೆ. ಅಷ್ಟು ಮಾತ್ರವಲ್ಲ; ನಿತಿನ್ ಗಡ್ಕರಿಯ ಈ ಕೇಸಿನಲ್ಲಿ ಪ್ರತಿವಾದಿಯಾಗಿಸುವಂತೆ ಫಿರ್ಯಾದುದಾರ ಸೂಚಿಸಿದ್ದಾರೆ. ಅದರಂತೆ ನಿತಿನ್ ಗಡ್ಕರಿಗೆ ನೋಟ ಜಾರಿ ಆಗಿದೆ. ಮುಗ್ಧ ಬಾಲಕಿಗಾದ ಅನ್ಯಾಯದ ವಿ ಜೆಎಂಎಫ್‌ಸಿ ನ್ಯಾಯಾಲಯ ಮತ್ತು ಹೈಕೋ

ನ್ಯಾಯಪೀಠಗಳು ಇಷ್ಟೊಂದು ನಿಷ್ಠುರವಾಗಿ ನಡೆದುಕೊ ಮತ್ತೊಂದು ಬಲವಾದ ಕಾರಣವಿದೆ. ಅದೇನೆಂ ನ್ಯಾಯಾಧೀಶರ ಪೀಠದಲ್ಲಿ ಕುಳಿತಿರುವುದು ನೀಲಿ ಪಾಟೀಲ್ ಮತ್ತು ಸಾಧನಾ ಜಾಧವ್ ಎಂಬ ಇ ಮಹಿಳಾ 'ನ್ಯಾಯಮೂರ್ತಿಗಳು.


ಪುಣ್ಯಕ್ಕೆ ಈ ಕೇಸು ಇನ್ನೂ ಜೀವಂತವಾಗಿದೆ. ಗಡ್ಕರಿ ಹಿಂದೆ ಇಡೀ ಬಿಜೆಪಿ ಪಾರ್ಟಿ ಇದೆ. ಸಂಘ ಪರಿವಾರ ಸಾವಿರಾರು ಕೋಟಿಗಳ ಹಣದ ಥೈಲಿ ಇದೆ. ಪೊಲೀಸ್ ಇಲಾಖೆಯೇ ಆತನ ರಕ್ಷಣೆಗೆ ನಿಂತಿದೆ. ಅ ನತದೃಷ್ಟೆ ಯೋಗಿತಾಳ ಪರವಾಗಿ ಯಾರಿದ್ದಾರೆ?


■ ದೊಡ್ಡಿಪಾಳ್ಯ ನರಸಿಂಹಮೂ


ಕಾಂಗ್ರೆಸ್‌ನತ್ತ ವಲಸೆ ಹಕ್ಕಿಗಳು: ರಾಜ್ಯದಲ್ಲಿ ಕಾಂಗ್ರೆಸ್ ಮೇಲುಗೈ?




ಕರ್ನಾಟಕದಲ್ಲಿ ಮುಂದಿನ ವಿಧಾನ ಸಭೆ ಚುನಾವಣೆಗಳು ಅದ್ಯಾವಾಗ ನಡೆಯುತ್ತದೋ ಇನ್ನೂ ಗೊತ್ತಿಲ್ಲ, ಆದರೆ ಈಗಾಗಲೇ ಕಾಂಗ್ರೆಸ್ ಪಕ್ಷಕ್ಕೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ವಲಸೆ ಹೋಗಲು ಆರಂಭಿಸಿದ್ದಾರೆ. ಅಂದರೆ ರಾಜ್ಯದಲ್ಲಿ ಕಾಂಗ್ರೆಸ್ ಪರ ಒಂದು ರೀತಿಯ ಅಲೆ ಕಾಣಿಸುತ್ತಿದೆ ಎಂಬುದು ಈ ವಲಸೆ ನಾಯಕರ ರಾಜಕೀಯ ಲೆಕ್ಕಾಚಾರ ಇರಬೇಕು ಎಂದಾಯಿತು.









ಇದೇ ರೀತಿಯ ವಾತಾವರಣ ಕಳೆದ ಬಾರಿ ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಚುನಾವಣೆಗೆ ಹೊರಟಾಗ ರಾಜ್ಯಾದ್ಯಂತ ಕಾಣಿಸಿತ್ತು. ಕುಮಾರಸ್ವಾಮಿ ಯಡ್ಡಿಯ ಕೈಗೆ ಅಧಿಕಾರವನ್ನು ಕೊಡದೆ ವಚನಭ್ರಷ್ಟರಾಗಿದ್ದರಿಂದ ಈ ಬಾರಿ ಒಂದು ಅವಕಾಶವನ್ನು ಯಡಿಯೂರಪ್ಪ ನೇತೃತ್ವದ ಬಿಜೆಪಿಗೆ ಕೊಟ್ಟು ನೋಡೋಣ ಎಂದು ರಾಜಕೀಯ ಮುಖಂಡರು, ಮತದಾರರು ಚುನಾವಣೆಯ ಮೊದಲೇ ಮಾತನಾಡಿಕೊಳ್ಳುತ್ತಿದ್ದರು. ಈಗ ಅಂತಹದ್ದೇ ಅನುಕಂಪ ಕಾಂಗ್ರೆಸ್ ಪರವಾಗಿ ಕಾಣಿಸುತ್ತಿದೆ.

ಸದ್ಯಕ್ಕೆ ಕಾಂಗ್ರೆ ಹಿಂದಿನಷ್ಟು ಶಕ್ತಿಯುತವಾಗಿ ಕಾಣುತ್ತಿಲ್ಲವಾದರೂ ಹಿರಿಯ ನಾಯಕ ಎಸ್.ಎಂ. ಕೃಷ್ಣ ರಾಜ್ಯ ರಾಜಕೀಯಕ್ಕೆ ಮರಳಿದ ನಂತರ ಆ ಪಕ್ಷದ ಒಕ್ಕಲಿಗ ವಲಯದಲ್ಲಿ ಒಂದು ರೀತಿಯ ಸಂಚಲನ ಕಾಣಿಸುತ್ತಿದೆ. ಇದಕ್ಕೆ ಪೂರಕವಾಗಿ ಬಿಜೆಪಿಯಲ್ಲಿನ ಒಳಜಗಳ ಮತ್ತು ಕಚ್ಚಾಟದಿಂದ ಆ ಪಕ್ಷದಲ್ಲಿರುವವರೆಲ್ಲ ರೋಸಿಹೋಗಿದ್ದಾರೆ. ಆದರೆ ಸದ್ಯದಲ್ಲೇ ಅಧಿಕೃತವಾಗಿ ಯಡಿಯೂರಪ್ಪ ಆರಂಭಿಸಲಿರುವ ಹೊಸ ಪಕ್ಷವನ್ನು ಸೇರಲು ಬಿಜೆಪಿಯಲ್ಲಿರುವ ಚೆಡ್ಡಿಗಳಿಗೆ ಧೈರ್ಯ ಸಾಲದೇ ಇನ್ನೂ ಮೀನಾಮೇಷ ಎಣಿಸುತ್ತಿದ್ದಾರೆ. ಯಡಿಯೂರಪ್ಪನ ಜೊತೆ ಹೋದರೆ ನಮಗೆ ಗೆಲುವು ಸಿಗುತ್ತದೆಯೇ ? ಒಂದು ವೇಳೆ ಗೆದ್ದರೆ ಅಧಿಕಾರ ಸಿಗುತ್ತದೆಯೇ? ಎಂದು ಯಡ್ಡಿಯ ಹಿಂಬಾಲಕರು ಲೆಕ್ಕಾಚಾರ ಹಾಕುತ್ತಿದ್ದಾರೆ. ಇದೇ ಹೊತ್ತಿನಲ್ಲಿ ಜಾತ್ಯತೀತ ಜನತಾದಳದಲ್ಲಿ ಅಪ್ಪ-ಮಕ್ಕಳ ಕಾಟವನ್ನು ತಾಳಲಾರದೆ, ಅದನ್ನು ಬಹಿರಂಗವಾಗಿ ಹೇಳಲು ಸಾಧ್ಯವಾಗದೇ ನೊಂದಿರುವ ಅತೃಪ್ತ ನಾಯಕರೂ ಆ ಪಕ್ಷದಲ್ಲಿದ್ದಾರೆ.

ಹೀಗೆ ಇತರೆ ಪಕ್ಷಗಳಲ್ಲಿರುವ ಅತೃಪ್ತ ಆತ್ಮಗಳು ತಮ್ಮ ರಾಜಕೀಯ ಭವಿಷ್ಯವನ್ನು ಅರಸುತ್ತಾ ಕಾಂಗ್ರೆಗೆ ವಲಸೆ ಹೋಗುವ ಮಾತುಗಳು ಕೇಳಿಬರುತ್ತಿವೆ. ಆಡಳಿತರೂಢ ಬಿಜೆಪಿ ಪಕ್ಷದಲ್ಲಿರುವ ಅನೇಕ ಮಂತ್ರಿಗಳ ಮತ್ತು ಸುಮಾರು ಎರಡು ಡಜನ್‌ಗೂ ಹೆಚ್ಚು ಶಾಸಕರು ಕಾಂಗ್ರೆ ಪಕ್ಷವನ್ನು ಸೇರಲು ತುದಿಗಾಲಲ್ಲಿ ನಿಂತಿದ್ದಾರೆ ಎಂದು ಗುಪ್ತಚರ ಇಲಾಖೆ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್‌ಗೆ ವರದಿ ನೀಡಿದೆಯಂತೆ. ಉದಾಹರಣೆಗೆ ಹೋದಬಾರಿ ಹೊಸಕೋಟೆಯಿಂದ ಸ್ಪರ್ಧಿಸಿ ಗೆದ್ದಿದ್ದ ಬಚ್ಚೇಗೌಡರು ಮುಂದಿನ ಬಾರಿ ಕಾಂಗ್ರೆಗೆ ಹೋಗುವುದು ಖಚಿತವಾಗಿದೆ. ಯಡಿಯೂರಪ್ಪನ ಕಟ್ಟಾ ಅನುಯಾಯಿ ಬಸವರಾಜ್ ಬೊಮ್ಮಾಯಿ ಕೂಡಾ ಗೌಪ್ಯವಾಗಿ ಕಾಂಗ್ರೆ ನಾಯಕರ ಜೊತೆಗೆ ಮಾತುಕತೆ ನಡೆಸುತ್ತಿದ್ದಾರಂತೆ. ಹಾಗೆಯೇ ಯಡ್ಡಿಯ ಮತ್ತೊಬ್ಬ ಲಿಂಗವಂತ ಹಿಂಬಾಲಕ ಉಮೇಶ್ ಕತ್ತಿ ಕೂಡ ಈಗಾಗಲೇ ಕಾಂಗ್ರೆಸ್ ಹೈಕಮಾಂಡ್ ಜೊತೆ ಎರಡು ಸುತ್ತಿನ ಮಾತುಕತೆ ಮುಗಿಸಿದ್ದಾರಂತೆ. ಸಚಿವ ಆನಂದ ಅಸ್ನೋಟಿಕರ್ ತಮ್ಮ ತಾಯಿಯ ಜೊತೆ ಕಾಂಗ್ರೆಸ್ ಸೇರಿ ತಮ್ಮ ರಾಜಕೀಯ ಭವಿಷ್ಯವನ್ನು ಗಟ್ಟಿ ಮಾಡಿಕೊಳ್ಳಲು ಹವಣಿಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಯಡಿಯೂರಪ್ಪನವರಿಂದಾಗಿಯೇ ರಾಜಕೀಯವಾಗಿ ಪುನರ್‌ಜನ್ಮ ಪಡೆದ ಸಚಿವ ಸೋಮಣ್ಣ ಸದ್ಯದಲ್ಲೇ ಕಾಂಗ್ರೆಸ್ ಸೇರುವ ಬಗ್ಗೆ ಎರಡೂ ಪಕ್ಷಗಳಲ್ಲಿ ಸುದ್ದಿಯಾಗಿದೆ. ಇದರ ಜೊತೆಜೊತೆಗೆ ಮೊನ್ನೆ ಎಸ್.ಎಂ.ಕೃಷ್ಣ ಅವರು ಬೆಂಗಳೂರಿಗೆ ಬಂದತಕ್ಷಣ ಐದು ಜನ ಪಕ್ಷೇತರ ಶಾಸಕರು ಕೃಷ್ಣ ಅವರನ್ನು ಭೇಟಿ ಮಾಡಿ ಕಾಂಗ್ರೆಸ್ ಸೇರುವ ಬಗ್ಗೆ ತಮ್ಮ ಮನದಾಸೆಯನ್ನು ಹೇಳಿಕೊಂಡಿದ್ದಾರೆ.

ವಾಸ್ತವವಾಗಿ ಈ ಹಿಂದೆ ಇವರೆಲ್ಲರೂ ಯಡಿಯೂರಪ್ಪನ ಹಿಂಬಾಲಕರೆಂದೇ ಗುರುತಿಸಲ್ಪಟ್ಟವರು. ಇಂಥವರೇ ಈಗ ಯಡ್ಡಿಗೆ ಕೈಕೊಟ್ಟು ಕಾಂಗ್ರೆಸ್ ಸೇರಲು ಸಜ್ಜಾಗುತ್ತಿದ್ದಾರೆಂದರೆ ಇನ್ನು ಬಿಜೆಪಿಯನ್ನು ತೊರೆದು ಕಾಂಗ್ರೆಸ್‌ಗೆ ಹಾರಲು ಇನ್ನೆಷ್ಟು ಜನ ಕಾದು ಕೂತಿರಬಹುದು ಎಂದು ನೀವೇ ಊಹಿಸಿ.

ಬಿಜೆಪಿಯಿಂದ ಮಾತ್ರವಲ್ಲ ಜನತಾದಳದಿಂದಲೂ ಹಲವು ಶಾಸಕರು ಕಾಂಗ್ರೆಸ್‌ಗೆ ಗುಳೆ ಹೋಗುವ ಸಾಧ್ಯತೆಯೂ ಇದೆ. ದೇವೇಗೌಡರ ಭದ್ರಕೋಟೆ ಎನಿಸಿದ್ದ ಹಾಸನ ಜಿಲ್ಲೆಯಲ್ಲಿ ಕಾಂಗ್ರೆ ಈ ಬಾರಿ ಕೆಲವು ಸ್ಥಾನಗಳನ್ನು ಗೆದ್ದರೂ ಆಶ್ಚರ್ಯವಿಲ್ಲ. ಇದರ ಮುನ್ಸೂಚನೆಯೆಂಬಂತೆ ಜನತಾದಳದ ಶಾಸಕ ಪುಟ್ಟೇಗೌಡರು ಮೊನ್ನೆ ಗೌಡರ ಪುತ್ರ ರೇವಣ್ಣನ ವಿರುದ್ಧ ಆರ್ಭಟಿಸಿ ಪಕ್ಷ ತ್ಯಜಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಪುಟ್ಟೇಗೌಡರ ಜೊತೆಗೆ ಜನತಾದಳದ ವಕ್ತಾರ ವಿಶ್ವನಾಥ್ ಕೂಡ ಕೈಜೋಡಿಸಿರುವುದು ಇಲ್ಲಿ ಗಮನಾರ್ಹವಾಗಿದೆ.


ಇವರಿಬ್ಬರು ಅಸಹನೆಯಿಂದ ಜೆಡಿಎಸ್ ತೊರೆಯುತ್ತಿದ್ದರೆ ಗೌಡರ ತಂತ್ರಗಾರಿಕೆಗೆ ಹೆದರಿ ಬಿಜೆಪಿ ತೊರೆಯುತ್ತಿರುವವನು ಯೋಗೇಶ್ವರ್. ಬರುವ ಚುನಾವಣೆಯಲ್ಲಿ ಯೋಗೇಶ್ವರ್‌ನನ್ನು ಶತಾಯಗತಾಯ ಸೋಲಿಸುವುದು ಗೌಡರ ಗುರಿ. ಮಾನ, ಮರ್ಯಾದೆ, ಜನಮನ್ನಣೆ ಎಲ್ಲವನ್ನೂ ಈಗ ಕಳೆದುಕೊಂಡಿರುವ ಬಿಜೆಪಿಯಲ್ಲೇ ಇದ್ದರೆ ಸೋಲು ಖಚಿತ ಎಂದು ಯೋಗೇಶ್ವರನಿಗೂ ಅನ್ನಿಸಿದೆ. ಆದ್ದರಿಂದ ಆತ ಬಿಜೆಪಿಗೆ ಗುಡ್‌ಬೈ ಹೇಳಿ ಮತ್ತೆ ತನ್ನ ಹಳೇ ಪಕ್ಷವಾದ ಕಾಂಗ್ರೆಸ್ ಸೇರಿ ಗೆಲ್ಲಬೇಕೆಂದು ಸ್ಕೆಚ್ ಹಾಕಿದ್ದಾನೆ.

ಯಡ್ಡಿಯು ಕೆಜೆಪಿ ಸೇರಿದರೆ ತಮಗೆ ಖಂಡಿತವಾಗಿಯೂ ಮುಸ್ಲಿಂ ಮತ್ತು ಹಿಂದುಳಿದ ಮತಗಳು ಸಿಗುವುದಿಲ್ಲ ಎಂಬುದು ಕೆಲವು ಬಿಜೆಪಿ ಶಾಸಕರ ಲೆಕ್ಕಾಚಾರ. ಹಾಗೆಯೇ ದೇವೇಗೌಡರ ಜನತಾದಳ ಸೇರಿದರೆ ಲಿಂಗಾಯತ ಮತ್ತು ಕುರುಬ ಜನಾಂಗದ ಮತಗಳು ದೊರಕಲಾರದು ಎಂಬುದೂ ಅವರಿಗೆ ಗೊತ್ತು, ಆದರೆ ಜಾತ್ಯತೀತ ಇಮೇಜ್ ಇರುವ ಕಾಂಗ್ರೆಸ್ ಪಕ್ಷ ಸೇರಿದರೆ ಎಲ್ಲಾ ಜನಾಂಗಗಳ ಮತಗಳು ಸಿಗುತ್ತದೆ ಎಂದೇ ಅವರೆಲ್ಲ ಕಾಂಗ್ರೆ ಪರ ಒಲವು ತೋರಿಸುತ್ತಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ಎಲ್ಲಾ ಜಾತಿಗಳ ಪ್ರಮುಖ ನಾಯಕರು ಇರುವುದರಿಂದ ತಮ್ಮ ಪರ ಮತದಾರರನ್ನು ಓಲೈಸಲು ಸುಲಭವಾಗುತ್ತದೆ ಎಂಬುದೂ ಮತ್ತೊಂದು ಲೆಕ್ಕಾಚಾರ. ಉದಾಹರಣೆಗೆ ಕಾಂಗ್ರೆಸಲ್ಲಿ ಒಕ್ಕಲಿಗ ನಾಯಕರಾಗಿ ಎಸ್.ಎಂ.ಕೃಷ್ಣ ಮತ್ತು ಡಿ.ಕೆ. ಶಿವಕುಮಾರ್, ಲಿಂಗಾಯತ ನಾಯಕರಾಗಿ ಎಂ.ಬಿ. ರಾಜಶೇಖರನ್ ಮತ್ತು ಶಾಮನೂರು ಶಿವಶಂಕರಪ್ಪ, ಅಲ್ಪಸಂಖ್ಯಾತ ನಾಯಕರಾಗಿ ಜಾಫರ್ ಶರೀಫ್, ಸಿ.ಎಂ.ಇಬ್ರಾಹಿಂ ಮತ್ತು ರೋಶನ್ ಬೇಗ್, ಕುರುಬ ಮತ್ತು ಹಿಂದುಳಿದ ನಾಯಕರಾಗಿ ಸಿದ್ದರಾಮಯ್ಯ ಮೊಯ್ಲಿ, ದಲಿತರ ನಾಯಕರಾಗಿ ಪರಮೇಶ್ವರ್ ಮತ್ತು ಮಲ್ಲಿಕಾರ್ಜುನ ಖರ್ಗೆ . . . ಹೀಗೆ ಅನೇಕ ಕಾಂಗ್ರೆಸ್ ನಾಯಕರು ಭಾವಿ ಶಾಸಕರಿಗೆ ಆಶಾಕಿರಣಗಳಾಗಿ ಕಂಗೊಳಿಸುತ್ತಿದ್ದಾರೆ.

ಇದಕ್ಕೆಲ್ಲ ಮುಖ್ಯ ಕಾರಣ ಲೋಕಸಭೆಗೆ ನಡೆದ ಉಡುಪಿಯ ಉಪಚುನಾವಣೆಯಲ್ಲಿ ಜಯಪ್ರಕಾಶ್ ಹೆಗ್ಡೆ ಜಯಭೇರಿ ಬಾರಿಸಿದ್ದು. ಆ ಫಲಿತಾಂಶವನ್ನು ಈ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದರ ಮುನ್ಸೂಚನೆ ನೀಡಿದೆ ಎಂದೇ ಕಾಂಗ್ರೆಸ್ಸಿಗರು ಭಾವಿಸಿದ್ದಾರೆ. ಆ ಚುನಾವಣೆಯಲ್ಲಾದ ಒಂದು ಮಹತ್ತರ ಬೆಳವಣಿಗೆ ಎಂದರೆ ಪ್ರಥಮ ಬಾರಿಗೆ ಕಾಂಗ್ರೆಸ್ ಪಕ್ಷವೂ ಬಿಜೆಪಿ ಪಕ್ಷದ ತರಹ ಗ್ರಾಮ ಮತ್ತು ಪಂಚಾಯತಿ ಮಟ್ಟದಲ್ಲೂ ಪಕ್ಷದ ಕಾರ್ಯಕರ್ತರನ್ನು ಸಂಘಟಿಸಿದ್ದು.

ಕಾಂಗ್ರೆಸ್‌ನಲ್ಲಿ ಅನೇಕರು ಮುಖ್ಯಮಂತ್ರಿ ಆಕಾಂಕ್ಷಿಗಳಿದ್ದಾರೆ ಆದರೆ ಕಾರ್ಯಕರ್ತರೇ ಇಲ್ಲ ಎಂಬ ಆರೋಪವಿತ್ತು. ಆದರೆ ಈಗ ಮೊದಲ ಬಾರಿಗೆ ರಾಹುಲ್ ಗಾಂಧಿ ಅವರ ಆದೇಶದ ಮೇರೆಗೆ ರಾಜ್ಯದ ಎಲ್ಲಾ ಗ್ರಾಮ, ಪಂಚಾಯತಿ ಮಟ್ಟದಲ್ಲೂ ಕಾಂಗ್ರೆಸ್ ಕಾರ್ಯಕರ್ತರ ಪಡೆಗಳನ್ನು ಸಿದ್ಧ ಮಾಡಲಾಗಿದೆ. ಈ ಪಡೆ ಮುಂದಿನ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆ ಅಭ್ಯರ್ಥಿಗಳ ಪರವಾಗಿ ಮಹತ್ತರವಾದ ಪಾತ್ರವನ್ನು ವಹಿಸಲಿದೆ ಎಂಬ ಆಶೆ ಹಲವರದ್ದು.




ಕಳೆದ ಬಾರಿಯ ಚುನಾವಣೆಯಲ್ಲಿ ಒಟ್ಟು ಚಲಾವಣೆಗೊಂಡ ಮತಗಳ ಪೈಕಿ ಕಾಂಗ್ರೆಸ್ ಶೇ. 34 ಮತಗಳನ್ನು ಪಡೆದಿದ್ದರೆ ಬಿಜೆಪಿ ಶೇ. 33 ಮತಗಳನ್ನು ಪಡೆದಿತ್ತು. ಈಗ ಬಿಜೆಪಿಯ ಒಳಗೆ ಬಿರುಕುಗಳು ಮೂಡಿರುವುದರಿಂದ ಮತ್ತು ಶ್ರೀರಾಮುಲು ಹಾಗು ಯಡ್ಡಿ ಹೊಸ ಪಕ್ಷಗಳನ್ನು ಪ್ರಾರಂಭಿಸಿರುವುದರಿಂದ ಮುಂದಿನ ಬಾರಿ ಯಾವ ಕಾರಣಕ್ಕೂ ಬಿಜೆಪಿ ಹೆಚ್ಚಿನ ಸಂಖ್ಯೆಯಲ್ಲಿ ಮತಗಳನ್ನು ಪಡೆಯುವುದಿಲ್ಲ.

ಅಷ್ಟೇ ಅಲ್ಲ, ಕಳೆದ ನಾಲ್ಕು ವರ್ಷಗಳಿಂದ ರಾಜ್ಯವನ್ನು ಲೂಟಿ ಮಾಡಿ, ರಾಜ್ಯದ ಇತಿಹಾಸದಲ್ಲೇ ಅತಿಭ್ರಷ್ಟ ಆಡಳಿತವನ್ನು ನೀಡಿ, ಜಗತ್ತಿನ ಮುಂದೆ ಕನ್ನಡಿಗರು ತಲೆತಗ್ಗಿಸುವಂತಹ ಕೃತ್ಯಗಳಲ್ಲಿ ತೊಡಗಿದ ಬಿಜೆಪಿಯನ್ನು ಕಂಡರೇ ಜನರಿಗೆ ರೋಸಿಹೋಗಿದೆ. ಆದಷ್ಟು ಬೇಗ ಈ ನೀಚರನ್ನು ಅಧಿಕಾರದಿಂದ ಒದ್ದೋಡಿಸಬೇಕೆಂದು ಜನ ಕಾಯುತ್ತಿದ್ದಾರೆ. ಈ ಕಾರಣಕ್ಕೂ ಬಿಜೆಪಿ ಪರ ಮತಗಳು ಗಣನೀಯವಾಗಿ ಕುಸಿಯಲಿದೆ.

ಕಳೆದ ಬಾರಿ ಸುಮಾರು 25 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಕೇವಲ ಮೂರು ಸಾವಿರ ಮತಗಳ ಅಂತರದಿಂದ ಸೋತಿದ್ದರು. ಈಗ ಅಂತಹ ಕ್ಷೇತ್ರಗಳಲ್ಲಿ ಕಾಂಗ್ರೆಸ್ ತನ್ನ ಸ್ಥಾನವನ್ನು ಭದ್ರಗೊಳಿಸಲು ತಂತ್ರಗಾರಿಕೆ ಮಾಡಿದೆ.

ಈ ಎಲ್ಲಾ ಕಾರಣಗಳಿಗಾಗಿ ಈಗ ಕಾಂಗ್ರೆಸ್ ಪಕ್ಷ ಸೇರಲು ಭಾವಿ ಶಾಸಕರು ತಾನ್ಮುಂದು ನಾನ್ಮುಂದು ಎಂದು ಪೈಪೋಟಿ ನಡೆಸುತ್ತಿದ್ದಾರೆ. ಇದು ಒಂದು ರೀತಿಯಲ್ಲಿ ಪಂದ್ಯ ನಡೆಯುವುದಕ್ಕಿಂತ ಮುನ್ನವೇ ಒಂದು ತಂಡ ಗೆಲುವು ಸಾಧಿಸಿದಂತೆ. ಅಂದರೆ ಚುನಾವಣೆಗಿಂತ ಮೊದಲೇ ಕಾಂಗ್ರೆಸ್ ಪಕ್ಷದಲ್ಲಿ ಮತ್ತೊಮ್ಮೆ ಆತ್ಮವಿಶ್ವಾಸದ ಕಳೆ ಕಾಣಿಸುತ್ತಿದೆ. ಇಂತಹ ಪ್ರತಿಕೂಲ ರಾಜಕೀಯ ವಾತಾವರಣವನ್ನು ಕಾಂಗ್ರೆಸ್ ನಾಯಕರು ಹೇಗೆ ಎನ್‌ಕ್ಯಾಶ್ ಮಾಡಿಕೊಳ್ಳುತ್ತಾರೆ, ಹೇಗೆ ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಮರೆತು ಚುನಾವಣೆಯಲ್ಲಿ ಗೆಲ್ಲಲು ಒಗ್ಗಟ್ಟಾಗುತ್ತಾರೆ ಎಂಬುದರ ಮೇಲೆ ವಲಸೆ ಹಕ್ಕಿಗಳ ಮತ್ತು ಮೂಲ ಕಾಂಗ್ರೆಸ್ಸಿಗರ ರಾಜಕೀಯ ಭವಿಷ್ಯ ನಿಂತಿದೆ.

■ ಸದಾಶಿವ ಶೆಣೈ





ಕೆಲವೇ ಕ್ಷಣಗಳಲ್ಲಿ ಜಗತ್ತಿನಾದ್ಯಂತ ಸಂಚರಿಸಿದ ಫೋಟೋ


ಎರಡನೆ ಬಾರಿಗೆ ಅಮೆರಿಕದ ಅಧ್ಯಕ್ಷ ಚುನಾವಣೆಯಲ್ಲಿ ಗೆದ್ದ ಮರುಕ್ಷಣವೇ ಬರಾಕ್ ಒಬಾಮ ತಮ್ಮ ಟ್ವಿಟರ್ ಮತ್ತು ಫೇಸ್‌ಬುಕ್ ತಾಣಗಳಲ್ಲಿ ಹಾಕಿದ ಫೋಟೋ ಒಂದು ಮಿಂಚಿನ ವೇಗದಲ್ಲಿ ಜಗತ್ತಿನಾದ್ಯಂತ ಸಂಚರಿಸಿತು. ತಮ್ಮ ಮಡದಿ ಮಿಷೇಲ್ ಅವರನ್ನು ಸಂತೋಷದಿಂದ ಒಬಾಮ ಅಪ್ಪಿಕೊಂಡಿರುವ ಚಿತ್ರಕ್ಕೆ 'ಮತ್ತೆ ನಾಲ್ಕು ವರ್ಷಗಳು' ಎಂಬ ಶೀರ್ಷಿಕೆಯನ್ನು ಒಬಾಮಾ ನೀಡಿದ್ದರು.


ಈ ಚಿತ್ರ ಎಷ್ಟು ಮನಮುಟ್ಟುವಂತಿದೆ ಎಂದರೆ ಇದನ್ನು 6,50,200 ಜನ ತಮ್ಮ ಟ್ವಿಟರ್ ಅಕೌಂಟ್ ಮೂಲಕ ಇತರರಿಗೆ ಕಳುಹಿಸಿದರಲ್ಲದೆ, ಬರೋಬ್ಬರಿ 3.2 ಮಿಲಿಯನ್ ಫೇಸ್‌ಬುಕ್ ಬಳಕೆದಾರರು ಇದಕ್ಕೆ 'ಲೈಕ್' (ಇಷ್ಟ) ಎಂದು ಥಮ್ಸ್ ಅಪ್ ಸೂಚಿಸಿದರು! ಆ ಮೂಲಕ ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿ ಅತಿ ಜನಪ್ರಿಯತೆ ಗಳಿಸಿದ ಫೋಟೋ ಎಂದೂ ದಾಖಲೆ ನಿರ್ಮಿಸಿತು. ಈ ಹಿಂದೆ ಜಸ್ಟೀನ್ ಬೀಬರ್ ಎಂಬ ಯುವ ಜನಪ್ರಿಯ ಹಾಡುಗಾರ ಮರಣ ಹೊಂದಿದ್ದ ತನ್ನ ಅಭಿಮಾನಿಯೊಬ್ಬರಿಗೆ ಸಲ್ಲಿಸಿದ್ದ ಗೌರವಾರ್ಪಣೆಯನ್ನು 2,00,000 ಮಂದಿ ಇತರರಿಗೆ ರವಾನಿಸಿದ್ದೇ ದಾಖಲೆ ಆಗಿತ್ತು

ಶಿರಸಿ: ಚುನಾವಣಾ ತಂತ್ರಗಾರಿಕೆಯಲ್ಲಿ ಹೈಗರ ಸ್ವಾಮಿಗಳು!


ರಾಮಕೃಷ್ಣ ಹೆಗ್ಡೆ


ಬಂಗಾರಪ್ಪ



ದೇಶಪಾಂಡೆ


ಕಾಗೇರಿ

ಉತ್ತರ ಕನ್ನಡದ ಶಿರಸಿ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ತಾಲೀಮು ಒಳಗೊಳಗೇ ಜೋರಾಗಿ ನಡೆಯುತ್ತಿದೆ. ಸಂಘ ಪರಿವಾರದ ಹಾರವರ ಮುದ್ದಿನ ಮಾಣಿ ಕಂ ಕಂತ್ರಿ ಮಂತ್ರಿ ಕಾಗೇರಿ ವಿಶ್ವೇಶ್ವರ ಹೆಗಡೆ ಸೆಣಸುವ ಕ್ಷೇತ್ರವೆಂಬ ಕಾರಣಕ್ಕೆ ಈ ಶಿರಸಿಗೆ ಋಣಾತ್ಮಕ ಪ್ರತಿಷ್ಠೆ ಏರಿಬಿಟ್ಟಿದೆ. ಎತ್ತಿಂದೆತ್ತ ಲೆಕ್ಕಾಚಾರ ಹಾಕಿದರೂ ಶೂದ್ರರ ಸ್ವಾಭಿಮಾನದ ಸಂಕೇತ ಆಗುವ ಅಷ್ಟೂ ಅವಕಾಶಗಳಿರುವ ಶಿರಸಿ ಕ್ಷೇತ್ರ ಹೈಗರ ಒಡೆದಾಳುವ ಹಿಕಮತ್ತಿನಿಂದ ಕಾಗೇರಿಯಂಥ ಅಬ್ರಾಹ್ಮಣ ವಿರೋಧಿಯ ಪಾಲಾಗುತ್ತಿದೆ. ಕುತೂಹಲದ ಸಂಗತಿ ಎಂದರೆ, ಈ ಸಲ ಕಾಗೇರಿಗೆ ಎಲೆಕ್ಷನ್ ಘೋಷಣೆಗೂ ಮೊದಲೇ ಸ್ವಜಾತಿ ಸ್ವಾಮಿಗಳು-ಕುಲಬಾಂಧವ ಬ್ರಾಹ್ಮಣರೇ ನಡುಕ ಮೂಡಿಸಿಬಿಟ್ಟಿದ್ದಾರೆ.

ಕಂಗೆಟ್ಟ ಕಾಗೇರಿ

ಈ ಬಾರಿ ಕಾಗೇರಿ ಅಷ್ಟು ಸುಲಭವಾಗಿ ಮತ್ತೆ ಎಮ್ಮೆಲ್ಲೆ ಆಗುವ ಸಾಧ್ಯತೆಯೇ ಇಲ್ಲ, ಕಳೆದ ನಾಲ್ಕೂವರೆ ವರ್ಷದಿಂದ ಶಾಸಕ-ಮಂತ್ರಿಯಾಗಿ ಆತ ಶಿರಸಿಯಲ್ಲಿ ಮಾಡಿದ್ದು ಬರೀ ಸುದ್ದಿ; ಸಾಧನೆ ಶೂನ್ಯ. ಶಿರಸಿಯಲ್ಲಿ ಬ್ರಾಹ್ಮಣ ಸಾಮ್ರಾಜ್ಯ ಸ್ಥಾಪಿಸುವ ಹಿಡನ್ ಇರಾದೆಯಿಂದ ಕಾಗೇರಿ ಅದೆಷ್ಟೇ ಹಾರಾಡಿದರೂ ಸ್ವ-ಜಾತಿ ಜನಗಳೇ ಆತನ ನಂಬುವ ಸ್ಥಿತಿಯಲ್ಲಿ ಇಲ್ಲ, ಇದಕ್ಕೆ ಕಾರಣ ಈ ನರಿಯಣ್ಣ ಕ್ಷೇತ್ರದ ಜನರ ಕಷ್ಟ-ಸುಖಕ್ಕೆ ಸ್ಪಂದಿಸದೇ ತಮ್ಮನನ್ನು ಮುಂದಿಟ್ಟುಕೊಂಡು ಮಾಡಿದ ಕೋಟ್ಯಂತರ ರೂಪಾಯಿ ಲೇವಾದೇವಿ ದಂಧೆ!


ಸ್ವರ್ಣವಲ್ಲಿ ಸ್ವಾಮಿ

ಅತ್ತ ಶೂದ್ರರಿಗಂತೂ ಈತ ಅದೆಂಥ ಅನಾಹುತಕಾರಿಯೆಂದು ಅದೆಂದೋ ಖಾತ್ರಿಯಾಗಿ ಹೋಗಿದೆ. ಈ ತಾತ್ಸಾರ-ತಿರಸ್ಕಾರದ ನಡುವೆಯೇ ಶಿರಸಿ ಸೀಮೆಯ ವಿಪ್ರರ ಮೇಲೆ ಹಿಡಿತ ಹೊಂದಿರುವ ರಾಮಚಂದ್ರಾಪುರಮಠದ ರಾಘವೇಶ್ವರ ಮತ್ತು ಸೋಂದಾ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಎಂಬ ಸ್ವಾಮಿಗಳಿಬ್ಬರೂ ಕಾಗೇರಿ ಕಂಡರೆ ಅಸಹ್ಯದಿಂದ ಮೂಗು ಮುರಿಯುತ್ತಿದ್ದಾರೆ! ಇಂಥ ಸಂದಿಗ್ಧ ಸಂದರ್ಭದಲ್ಲಿ ಎದೆ ಮೇಲೆ ಬರುತ್ತಿರುವ ಎಲೆಕ್ಷನ್ ಕಾಗೇರಿಯನ್ನು ಕಂಗೆಡಿಸಿಬಿಟ್ಟಿದೆ.

ಶಶಿ ಪ್ರವೇಶ

ಉತ್ತರ ಕನ್ನಡ ಬಿಜೆಪಿಯಲ್ಲಿ ಏಕಮೇವಾ/ದ್ವಿತೀಯನಾಗುವ ಮಸಲತ್ತಿನಿಂದ ಕಾಗೇರಿ ಆಡಿದ ಆಟಗಳೇ ಇವತ್ತು ಆತನಿಗೆ ತಿರುಗುಬಾಣಗಳಾಗಿ ಕಾಡುತ್ತಿವೆ. ತನ್ನ ಮಂತ್ರಿಗಿರಿ ಆಸೆಗೆ ಅಡ್ಡವಾಗಬಹುದೆಂದು ಡಾ. ಎಂ.ಪಿ. ಕರ್ಕಿ ಎಂಬ ಜಿಲ್ಲಾ ಬಿಜೆಪಿ "ಭೀಷ್ಮಜ್ಞ"ನಿಗೆ ಕುಮಟಾ ಅಸೆಂಬ್ಲಿ ಟಿಕೆಟ್ ಸಿಗದಂತೆ ಮಾಡಿದ್ದ ಈ ಕಾಗೇರಿ. ಆದರೆ ಕುಮ್ಮಿ-ಯಡ್ಡಿಯ ಕೋಜಾ ಸರ್ಕಾರದಲ್ಲಿ ಮಂತ್ರಿಯಾಗಿದ್ದು ಮಾತ್ರ ಪೆದ್ದು ಶೂದ್ರಾಗ್ರೇಸ ಶಿವಾನಂದ ನಾಯ್ಕ. ಇದು ಕಾಗೇರಿಗಷ್ಟೇ ಅಲ್ಲ, ಸಕಲ ಬ್ರಾಹ್ಮಣ ಸಂಕುಲಕ್ಕೇ ಸಹಿಸಲಸಾಧ್ಯವಾದ ಜನಿವಾರ ಪ್ರತಿಷ್ಠೆಗೆ ಬಿದ್ದ ದೊಡ್ಡ ಪೆಟ್ಟಾಗಿತ್ತು.

2008ರ ವಿಧಾನಸಭಾ ಎಲೆಕ್ಷನ್‌ನಲ್ಲಿ ಕಾಗೇರಿ ಮತ್ತು ಸೋಗಲಾಡಿ ಸಂಸದ ಅನಂತ್ಕುಮಾರ್‌ನ ಬ್ರಾಹ್ಮಣ ಬಳಗ ಶತಾಯಗತಾಯ ಹೋರಾಡಿ ಭಟ್ಕಳದಲ್ಲಿ ಶಿವಾನಂದ ನಾಯ್ಕ ಗೆಲ್ಲದಂತೆ ನೋಡಿಕೊಂಡರು. ಕುಮಟಾದಲ್ಲಿ ಶಶಿಭೂಷಣ ಹೆಗಡೆ ಎಂಬ ಸ್ವ-ಪಕ್ಷದ ಹುರಿಯಾಳು ಸೋಲುವುದೇ ಕಾಗೇರಿಗೆ ಬೇಕಾಗಿತ್ತು, ಒಂದು ಕಾಲದಲ್ಲಿ ಕರ್ಕಿಯನ್ನು ನಿವಾರಿಸಿಕೊಳ್ಳಲು ಸಿದ್ಧಾಪುರದಿಂದ ಆಮದು ಮಾಡಿಕೊಂಡು ಕುಮಟೆಯಲ್ಲಿ ಶಶಿಯನ್ನು ಪ್ರೊಜೆಕ್ಟ್ ಮಾಡಿದ್ದೇ ಕಾಗೇರಿಯಾಗಿತ್ತು. ಆದರೆ ಆತ ಕುಮಟೆಯಲ್ಲಿ ಶಾಸಕನಾದರೆ ತನಗೆ ಬ್ರಾಹ್ಮಣ ಸಂಕುಲದಲ್ಲೊಬ್ಬ ಎದುರಾಳಿ ತಯಾರಾದಂತಾಗುತ್ತದೆಂಬ ದೂ(ದು)ರಾಲೋಚನೆ ಕಾಗೇರಿ ತಲೆಯಲ್ಲಿ ಮೊಳೆತಿತ್ತು.

ಈ ಶಶಿಭೂಷಣ ಹೆಗಡೆ ಯಾರು ಗೊತ್ತಾ? ದಿವಂಗತ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಜೀಯ ದಾಯಾದಿ ಅಣ್ಣ ಗಣೇಶ್ ಹೆಗಡೆಯ ಖಾಸಾ ಮೊಮ್ಮಗ; ಅರ್ಥಾತ್ ಹೆಗಡೆಜೀ ಬೀಸಾ ಮೊಮ್ಮಗ. ಈತನ ಅಜ್ಜ ಗಣೇಶ್ ಹೆಗಡೆ ಮತ್ತು ಅಪ್ಪ ವಿನಾಯಕ ರಾವ್ ಹೆಗಡೆಗೆ ಒಳ್ಳೆಯ ಹೆಸರೇನೂ ಇಲ್ಲ, ಆದರೆ ಈ ಶಶಿ ದೊಡ್ಡನೆ ಫ್ಯಾಮಿಲಿಯ ಪಾಳೆಗಾರಿಕೆ ಪೊಗರಿಲ್ಲದ ಸಜ್ಜನ-ಸರಳ ತರುಣ; ಸುಶಿಕ್ಷಿತ. ಜನಸಾಮಾನ್ಯರಿಗೆ ತಕ್ಷಣ ಸ್ಪಂದಿಸುವ ಕಳಕಳಿಯ, ದೂರದೃಷ್ಟಿಯ ಹುಡುಗ. ಎಮ್ಮೆಲ್ಲೆ ಆಗುವ ದುರಾಸೆಯಿಂದ ಜನರನ್ನು ದಾರಿ ತಪ್ಪಿಸುವ ರಾಜಕಾರಣ ಶಶಿ ಮಾಡುವ ಪೈಕಿಯಲ್ಲ. ಹೀಗಾಗಿ ಅನೈತಿಕ-ಕೋಮು ಕಿತಾಪತಿಯ ರಾಜಕಾರಣದಲ್ಲಿ ಆತನಿಗೆ ಮೇಲೆ ಬರಲಾಗಲೇ ಇಲ್ಲ, ಕಾಗೇರಿಯೂ ಈ ಶಶಿ ಬಿಜೆಪಿಯಲ್ಲಿ ಬೆಳೆಯದಂತೆ ಸಿಕ್ಕ-ಸಿಕ್ಕಲ್ಲಿ ಮುರಿಯುತ್ತಲೇ ಹೋದರು; ಸಂಸದ ರೌಡಿ ಅನಂತ್ಕುಮಾರ್‌ನಂತೂ ಶಶಿಯನ್ನು ಕಂಡರೆ ಮುಷ್ಠಿ ಬಿಗಿಹಿಡಿದು ಹೊಡೆಯಲಿಕ್ಕೇ ಹೋಗುತ್ತಿದ್ದ.

ಬಿಜೆಪಿಯ ಗ್ಯಾಸ್ ಛೇಂಬರ್‌ನಲ್ಲಿ ಬಿದ್ದು ಒದ್ದಾಡುತ್ತಿದ್ದ ಶಶಿ ಈಗ ಸಿಡಿದೆದ್ದಿದ್ದಾರೆ! ತನ್ನ ತವರು ಕ್ಷೇತ್ರ ಶಿರಸಿ-ಸಿದ್ದಾಪುರದಲ್ಲೇ ರಾಜಕಾರಣ ಮಾಡುವ ನಿರ್ಧಾರ ಮಾಡಿದ್ದಾರೆ. ಜೆಡಿಎಸ್ ಸೂತ್ರಧಾರ ಕುಮ್ಮಿ ಮತ್ತು ಯುವ ಜೆಡಿಎಸ್ ಅಧ್ಯಕ್ಷ ಮಧು ಬಂಗಾರಪ್ಪ ತಮ್ಮ ಪಾರ್ಟಿ ಸೇರಿ ಕಾಗೇರಿ ಸಂಹಾರಕ್ಕೆ ಕೊಟ್ಟ ಆಹ್ವಾನವನ್ನು ಮೂರ್‍ನಾಲ್ಕು ತಿಂಗಳಿಂದ ಅಳೆದು-ಸುರಿದು ನೋಡಿ ಬಿಜೆಪಿ ಬಿಡಲು ತೀರ್ಮಾನಿಸಿದ್ದಾರೆ. ಶಿರಸಿ-ಸಿದ್ಧಾಪುರದ ಹಳ್ಳಿ-ಹಳ್ಳಿಗಳಿಗೆ ಹೋಗಿ ಜನರನ್ನು ಭೇಟಿಯಾಗಿ "ಬದಲಾವಣೆ" ಮಾತಾಡುತ್ತಿದ್ದಾರೆ. ಇದಕ್ಕೆ ಕಾಗೇರಿ ಕಿರಿಕಿರಿಯಿಂದ ಬೇಸತ್ತ ಜನರೂ ಒಪ್ಪಿಗೆ ಸೂಚಿಸುತ್ತಿದ್ದಾರೆ. ವಿಶೇಷವಾಗಿ ಕ್ಷೇತ್ರದ ಬಹುಸಂಖ್ಯಾತ ಹವ್ಯಕ ಬ್ರಾಹ್ಮಣರ ಕೇರಿ-ಕೇರಿಯಲ್ಲಿ ಶಶಿ ಬಗ್ಗೆ ಒಲವು ಮೂಡುತ್ತಿದೆ.

ಶಿರಸಿ-ಸಿದ್ದಾಪುರ ಬ್ರಾಹ್ಮಣರ ಪ್ರಶ್ನಾತೀತ ನಾಯಕ ತಾನೆಂಬ ಭ್ರಮೆಯಲ್ಲಿದ್ದ ಕಾಗೇರಿಗೆ ಶಶಿಯ ಅನಿರೀಕ್ಷಿತ ಪ್ರವೇಶ ಚಳಿ ಜ್ವರ ಬರಿಸಿಬಿಟ್ಟಿದೆ! ಕ್ಷೇತ್ರದ ಜಾತಿ ಸಮೀಕರಣವೂ ಶಶಿಗೆ ಅನುಕೂಲಕರವಾಗಿದೆ. ಶಿರಸಿ-ಸಿದ್ದಾಪುರದಲ್ಲಿ ಪರಂಪರಾಗತ ರಾಜಕೀಯ ಎದುರಾಳಿಗಳಾದ ಹೈಗರು (ಬ್ರಾಹ್ಮಣರು) ಮತ್ತು ದೀವರು (ಈಡಿಗರು) ಸಮತೂಕದಲ್ಲಿದ್ದಾರೆ. 'ಬಂ' ಮತ್ತು ಹೆಗಡೆಜೀ ಬದುಕಿರುವವರೆಗೆ ತಂತಮ್ಮ ದೀವರು-ಹೈಗರ ಸಮಾಜದ ಐಕಾನ್‌ಗಳಾಗಿದ್ದರು. ಇಂದಿಗೂ ಆ ಜಾತಿಯಲ್ಲಿ ಇವರಿಬ್ಬರ ಪ್ರಭಾವ ಒಂದಿಷ್ಟಿದೆ. ಮಧು ಬಂಗಾರಪ್ಪ ಜಿಲ್ಲೆಯ ದೀವರನ್ನು ಒಲಿಸಲು ಅಪ್ಪನ ಕಾರ್ಡ್ ಬಳಸುತ್ತಿದ್ದಾನೆ. ಶಶಿ ಹೈಗರ ಸೆಳೆಯಲು ಹೆಗಡೆಜೀಯನ್ನು ಸ್ವ-ಜಾತಿ ಹೈಗರಿಗೆ ನೆನಪಿಸುತ್ತಿದ್ದಾರೆ. ಸತ್ತು ಹೋಗಿರುವ 'ಬಂ'-ಹೆಗಡೆಜೀ ಶಕ್ತಿ ಮತ್ತು ಕ್ಷೇತ್ರದ ಜನರಿಗೆ ಇದ್ದೂ ಇಲ್ಲದಂತಾಗಿರುವ ಶಾಸಕ ಕಾಗೇರಿಯ ಖರಾಬಾದ ಇಮೇಜು ಸೇರಿಕೊಂಡರೆ ಜೆಡಿಎಸ್‌ಗೆ ಅಲ್ಪಸಂಖ್ಯಾತರ ಮತ ತಂತಾನೆ ಹರಿದುಬರಲಿದೆ. ಇದು ಕಾಗೇರಿಯನ್ನು ಮನೆಗಟ್ಟಿ ಜನಪರ ಶಶಿಯನ್ನು ಅಸೆಂಬ್ಲಿಗೆ ಕಳಿಸಬಲ್ಲದು!



ರಾಘವೇಶ್ವರ ಸ್ವಾಮಿ


ಪ್ರಭಾವ ಜಾಸ್ತಿಯಾದರೆ, ಸಿದ್ದಾಪುರದಲ್ಲಿ ರಾಘವನ ಶಕ್ತಿ ಹೆಚ್ಚು, ತನ್ನ ಓಟ್‌ಬ್ಯಾಂಕ್ ರಾಜಕಾರಣದ ಅನುಕೂಲತೆಗೆ ತಕ್ಕಂತೆ ಕಾಗೇರಿ ಒಮ್ಮೆ ಸ್ವರ್ಣವಲ್ಲಿಗೆ ಸಪೋರ್ಟ್ ಮಾಡಿದರೆ, ಮತ್ತೊಮ್ಮೆ ರಾಘವನ ಬೆನ್ನಿಗೆ ನಿಲ್ಲುತ್ತ ಬಂದಿದ್ದಾರೆ. ಕಾಗೇರಿಯ ಈ ದಗಲುಬಾಜಿ ದ್ವಂದ್ವಗಾರಿಕೆ-ಎರಡೂ ಗುರುಪೀಠಗಳನ್ನು ಕೆರಳಿಸಿಬಿಟ್ಟಿದೆ.


ರಾಘವ ಸ್ವಾಮಿಯಂತೂ ತನ್ನ ಶಿಷ್ಯ ಗಣದೆದುರು "ಅಂವ(ಕಾಗೇರಿ) ಹೆಸ್ರು ಹಾಳ್ ಮಾಡ್ಕಂಡಿಕ್ಕಿದಾ.... ಅವ್ನಿಗಿಂತ ಶಶಿ ಮಾಣಿನೇ ಚಲೋ ಅನ್ನಿಸ್ತು ಅಲ್ದಾ....?" ಎಂದು ಆಗಾಗ ವರಾತ ಹಚ್ಚಿಕೊಳ್ಳುತ್ತಿದ್ದಾರೆ. ಅತ್ತ ಸ್ವರ್ಣವಲ್ಲಿ ಶ್ರೀ "ಶಾಂತಾರಾಮ್ ಹೆಗ್ಡೇರ್ನ ಈ ಸಲ ಗೆಲ್ಸಿರೆಂಗೆ...?" ಎಂದು ಅನುಯಾಯಿಗಳೆದುರು ಅಡ್ಡ ಪ್ರಶ್ನೆ ಇಡಲಾರಂಭಿಸಿದ್ದಾರೆ. ತನ್ನ ಹುಲೇಕಲ್ ಹೈಸ್ಕೂಲ್‌ನ ಎಡೆಡ್ ಪ್ರಪೋಸಲ್ ಕುಂಡಿಯಡಿಗೆ ಹಾಕಿಕೊಂಡು ಕುಂತಿರುವ ಕಾಗೇರಿ ಮತ್ತೆ ಶಾಸಕನಾಗಲೇಬಾರದೆಂಬ "ಗುರುಶಾಪ" ಸ್ವರ್ಣವಲ್ಲಿಯದು. ಗೋಕರ್ಣ ದೇವಸ್ಥಾನ ಜೋಳಿಗೆಗೆ ಹಾಕಿಕೊಂಡ ನಂತರದ ಕೋರ್ಟ್-ಕಚೇರಿ ಬೀದಿ ಕಾಳಗದ ಕಾಲದಲ್ಲಿ ಕಾಗೇರಿ ಕಾಳಜಿ ತೋರಿಸಲಿಲ್ಲವೆಂಬ ಅಸಮಾಧಾನ ರಾಘವನಲ್ಲಿದೆ. ಒಟ್ಟಿನಲ್ಲಿ ಇಬ್ಬರೂ ಕಾವಿಜೀವಿಗಳಿಗೆ ಕಾಗೇರಿ ಬೇಡವಾಗಿದ್ದಾನೆ.

ಆದರೆ ಈ ಹೈಗರ ಹೊಡೆದಾಟದಲ್ಲಿ ಶೂದ್ರ (ದೀವರು) ಕ್ಯಾಂಡಿಡೇಟ್ ಕಾಂಗ್ರೆಸ್‌ನಿಂದ ಗೆದ್ದುಬಿಟ್ಟರೆ ಬಲು ದೊಡ್ಡ ಅನಾಹುತವಾಗುತ್ತದೆಂಬ ಆತಂಕ ಸ್ವಾಮಿದ್ವಯರನ್ನು ಬಾಧಿಸುತ್ತಿದೆ. ಕಾಂಗ್ರೆಸ್‌ನಲ್ಲಿ ರವೀಂದ್ರ ನಾಯ್ಕ್, ಭೀಮಣ್ಣ ನಾಯ್ಕ್ ಮತ್ತು ಶಾಂತಾರಾಮ ಹೆಗಡೆ ಪ್ರಬಲ ಟಿಕೆಟ್ ಆಕಾಂಕ್ಷಿಗಳು. ಕಳೆದ ಚುನಾವಣೆಯಲ್ಲಿ ರವಿ ನಾಯ್ಕ್ ಕಾಂಗ್ರೆಸ್‌ನಿಂದ ಮತ್ತು ಭೀಮಣ್ಣ ನಾಯ್ಕ್ 'ಬಂ'ರ ಸಮಾಜವಾದಿ ಪಾರ್ಟಿಯಿಂದ ಕಾಗೇರಿ ಎದುರು ಸ್ಪರ್ಧಿಸಿ ದೊಡ್ಡ ಅಂತರದಲ್ಲಿ ಹೀನಾಯವಾಗಿ ಪಲ್ಟಿ ಹೊಡೆದಿದ್ದರು. ಈ ಎಡವಟ್ಟು ಶೂದ್ರರ ಜಿದ್ದಾಜಿದ್ದಿಯಲ್ಲಿ ಬ್ರಾಹ್ಮಣ ಕಾಗೇರಿ ನಿರಾಯಾಸವಾಗಿ ಗೆದ್ದಿದ್ದರು. ರವಿ ನಾಯ್ಕ್ ಮಾರ್ಗರೆಟ್ ಆಳ್ವರ ಹಿಂಬಾಲಕನಾದರೆ, ಭೀಮಣ್ಣ ನಾಯ್ಕ್ ಮತ್ತು ಶಾಂತಾರಾಮ ಹೆಗಡೆ ದೇಶಪಾಂಡೆ ಗ್ಯಾಂಗಿನವರು. ಮ್ಯಾಗಿ ವಿರುದ್ಧದ ಯುದ್ಧದಲ್ಲಿ ದೀವರ ಭೀಮಣ್ಣನನ್ನು ದೇಶಪಾಂಡೆ ದಾಳವಾಗಿ ಪ್ರಯೋಗಿಸಿ ಡಿಸಿಸಿ ಪ್ರೆಸಿಡೆಂಟ್ ಮಾಡಿದ್ದರು.

'ಬಂ'ರ ಖಾಸಾ ಭಾಮೈದನಾದ ಈ ಭೀಮಣ್ಣನಿಗೆ ಆ ಹೊತ್ತಲ್ಲಿ ದೇಶಪಾಂಡೆ ಶಿರಸಿಯ ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡುವ ಭರವಸೆ ಕೊಟ್ಟಿದ್ದರು. ಅತ್ತ ಮ್ಯಾಗಿ ಮತ್ತೊಂದು


ಶಾಂತಾರಾಮ ಹೆಗಡೆ


ಶಶಿಭೂಷಣ್


ಭೀಮಣ್ಣ ನಾಯ್ಕ

ಸ್ವಾಮಿಗಳ ಸ್ಟ್ರೇಟಜಿ

ಶಿರಸಿ ಮತ್ತು ಸಿದ್ದಾಪುರ ತಾಲ್ಲೂಕಿನ ಧರ್ಮಕಾರಣದಲ್ಲಿ ರಾಮಚಂದ್ರಾಪುರ ಮಠದ "ರಗಳೆ" ರಾಘವ ಮತ್ತು ಸ್ವರ್ಣವಲ್ಲಿ ಪೀಠಾಧಿಪತಿ "ಗಲಾಟೆ" ಗಂಗಾಧರೇಂದ್ರ ಪರಸ್ಪರ ಎದುರಾಳಿಗಳು. ಇವರಿಬ್ಬರಿಗೂ ಮಂತ್ರಿ ಕಾಗೇರಿಯ ಡಬ್ಬಲ್ ಗೇಮ್‌ನಿಂದ ತಲೆ ಕೆಟ್ಟುಹೋಗಿದೆ. ಶಿರಸಿಯಲ್ಲಿ ಸ್ವರ್ಣವಲ್ಲಿ

ಛಾನ್ಸ್ ರವಿ ನಾಯ್ಕ್ ಎಂಬ ಗಿಮಿಕ್ ಪೋರನಿಗೆ ಕೊಡಲು ಸ್ಕೆಚ್ ಹಾಕಿ ಕೂತಿದ್ದಾರೆ. ಈ ಇಬ್ಬರಲ್ಲಿ ಒಬ್ಬ ಶೂದ್ರ ಕಾಗೇರಿ ಮತ್ತು ಶಶಿಭೂಷಣ ಎಂಬ ಬ್ರಾಹ್ಮಣರ ಮೇಲಾಟದ ಮಧ್ಯ ನಿಂತರೆ ಆಗ ಹೈಗರಿಗೆ ಗಂಡಾಂತರ ಗ್ಯಾರಂಟಿ ಎಂಬ ಭಯ ಸ್ವರ್ಣವಲ್ಲಿ ಮತ್ತು ರಾಮಚಂದ್ರಾಪುರ ಮಠಾಧೀಶರನ್ನು ಆವರಿಸಿದೆ, ಪಾಪ! ಈ ಕುಲ ಘಾತುಕ ರಾಜಕಾರಣದಿಂದ ಬಚಾವಾಗಲು ಎರಡೂ ಮಠಾಧೀಶರು ಈಗ ಹೊಸದೊಂದು ಸ್ಟ್ರೇಟಜಿಯನ್ನು ಜಂಟಿಯಾಗೇ ಹೆಣೆದಿದ್ದಾರೆ.

ಕಾಂಗ್ರೆಸಿಗೊಂದು ಜನಿವಾರ!

ಅದೆಂದರೆ, ಕಾಂಗ್ರೆಸ್‌ನಿಂದಲೂ ಬ್ರಾಹ್ಮಣನೇ ಕ್ಯಾಂಡಿಡೇಟಾಗುವಂತೆ ನೋಡಿ ಕೊಳ್ಳುವುದು. ಆ ಮೂಲಕ ಹಿಂದಿನ ಅಂಕೋಲಾ-ಶಿರಸಿ-ಯಲ್ಲಾಪುರ ಕ್ಷೇತ್ರದಂತೆ ಶಿರಸಿ-ಸಿದ್ದಾಪುರನನ್ನು ಬ್ರಾಹ್ಮಣ ಮೀಸಲು ಕ್ಷೇತ್ರವನ್ನಾಗಿ ಬ್ರ್ಯಾಂಡ್ ಮಾಡೋದು ಈ ಹೈಗರ ಗುರುಗಳ ಪ್ಲಾನ್. ಟಿಎಸ್‌ಎಸ್ ಎಂಬ ಶಿರಸಿ ಸೀಮೆಯ ತೋಟಿಗರ ಜೀವನಾ ಧಾರ ಸಹಕಾರ ಸಂ ಮತ್ತು ಕೆಡಿಸಿಸಿ ಬ್ಯಾಂಕ್‌ಗಳನ್ನು ಅವ್ಯವಹಾರದ ಅಡ್ಡೆಯನ್ನಾಗಿ ಮಾಡಿ "ಕೀರ್ತಿಶಾಲಿ" ಆಗಿರುವ ಶಾಂತಾರಾಮ ಹೆಗಡೆ ಎಂಬ ಜಿಲ್ಲಾ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷನಿಗೆ ಕಾಂಗ್ರೆಸ್ ಟಿಕೆಟ್ ಸಿಗುವಂತೆ ಮಾಡಲು ಸ್ವಾಮಿಗಳಿಬ್ಬರು ರಹಸ್ಯ ಕಾರ್ಯಾಚರಣೆ ನಡೆಸಿದ್ದಾರೆ. ಶಾಂತಾರಾಮ ಹೆಗಡೆಯನ್ನು ಕಾಂಗ್ರೆಸ್ ಹುರಿಯಾಳಾಗಿಸುವಂತೆ ದೇಶಪಾಂಡೆ ಮೇಲೆ ಒತ್ತಡ ಹಾಕುವ ಹಿಕಮತ್ತು ಧರ್ಮಪೀಠಗಳೆರಡೂ ಏಕಕಾಲಕ್ಕೆ ಪ್ರಯೋಗಿಸುತ್ತಿವೆ! ಮೂರೂ ಪಕ್ಷದಿಂದ ತಮ್ಮ ಬ್ರಾಹ್ಮಣ ಕುಲಸಂಜಾತರೇ ಅಭ್ಯರ್ಥಿಗಳಾದರೆ ಯಾರೇ ಸೋತರೂ ಅಂತಿಮವಾಗಿ ಜನಿವಾರಧಾರಿಯೇ ಎಮ್ಮೆಲ್ಲೆಯಾಗುತ್ತಾನೆಂಬ ಲೆಕ್ಕಾಚಾರ ಹೈಗರ ಸ್ವಾಮಿಗಳದು.

ದೇಶಪಾಂಡೆಗೂ ಇದು ಪ್ರಿಯವಾದ ಫಿಕ್ಸಿಂಗ್ ಪಾಲಿಟಿಕ್ಸೇ! ಏಕೆಂದರೆ ಈ ಕಾಂಗ್ರೆಸ್ ಕಿಂಗ್ ಎಂದೂ ಬಿಜೆಪಿಯ ಅನಾದಿಕಾಲದ ದೋಸ್ತ್ ಕಾಗೇರಿ ಸೋಲ ಬೇಕೆಂದು ಕನಸು-ಮನಸಿನಲ್ಲೂ ಎಣಿ ದವರಲ್ಲ! ದೇಶಪಾಂಡೆ-ಕಾಗೇ ಯಾವತ್ತಿಗೂ ಪರಸ್ಪರ ಹಿತಚಿಂತಕರು. ಈ ಅನೈತಿಕ ರಾಜಕೀಯ ಜಿಲ್ಲೆಯ ಬಹಿರಂಗ ರಹಸ್ಯ. ಹಾಗೊಮ್ಮೆ ತಾ ಭೀಮಣ್ಣನಿಗೆ ಕಾಂಗ್ರೆಸ್ ಟಿಕೆಟ್ ಕೊಡಿ ಶಶಿ ಜೆಡಿಎಸ್‌ನಿಂದ ಸ್ಪರ್ಧಿಸಿದ ಬ್ರಾಹ್ಮಣರ ಬಡಿದಾಟದಲ್ಲಿ ಸ್ನೇಹಿತ ಕಾಗೇ ಖತಮ್ ಆಗುತ್ತಾನೆಂಬ ಭಯ ದೇಶಪಾಂಡೆಗೂ ಇ ಸ್ವರ್ಣವಲ್ಲಿ ಮಠಾಧೀಶರ ಅಚ್ಚುಮೆಚ್ಚಿನ ಗೋಲ್‌ಮಾ ಶಿಷ್ಯ ಶಾಂತಾರಾಮ ಹೆಗಡೆಗೇ ಕಾಂಗ್ರೆಸ್ ಟಿಕೆಟ್ ಕೊಡಿಸಿದ ದೇಶಪಾಂಡೆಯ ಹಲವು ಒಳ ಉದ್ದೇಶಗಳೂ ಈಡೇರುತ್ತ

ಶಾಂತಾರಾಮ ಹೆಗಡೆ ಕಾಂಗ್ರೆಸ್ ಕ್ಯಾಂಡಿಡೇಟಾದ ಕಾಗೇರಿಗೆ ಅನುಕೂಲವೆಂದೇನೂ ಇಲ್ಲ, ಆಗಲೂ ಹೊ ಮುಖಿ ಶಶಿಗೇ ಗೆಲ್ಲುವ ಛಾನ್ಸ್ ಹೆಚ್ಚು, ಆದರೆ ಕಾಗೇ ಎದುರು ತನಗಾಗುವ ಮುಜುಗರ ತಪ್ಪಿಸಿಕೊಳ್ಳಬಹುದ ದೇಶಪಾಂಡೆ ಸಾಹೇಬರು ಅಷ್ಟೇ. ಜತೆಗೆ ಪಕ್ಕ ಮುಂಡಗೋಡು ಕ್ಷೇತ್ರದಲ್ಲಿ ಕಳೆದ ಬಾರಿ ಸಣ್ಣ ಅಂತರದ ಸೋತ ಗಣಿ ಕಳ್ಳ-ಮ್ಯಾಗಿ ಶಿಷ್ಯ ಶಿವರಾಮ ಹೆಬ್ಬಾ ಎಂಬ ಬ್ರಾಹ್ಮಣನಿಗೆ ಟಿಕೆಟ್ ತಪ್ಪಿಸಬೇಕೆಂಬ ಆಸೆಯ ಈಡೇರುತ್ತದೆ. ಅಕ್ಕ-ಪಕ್ಕದ ಕ್ಷೇತ್ರದಲ್ಲಿ ಒಂದೇ ಜಾತಿ ಸೇರಿದವರಿಗೆ ಕಾಂಗ್ರೆಸ್ ಟಿಕೆಟ್ ಕೊಡುವುದುಂಟ ಮುಂಡಗೋಡಲ್ಲಿ ಹಾಲಿ ಬಿಜೆಪಿ ಶಾಸಕ-ಯಡ್ಡಿ ಮಹಾತ್ಮ ಸ್ವಜಾತಿ ಅನುಯಾಯಿ ವಿ.ಎಸ್. ಪಾಟೀಲ್ ಕಾಂಗ್ರೆ ಕ್ಯಾಂಡಿಡೇಟಾಗುವ ಸಾಧ್ಯತೆಯಿದೆ. ಯಡ್ಡಿಯೇ ಪಾಟೀಲ ಕಾಂಗ್ರೆಸ್ ಸೇರಿ ಗೆದ್ದು ಬಾ ಎಂದು ಸಲಹೆ ಕೊಟ್ಟಿದ್ದಲ್ಲ ಕಾಂಗ್ರೆಸ್‌ನಲ್ಲೂ ಕೈಯಾಡಿಸಿ ಆತನಿಗೆ ಟಿಕೆಟ್ ಸಿಗುವಂ ಮಾಡುತ್ತಲೂ ಇದ್ದಾರೆ.

ಹವ್ಯಕ-ಬ್ರಾಹ್ಮಣ ಸ್ವಾಮಿದ್ವಯರು ಮತ್ತು ಕೊಂಕ ಬ್ರಾಹ್ಮಣ ದೇಶಪಾಂಡೆಗಳ ರಹಸ್ಯ ಕಾರ್ಯಾಚರಣೆ ಶಿ ಸೀಮೆಯ ಚುನಾವಣಾ ರಂಗ ತಾಲೀಮಿಗೆ ದಿನಕ್ಕೊಂ ಆಯಾಮ ಕೊಡುತ್ತಿರುವುದಂತೂ ನಿಜ. ಹಾಗೆಯೇ ತಾ ತುಳಿದಂತೆಲ್ಲ ಮುದುಡಿಕೊಂಡು ರಾಜಕಾರಣವ ಬಿಟ್ಟೋಡುತ್ತಾನೆಂದು ಭಾವಿಸಿದ್ದ ಶಶಿಭೂಷಣ್ ಹೆ ತಿರುಗಿ ನಿಂತು ಸೆಡ್ಡು ಹೊಡೆಯುತ್ತಿದ್ದಾನೆ. ಇದು ಸೊ ಸೀನಿಯರ್ ಕಾಗೇರಿಗೆ ತಲೆಹೋಗುವಂಥ ಸವಾ ಅಕಟಕಟಾ.... ಕಾಗೇರಿ ಅಪಮಾನದಿಂದ ಕುದಿಯುತ್ತಿದ ಶಶಿ ಜೈಂಟ್ ಕಿಲ್ಲರ್ ಆಗುವರಾ? ಅಂಥದೊಂ ಕುತೂಹಲದ ಚರ್ಚೆ ಈ ಜಿಲ್ಲೆಯ ರಾಜಕಾರಣ ಜಗುಲಿಯಲ್ಲಿ ಬಾಯ್ತುಂಬ ನಡೆಯುತ್ತಿದೆ!!

■ ನಹು

ಚಿತ್ರದುರ್ಗ: ಬಿಜೆಪಿಗೆ ಎಡವಟ್ಟು

ಚಿತ್ರದುರ್ಗ ಜಿಲ್ಲೆಯಲ್ಲಿ ಯಡಿಯೂರಪ್ಪನ ನೂತನ ರಾಜಕೀಯ ಪಕ್ಷವಾದ ಕರ್ನಾಟಕ ಜನತಾ ಪಾರ್ಟಿಯ ಪರ ಗಾಳಿ ಬೀಸುತ್ತಿಲ್ಲ. ಈ ಜಿಲ್ಲೆಯಲ್ಲಿ ಬಿಜೆಪಿಯ ಅಸ್ತಿತ್ವವೇ ಇಲ್ಲದಿರುವಾಗ ಇನ್ನು ಕೆಜೆಪಿಯ ಅಲೆ ಇರುವುದಾದರೂ ಹೇಗೆ?! ಇಲ್ಲಿರುವ ಆರು ವಿಧಾನ ಸಭಾ ಕ್ಷೇತ್ರಗಳ ಪೈಕಿ ಕಳೆದ ಚುನಾವಣೆ ಸಂದರ್ಭದಲ್ಲಿ ಚಳ್ಳಕೆರೆ ಮತ್ತು ಹೊಳಲ್ಕೆರೆ ಬಿಜೆಪಿ ಪಾಲಾಗಿದ್ದರೆ ಉಳಿದ ನಾಲ್ಕೂ ಕ್ಷೇತ್ರಗಳಲ್ಲಿ ಕಾಂಗ್ರೆಸ್, ಜೆಡಿಎಸ್ ಮತ್ತು ಪಕ್ಷೇತರರು ಗೆದ್ದಿದ್ದರು.

ಚಳ್ಳಕೆರೆ: ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾದ ಚಳ್ಳಕೆರೆಯಿಂದ ತಿಪ್ಪೇಸ್ವಾಮಿ ಬಿಜೆಪಿ ಶಾಸಕರಾಗಿದ್ದರೂ ಈತ ಮೂಲತಃ ಜನತಾ ಪರಿವಾರದವರು. 2008ರ ಚುನಾವಣೆಯಲ್ಲಿ ಇತರೆ ಪ್ರಮುಖ ರಾಜಕೀಯ ಪಕ್ಷಗಳು ಇವರನ್ನು ಕಡೆಗಣಿಸಿದ್ದರಿಂದ ಅವರು ವಿಧಿ ಇಲ್ಲದೆ ಬಿಜೆಪಿಯೊಂದಿಗೆ ಗುರುತಿಸಿಕೊಂಡಿದ್ದರು. ಹೀಗೆ ರಾಜಕೀಯ ಕಾರಣಕ್ಕೆ ಅವರು ಕಮಲದ ಸಂಗ ಮಾಡಿದ್ದರೂ ಅವರು ಚಡ್ಡಿ ತೊಟ್ಟವರಲ್ಲ. ಅಷ್ಟೇ ಅಲ್ಲ, ಅಧಿಕಾರಕ್ಕಾಗಿ ಚಡ್ಡಿಗಳ ಚಿತ್ತಾಟದಲ್ಲಿ ಯಾವ ಬಣದೊಂದಿಗೂ ಗುರುತಿಸಿ ಕೊಂಡವರಲ್ಲ. ಇಂತಹ ತಿಪ್ಪೇಸ್ವಾಮಿಯಿಂದಾಗಿಯೇ ಚಳ್ಳಕೆರೆಯಲ್ಲಿ ಬಿಜೆಪಿ ಗೆದ್ದಿದ್ದರೂ ಬರುವ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿಗೆ ಎಡವಟ್ಟಾಗುವ ನಿರೀಕ್ಷೆಗಳಿವೆ.

ಈಗ ಶಾಸಕ ತಿಪ್ಪೇಸ್ವಾಮಿಯ ಆರೋಗ್ಯ ಸರಿ ಇಲ್ಲ. ಹಾಗಾಗಿ ಅವರ ಮಗ ಕುಮಾರಸ್ವಾಮಿಯೇ ತಂದೆಯ ರಾಜಕಾರಣದ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾನೆ. ಬರಲಿರುವ ಚುನಾವಣೆಯಲ್ಲಿ ತಂದೆಯ ಬದಲಾಗಿ ಈತನೇ ಸ್ಪರ್ಧಿಸುವುದು ಗ್ಯಾರಂಟಿಯಾಗಿದೆ. ಆದರೆ ಕುಮಾರಸ್ವಾಮಿಗೆ ಬಿಜೆಪಿಯಿಂದ ಸ್ಪರ್ಧಿಸುವ ಮನಸ್ಸಿಲ್ಲ. ಈ ಕಾರಣಕ್ಕೆ ಆತನೀಗ ಜೆಡಿಎಸ್ ಬಾಗಿಲು ತಟ್ಟುತ್ತಿದ್ದಾನೆ. ಮಧ್ಯಮಧ್ಯೆ ಯಡ್ಡಿಯ ಕೆಜೆಪಿ ಕಡೆಯೂ ನೋಟ ಬೀರುತ್ತಿದ್ದಾನೆ.

ಈ ಮಧ್ಯೆ ಕಾಂಗ್ರೆಸ್ ಪಕ್ಷದ ರಘುಮೂರ್ತಿ ಕಳೆದ ನಾಲ್ಕು ವರ್ಷಗಳಿಂದ ಕ್ಷೇತ್ರದಲ್ಲಿ ಕೆಲಸ ಮಾಡಿ ಜನರ ಕಷ್ಟಸುಖಗಳಿಗೆ ಸ್ಪಂದಿಸಿದ್ದಾರೆ. ಮುಂದಿನ ಚುನಾವಣೆಯಲ್ಲಿ ಇವರಿಗೆ ಕಾಂಗ್ರೆಸ್ ಟಿಕೆಟ್ ಸಿಗುವುದು ಗ್ಯಾರಂಟಿ ಆಗಿದೆ. ರಘುಮೂರ್ತಿಯ ಶ್ರಮ ಮತ್ತು ಸಂಘಟನಾಶಕ್ತಿಯಿಂದಲೇ ಕಾಂಗ್ರೆಸ್ ಗೆಲುವು ನಿಶ್ಚಿತ ಎಂಬ ವಾತಾವರಣ ಕ್ಷೇತ್ರದಲ್ಲಿ ಸೃಷ್ಟಿಯಾಗಿದೆ.

ಇನ್ನು ಗಣಿ ಕಳ್ಳ ಶ್ರೀರಾಮುಲು ನೇತೃತ್ವದ ಬಿಎಸ್ಆರ್ ಪಾರ್ಟಿಯಿಂದ ನಾಗರಾಜ ಎಂಬಾತ ಸ್ಪರ್ಧಿಸಲು ಸಜ್ಜಾಗುತ್ತಿದ್ದಾನೆ. ಈ ನಾಗರಾಜ ಬೆಂಗಳೂರಿನ ಬಿಬಿಎಂಪಿಯಲ್ಲಿ ಇಂಜಿನಿಯರ್ ಆಗಿದ್ದವನು. ಬಿಬಿಎಮ್‌ಪಿಯಲ್ಲಿ ಹಣವನ್ನು ಲೂಟಿ ಹೊಡೆದಿದ್ದ ಈತ ಈಗ ಸ್ವಯಂನಿವೃತ್ತಿ ಪಡೆದು ಸಮಾಜಸೇವಕನ ಗೆಟಪ್ಪು ಧರಿಸಿದ್ದಾನೆ. ಈ ಹಿಂದೆ ಲಪಟಾಯಿಸಿದ ಹಡಬೆ ಹಣವನ್ನೆಲ್ಲ ಚುನಾವಣೆಯಲ್ಲಿ ಈತ ಸುರಿಯುವುದು ಮಾತ್ರ ಗ್ಯಾರಂಟಿ ಆಗಿದೆ.


ಒಂದೆಡೆ ಕುಮಾರಸ್ವಾಮಿ ಯಾವ ಪಕ್ಷ ಸೇರಬೇಕೆಂದು ಮೀನಾಮೇಷ ಎಣಿಸುತ್ತಿದ್ದರೆ ಇನ್ನೊಂದೆಡೆ ರಘುಮೂರ್ತಿ ಜನನಾಯಕನಾಗಿ ಹೊಮ್ಮಿದ್ದಾರೆ. ಮತ್ತೊಂದೆಡೆ ಬಿಎಸ್‌ಆರ್ ಪಕ್ಷ ಪುಂಡರನ್ನು ಕಟ್ಟಿಕೊಂಡು ಹಣದ ಹೊಳೆ ಹರಿಸಲು ರೆಡಿಯಾಗಿದೆ.


ಇಂತಹ ಪರಿಸ್ಥಿತಿಯಲ್ಲಿ ಬಿಜೆಪಿ ಚಳ್ಳಕೆರೆ ಕ್ಷೇತ್ರದಿಂದ ಸಂಪೂರ್ಣವಾಗಿ ಮಾಯವಾಗುವುದು ಗ್ಯಾರಂಟಿ ಎನ್ನುತ್ತಿದ್ದಾರೆ ಇಲ್ಲಿನ ಜನ.


ಚಿತ್ರದುರ್ಗ: ಹಾಲಿ ಶಾಸಕ ಎಸ್.ಕೆ.ಬಸವರಾಜನ್ ಕಳೆದ ಬಾರಿ ಜೆಡಿಎಸ್‌ನಿಂದ ಗೆದ್ದು ಬಂದಿದ್ದರೂ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಪ್ರಯತ್ನ ನಡೆಸಿದ್ದಾರೆ. ಜೆಡಿಎಸ್‌ನೊಂದಿಗೆ ಈತನ ಸಂಬಂಧ ಹಳಸಿರುವುದರಿಂದ ಆತ ಆ ಪಕ್ಷವನ್ನು ತೊರೆಯುವುದು ಸ್ಪಷ್ಟವಾಗಿದೆ. ಹಾಗೊಂದು ವೇಳೆ ಕಾಂಗ್ರೆಸ್‌ನಿಂದ ನಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾದರೆ ಬಸವರಾಜನ್ ಯಡ್ಡಿಯ ಕೆಜೆಪಿ ಕಡೆ ವಾಲುವುದು ಗ್ಯಾರಂಟಿ.

ಈಗ ಕಾಂಗ್ರೆಸ್‌ನಿಂದ ಅಡಿಕೆ ವ್ಯಾಪಾರಿ ಮಂಜುನಾಥ ಸ್ಪರ್ಧಿಸುವುದು ಗ್ಯಾರಂಟಿ ಆಗಿದೆ. ಮಂಜುನಾಥರಿಗೆ ದಾವಣಗೆರೆಯ ಧಣಿ ಶಾಮನೂರು ಮನೆತನದ ಕೃಪಾಶೀರ್ವಾದ ಇದೆ. ಖಡಕ್ಕು ವ್ಯಕ್ತಿತ್ವದ ಮಂಜುನಾಥರಿಗೆ ಜನಬಳಕೆ ಅಷ್ಟಕ್ಕಷ್ಟೇ. ಇವರಿಗೆ ತಾರಾತಿಗಡಿ ಗೊತ್ತಿರದ ಕಾರಣ ಇತರೆ ರಾಜಕಾರಣಿಗಳೂ ಇವರನ್ನು ಪ್ರೀತಿಸುವುದು ಕಷ್ಟ. ಆದರೆ ಮಂಜುನಾಥರ ಮಗ ಗಿರಿಜಾನಕಲ್‌ನ ಸೌಮ್ಯತೆ ಮತದಾರರಿಗೆ ಹಿಡಿಸಿದೆ. ಗಿರಿಜಾನಕಲ್ ಜಿಲ್ಲಾ ಪಂಚಾಯತಿಯ ಸದಸ್ಯನಾಗಿ ದುರ್ಗದ ಮತದಾರರಿಗೆ ಆಪ್ತರಾಗಿದ್ದಾರೆ. ಅಪ್ಪನ ಪರವಾಗಿಯೇ ಮಗ ಕೆಲಸ ಮಾಡುವುದರಿಂದ ಮತ್ತು ಇಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತನ್ನದೇ ಆದ ಮತಗಳಿರುವುದರಿಂದ ಕಾಂಗ್ರೆಸ್ ಇಲ್ಲಿ ಗೆಲ್ಲುವ ಎಲ್ಲಾ ಸೂಚನೆಗಳು ಇವೆ.









ಹೊಸದುರ್ಗ: ಹೊಸದುರ್ಗದ ಪಕ್ಷೇತರ ಶಾಸಕ ಗೂಳಿಹಟ್ಟಿ ಶೇಖರ್ ಎದುರು ಹಲವಾರು ಸಮಸ್ಯೆಗಳಿವೆ. ಆ ಎಲ್ಲಾ ಸಮಸ್ಯೆಗಳ ಕೇಂದ್ರ ಬಿಂದು ಯಡಿಯೂರಪ್ಪ. ಬರುವ ಚುನಾವಣೆಯಲ್ಲಿ ಹೇಗಾದರು ಮಾಡಿ ಗೂಳಿಹಟ್ಟಿಯನ್ನು ಸೋಲಿಸಬೇಕೆನ್ನುವ ಇರಾದೆ ಯಡ್ಡಿಯದ್ದು. ಗೂಳಿಹಟ್ಟಿ ಶೇಖರ್ ಪಕ್ಷೇತರ ಶಾಸಕರಾಗಿದ್ದರೂ ಯಡ್ಡಿಯ ಸರ್ಕಾರಕ್ಕೆ ಬೆಂಬಲ ನೀಡಿದ್ದರಲ್ಲದೆ ಆ ಮೂಲಕ ಮಂತ್ರಿಗಿರಿಯನ್ನೂ ಪಡೆದಿದ್ದರು. ಆದರೆ ಅನಂತರ ಬಿಜೆಪಿಯೊಳಗಿನ ಗುಂಪುಗಾರಿಕೆ-ರೆಸಾರ್ಟ್ ರಾಜಕಾರಣದಿಂದ ಬೇಸತ್ತು ಯಡ್ಡಿ ಸರಕಾರದ ವಿರುದ್ಧ ಗೂಳಿಹಟ್ಟಿ ತಿರುಗಿಬಿದ್ದಿದ್ದರು. ಆಗ ಯಡ್ಡಿಯ ಸರ್ಕಾರ ಅಲುಗಾಡಿತ್ತು ಮಾತ್ರವಲ್ಲ ವಿಧಾನ ಸಭೆಯ ಅಧಿವೇಶನದಲ್ಲೇ ಯಡ್ಡಿ ವಿರುದ್ಧ ಗೂಳಿಹಟ್ಟಿ ಕೆಂಡಕಾರಿದ್ದರು.

"ನನ್ನ ಕ್ಷೇತ್ರಕ್ಕೆ ಅನುದಾನ ನೀಡಲು ಯಡಿಯೂರಪ್ಪ ತಾತ್ಸಾರ ಮಾಡಿದರು" ಎಂದು ಬೊಬ್ಬೆ ಹಾಕಿದ್ದಕ್ಕೆ ಮಂತ್ರಿಗಿರಿಯನ್ನು ಗೂಳಿಹಟ್ಟಿ ಕಳೆದುಕೊಂಡಿದ್ದರು. ಅನಂತರ ಯಡ್ಡಿಯ ವಿರುದ್ಧ ರಾಜಕೀಯ ಮಾಡಿ ಸದಾನಂದ ಗೌಡರಿಗೆ ಬೆಂಬಲ ನೀಡಿದ ಗೂಳಿಹಟ್ಟಿ ಸಹಜವಾಗಿಯೇ ಯಡ್ಡಿಯ ಕೆಂಗಣ್ಣಿಗೆ ಗುರಿಯಾದರು.

ಇಂತಹ ಗೂಳಿಹಟ್ಟಿ ವಿರುದ್ಧ ಯಡ್ಡಿ ತನ್ನ ಪರಮ ಶಿಷ್ಯನೂ ಆದ, ತನ್ನ ಕುಲಸ್ಥನೂ ಆದ ಲಿಂಗಮೂರ್ತಿ ಎಂಬಾತನನ್ನು ಕೆಜೆಪಿಯಿಂದ ನಿಲ್ಲಿಸುವ ಸೂಚನೆಗಳು ಕಂಡುಬರುತ್ತಿವೆ. ಹೊಸದುರ್ಗ ಕ್ಷೇತ್ರದಲ್ಲಿ ಲಿಂಗಮೂರ್ತಿಯ ಕುಂಚಿಟಿಗ ಲಿಂಗಾಯತರ ಮತಗಳೇ ಹೆಚ್ಚಾಗಿರುವುದರಿಂದ ಶೇಖರನನ್ನು ಮನೆಗಟ್ಟುವ ಕನಸು ಯಡ್ಡಿಗಿವೆ.

ಕಾಂಗ್ರೆಸ್‌ನಿಂದ ಮಾಜಿ ಶಾಸಕ ಗೋವಿಂದಪ್ಪ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದಾರೆ. ಕಳೆದ ಬಾರಿ ಇದೇ ಗೋವಿಂದಪ್ಪ ಗೂಳಿಹಟ್ಟಿ ವಿರುದ್ಧ ಸೋತಿದ್ದರೂ ಈ ಬಾರಿಯೂ ಸೋಲುವ ಸೂಚನೆಗಳಿವೆ.

ಹಾಗೆ ನೋಡಿದರೆ ಈ ಕ್ಷೇತ್ರದಲ್ಲಿ ಬಿಜೆಪಿ, ಜನತಾ ದಳ ಮತ್ತು ಕೆಜೆಪಿಗಳಿಗೆ ಅಸ್ತಿತ್ವವೇ ಇಲ್ಲದಿರುವುದರಿಂದ ಬರುವ ಚುನಾವಣೆಯ ಹಣಾಹಣಿ ಪಕ್ಷೇತರ ಗೂಳಿಹಟ್ಟಿ ಮತ್ತು ಕಾಂಗ್ರೆಸ್‌ನ ಗೋವಿಂದಪ್ಪನ ಮಧ್ಯೆಯೇ ನಡೆಯುತ್ತದೆ. ಒಂದು ಅರ್ಥದಲ್ಲಿ ಇಲ್ಲಿ ಇತರೆ ಎಲ್ಲಾ ರಾಜಕೀಯ ಪಕ್ಷಗಳಿಗೂ ಪಕ್ಷವೇ ಇಲ್ಲದ ಗೂಳಿಹಟ್ಟಿ ಶೇಖರ ದೊಡ್ಡ ತಲೆನೋವಾಗಿರುವುದಂತೂ ಖರೆ.

ಹೊಳಲ್ಕೆರೆ: ಹಾಲಿ ಶಾಸಕ ಚಂದ್ರಪ್ಪ ಕಳೆದ ಬಾರಿ ಬಿಜೆಪಿಯಿಂದ ಗೆದ್ದು ಬಂದಿದ್ದರೂ ಈಗ ಅತಂತ್ರನಾಗಿದ್ದಾನೆ. ಈಗ ಈತ ಬಿಜೆಪಿಯಲ್ಲಿದ್ದರೂ ಯಡ್ಡಿಯ ಹಿಂದೆ ಹೊರಟಿದ್ದಾನೆ. ಬಿಜೆಪಿಯಿಂದ ಈತನಿಗೆ ಬರುವ ಚುನಾವಣೆಯಲ್ಲಿ ಟಿಕೆಟು ಸಿಗುವ ಅನುಮಾನಗಳಿವೆ. ಆ ಕಾರಣಕ್ಕೇ ಈತ ಯಡ್ಡಿಯ ಕೆಜೆಪಿಯಲ್ಲಿ ಕಾಣಿಸಿಕೊಳ್ಳುವ ಮೂಲಕ ಕ್ಷೇತ್ರದಲ್ಲಿ ಬಿಜೆಪಿಯನ್ನು ನಾಶ ಮಾಡುವ ಯಡ್ಡಿಯ ಮನದಾಸೆಗೆ ಇಂಬು ನೀಡುತ್ತಿದ್ದಾನೆ.

ಕಾಂಗ್ರೆಸ್‌ನಿಂದ ಬಿಜೆಪಿಗೆ ವಲಸೆ ಬಂದಿರುವ ಜಿ.ಎಸ್. ಮಂಜುನಾಥ ಬಿಜೆಪಿಯ ಅಭ್ಯರ್ಥಿ ಆಗಲು ಯತ್ನಿಸುತ್ತಿದ್ದಾನೆ. ಈ ಮಧ್ಯೆ ಕಮಲ ಪಕ್ಷದ ಟಿಕೆಟ್ ಪಡೆಯಲು ದೇವೇಂದ್ರ ನಾಯ್ಕ ಎಂಬಾತನೂ ಪ್ರಯತ್ನಿಸು ತ್ತಿದ್ದಾನೆ. ಈಗ ಕೂಡ ಜೆಡಿಎಸ್‌ನಿಂದ ಬಿಜೆಪಿಗೆ ವಲಸೆ ಬಂದವನೇ. ಕಳೆದ ಬಾರಿ ಈತ ಜನತಾ ದಳದಿಂದ ಸ್ಪರ್ಧಿಸಿ ಮೂರನೇ ಸ್ಥಾನ ಪಡೆದಿದ್ದ. ಕಾಂಗ್ರೆಸ್‌ನಿಂದ ಆಂಜನೇಯ ಸ್ಪರ್ಧಿ ಆಗುವುದು ಗ್ಯಾರಂಟಿ. 2008 ಚುನಾವಣೆಯಲ್ಲಿ ಕೆಲವೇ ಮತಗಳಿಂದ ಸೋತಿದ್ದ ಆಂಜನೇಯನ ಪರ ಅನುಕಂಪದ ಅಲೆ ಕ್ಷೇತ್ರದಲ್ಲಿ ಈಗ ಕಾಣಿಸುತ್ತಿದೆ.

ಜೆಡಿಎಸ್‌ನಿಂದ ಮಹದೇವಪ್ಪ ಸ್ಪರ್ಧೆಗಿಳಿಯಲಿದ್ದಾನೆ. 'ಕೇಬಿ ಮಹದೇವಪ್ಪ' ಎಂದೇ ಹೆಸರು ಮಾಡಿರುವ ಈತ ಈ ಹಿಂದೆ ಬೆಸ್ಕಾಂನಲ್ಲಿ ಇಂಜಿನಿಯರ್ ಆಗಿದ್ದವನು. ಬೆಸ್ಕಾಂನಲ್ಲಿ ಲೂಟಿ ಮಾಡಿದ ನಂತರ ಸ್ವಯಂನಿವೃತ್ತಿ ಪಡೆದು ಈಗ ರಾಜಕಾರಣಕ್ಕೆ ಎಂಟ್ರಿ ಕೊಟ್ಟಿದ್ದಾನೆ. ಆದರೆ ಮಹದೇವಪ್ಪ ಬರುವ ಚುನಾವಣೆಯಲ್ಲಿ ಮಠ ಸೇರುವುದು ಗ್ಯಾರಂಟಿ ಎಂದು ಜನರೇ ತಮಾಷೆ ಮಾಡುತ್ತಿದ್ದಾರೆ.

ಒಂದು ರೀತಿಯಲ್ಲಿ ಕೆಜೆಪಿ ಪಕ್ಷ ಹುಟ್ಟಿಕೊಂಡಿರುವುದು ಇಲ್ಲಿ ಕಾಂಗ್ರೆಸ್‌ಗೆ ಲಾಭ ತಂದು ಕೊಡಲಿದೆ. ಯಾಕೆಂದರೆ ಕೆಜೆಪಿ ಬಿಜೆಪಿಯ ಮತಗಳನ್ನೇ ಕೀಳುತ್ತದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ತಾನು ಕ್ಷೇತ್ರದಲ್ಲಿ ಕಳೆದುಕೊಂಡಿರುವ ರಾಜಕೀಯ ಅಸ್ತಿತ್ವವನ್ನು ಮತ್ತೆ ಪಡೆಯಲು ಹವಣಿಸುತ್ತಿದೆ.

ಹಿರಿಯೂರು: ಹಾಲಿ ಪಕ್ಷೇತರ ಶಾಸಕ ಸುಧಾಕರನ ವರ್ಚಸ್ಸು ಪ್ರತಾಪ ಸೇರುತ್ತಿದೆ. ಹಾಗಾಗಿ ಮುಂದಿನ ಚುನಾವಣೆಯಲ್ಲಿ ಸುಧಾಕರ ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಪ್ರಯತ್ನಗಳನ್ನು ಶುರುಹಚ್ಚಿಕೊಂಡಿದ್ದಾನೆ. ಈ ನಿಟ್ಟಿನಲ್ಲಿ ಸುಧಾಕರ ಇತ್ತೀಚಿಗೆ ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಮತ್ತು ಎಸ್.ಎಂ.ಕೃಷ್ಣರನ್ನು ಭೇಟಿ ಮಾಡಿ ಬಂದಿದ್ದಾನೆ.


ಸುಧಾಕರ ಸಿದ್ದರಾಮಯ್ಯ ಮತ್ತು ಕೃಷ್ಣರನ್ನು ಭೇಟಿ ಮಾಡಿದ್ದರ ಪರಿಣಾಮ ಎಂಬಂತೆ ಮೊನ್ನೆಯತನಕ ಕಾಂಗ್ರೆಸ್ ಟಿಕೆಟ್‌ಗಾಗಿ ಕಾದು ಕೂತಿದ್ದ ಕೋದಂಡರಾಮಯ್ಯ ಜೆಡಿಎಸ್‌ಗೆ ವಲಸೆ ಹೋಗುವ ಪ್ರಯತ್ನ ಶುರುಹಚ್ಚಿಕೊಂಡಿದ್ದು, ಅವರು ಈಗಾಗಲೇ ದೇವೇಗೌಡ ಮತ್ತು ಕುಮಾರಸ್ವಾಮಿಯನ್ನು ಭೇಟಿ ಮಾಡಿದ ಸುದ್ದಿ ಕ್ಷೇತ್ರದ ಸುತ್ತ ಹಬ್ಬಿದೆ. ಈ ಭೇಟಿಗಳು ಹಿರಿಯೂರಿನ ರಾಜಕಾರಣವನ್ನೇ ಬದಲಾಯಿಸುವಂತೆ ಕಾಣಿಸುತ್ತಿದೆ.

ಯಾಕೆಂದರೆ ಸದ್ಯದ ವಾತಾವರಣದಲ್ಲಿ ಕೋದಂಡ ರಾಮಯ್ಯ ಗೆಲ್ಲುವ ಕುದುರೆಯಂತೆ ಕಾಣಿಸುತ್ತಿದ್ದಾರೆ. ಕೋದಂಡರಾಮಯ್ಯನವರ ಗೊಲ್ಲ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಕ್ಷೇತ್ರವಿದು. ಕೋದಂಡ ರಾಮಯ್ಯನಂತಹ ಸಭ್ಯಸ್ಥ ಯಾವ ಪಾರ್ಟಿಯಿಂದ ಸ್ಪರ್ಧಿಸಿದರೂ ಈ ಬಾರಿ ಅವರು ಶಾಸಕರಾಗುವ ಪೂರಕ ವಾತಾವರಣ ಇಲ್ಲಿದೆ. ಆದ್ದರಿಂದ ಕಾಂಗ್ರೆಸ್ ಕೋದಂಡ ರಾಮಯ್ಯನವರನ್ನು ನಿರ್ಲಕ್ಷಿಸಿದರೆ ಇಡೀ ಕ್ಷೇತ್ರವನ್ನೇ ಕಳೆದುಕೊಳ್ಳುವ ಅಪಾಯವಿದೆ. ದೇವೇಗೌಡರ ಮಾನಸ ಪುತ್ರನೆಂದೇ ಗುರುತಿಸಿ ಕೊಂಡಿರುವ ಯಶೋಧರ ಜೆಡಿಎಸ್‌ನಿಂದ ಸ್ಪರ್ಧಿಸುವ ಸೂಚನೆಗಳಿವೆ. ಅತ್ತ ಕಾಂಗ್ರೆಸ್‌ನಿಂದ ಸುಧಾಕರ, ಇತ್ತ ಜೆಡಿಎಸ್ ನಿಂದ ಯಶೋಧರ ಅಭ್ಯರ್ಥಿಗಳಾದರೆ ಕೋದಂಡ ರಾಮಯ್ಯ ಅತಂತ್ರರಾಗುತ್ತಾರೆ. ಆಗ ಯಡ್ಡಿ ಇವರಿಗೆ ಗಾಳ ಹಾಕಬಹುದು. ಹಾಗೇನಾದರೂ ಆದಲ್ಲಿ ಈ ಜಿಲ್ಲೆಯ ಹಿರಿಯೂರಿನ ಮೂಲಕ ಯಡ್ಡಿಯ ಕೆಜೆಪಿಗೆ ಅಸ್ತಿತ್ವ ಸಿಗಲಿದೆ.

ಒಟ್ಟಾರೆ ಚಿತ್ರದುರ್ಗ ಜಿಲ್ಲೆಯಲ್ಲಿನ ರಾಜಕಾರಣ ಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ತಾನು ಕಳೆದುಕೊಂಡಿರುವ ಅಸ್ತಿತ್ವವನ್ನು ಮರಳಿ ತಂದು ಕೊಡುವ ಸೂಚನೆಗಳಿವೆ. ಹಾಗೆಯೇ ಬಿಜೆಪಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಕೆಜೆಪಿಗೆ ದಾರಿ ಮಾಡಿಕೊಟ್ಟರೂ ಅಚ್ಚರಿ ಇಲ್ಲ.

■ ಟಿ.ಎನ್.ಷಣ್ಮುಖ

ಜೈಲಲ್ಲಿ ರೆಡ್ಡಿಯ ತೇಲ್ ಮಾಲಿಷ್ ಪುರಾಣ



ಇದು ನಡೆದದ್ದು ಕೆಲವು ತಿಂಗಳುಗಳ ಹಿಂದೆಯಾದರೂ ಈ ಕುರಿತು ಕನ್ನಡಾಂಬೆಯ ಪುತ್ರರತ್ನರಿಗೆ ವಿವರಗಳು ಗೊತ್ತಿಲ್ಲದಿರುವುದರಿಂದ ನಾವು ಆ ಕೊರತೆಯನ್ನು ನೀಗಿಸಲು ಇಲ್ಲಿ ಯತ್ನಿಸುತ್ತಿದ್ದೇವೆ. ಒಂದು ವರ್ಷಕ್ಕೂ ಹಿಂದೆ ಈ ಗಾಲಿ ಜನಾರ್ದನ ರೆಡ್ಡಿ ಹೈದರಾಬಾದಿನಲ್ಲಿರುವ ಐತಿಹಾಸಿಕ ಚಂಚಲಗುಡ ಜೈಲು ಸೇರಿದ್ದು ಈಗ ಇತಿಹಾಸ. ಜೈಲಿನಲ್ಲಿ ಕೈದಿ ನಂಬರ್ 697 ಎಂಬ ಹೊಸ ಬಿರುದನ್ನು ಪಡೆದ

ಕೋತಿ ತಾನು ಕೆಡುವುದಲ್ಲದೆ ವನವನ್ನೆಲ್ಲ ಕೆಡಿಸಿತು' ಎಂಬ ಗಾದೆ ಮಾತು ಗಣಿ ಕಳ್ಳ ಜನಾರ್ದನ ರೆಡ್ಡಿಗೆ ಚೆನ್ನಾಗಿ ಅನ್ವಯಿಸುತ್ತದೆ. ಈತ ರಾಜ್ಯದ ಗಣಿ ಸಂಪತ್ತನ್ನು ಲೂಟಿ ಮಾಡಿದ್ದಕ್ಕೆ ಜೈಲಿಗೆ ಹೋದನಲ್ಲದೆ ತನ್ನೊಂದಿಗೆ ತನ್ನ ಸಂಬಂಧಿ ದಶರಥರಾಮ ರೆಡ್ಡಿ, ಸಹೋದರ ಸೋಮಶೇಖರ ರೆಡ್ಡಿ ಮತ್ತು ಮಿತ್ರ ಶ್ರೀರಾಮುಲುವಿನ ಅಳಿಯ ಸುರೇಶ್ ಬಾಬು ಕೂಡ ಜೈಲುಕಂಬಿಯನ್ನು ಎಣಿಸುವಂತೆ ಮಾಡಿದ. ಹೋಗಲಿ, ಜೈಲಿಗೆ ಹೋದವನು ಕಾನೂನು ತನ್ನ ತೀರ್ಪು ನೀಡಲಿ ಎಂದು ಸುಮ್ಮನಾದನಾ? ಇಲ್ಲ, ಕಾನೂನು ಪಾಲಕರಾಗಿದ್ದವರಿಗೇ ಕೋಟ್ಯಾಂತರ ರೂಪಾಯಿಗಳ ಆಮಿಷ ತೋರಿಸಿ ಬೇಲ್ ಪಡೆಯಲು ಯತ್ನಿಸಿ, ಮೂವರು ನ್ಯಾಯಾಧೀಶರಿಗೂ ಕೃಷ್ಣ ಜನ್ಮಸ್ಥಾನದ ದರ್ಶನ ಮಾಡಿಸಿದ. ಹೀಗೆ ಜೈಲುವಾಸ ಸದ್ಯಕ್ಕೆ ಖಾಯಂ ಎಂದು ಗೊತ್ತಾದಾಗಲೂ ಈತ ಸುಮ್ಮನಿರಲಿಲ್ಲ, ದುಡ್ಡಿಗಾಗಿ ಓರ್ವ ಬಡ ಪೊಲೀಸ್ ಪೇದೆಯ ಮಗನಾದ ಜೈಲುವಾಸ ಜೈಲಿನಲ್ಲೂ ಐಷಾರಾಮಿ ಜೀವನ ನಡೆಸಲು ಯತ್ನಿಸಿ ಈಗ ಸ್ವತಃ ಜೈಲರ್ ಕೂಡ ಜೈಲು ಸೇರುವಂತೆ ಮಾಡಿದ್ದಾನೆ.

ಈ ಚೋರನನ್ನು ಆರಂಭದಲ್ಲಿ ಸಾಮಾನ್ಯ ವಿಚಾರಣಾಧೀನ ಕ್ರಿಮಿನಲ್‌ಗಳ ಜೊತೆ ಇಡಲಾಗಿತ್ತು. ಆದರೆ ತಾನು ಶ್ರೀಕೃಷ್ಣದೇವರಾಯನ ಆಧುನಿಕ ಅವತಾರ ಎಂದೇ ನಂಬಿರುವ, ವಜ್ರ ಖಚಿತ ಸಿಂಹಾಸನದ ಮೇಲೆ ಕೂರುತ್ತಿದ್ದ ಚಿನ್ನದ ಮಂಚದ ಮೇಲೆ ಮಲಗುತ್ತಿದ್ದ ಈತ ಅದು ಹೇಗೆ ಸಾಮಾನ್ಯ ಪಿಕ್‌ಪಾಕೆಟರ್‌ಗಳು ಮತ್ತು 420ಗಳೊಂದಿಗೆ ಇರಲು ಸಾಧ್ಯ? ಅವರೆಲ್ಲ ನೂರು, ಸಾವಿರ ರೂಪಾಯಿಗಳ ವಂಚನೆ ಮಾಡಿದ್ದರೆ ಈತ ಲಕ್ಷಾಂತರ ಕೋಟಿ ರೂಪಾಯಿಗಳನ್ನೇ ಕಬಳಿಸಿದ್ದನಲ್ಲವೇ. ಕಾನೂನು ಸಾಮಾನ್ಯ ಕಳ್ಳರ ಮತ್ತು ದೊಡ್ಡ ಕಳ್ಳರ ನಡುವೆ ಭೇದಭಾವ ಮಾಡದಿರುವುದು ಸರಿಯೇ? ತಾನು ರಾಜಾಧಿರಾಜರಂತೆ ಬದುಕುತ್ತಿದ್ದ ಶ್ರೀಮಂತನೆಂದೂ, ಕರ್ನಾಟಕದ ಹೆಮ್ಮೆಯ ಮಂತ್ರಿ ಆಗಿದ್ದವನೆಂದೂ, ತನಗೆ ಫೈವ್ ಸ್ಟಾರ್ ಜೀವನಶೈಲಿ ರೂಢಿ ಆಗಿದೆ ಎಂದೂ, ಆದ್ದರಿಂದ ತನಗೆ ಜೈಲಿನಲ್ಲಿ ವಿಶೇಷ ಸವಲತ್ತುಗಳನ್ನು ಕೊಡಬೇಕೆಂದೂ ನ್ಯಾಯಾಲಯದ ಮುಂದೆ ಕೋರಿಕೆ ಸಲ್ಲಿಸಿದ. ಅವನ ಅದೃಷ್ಟಕ್ಕೆ ನ್ಯಾಯಾಧೀಶರು ಅದನ್ನು ವಿಚಾರಣಾಧೀನ ಕೈದಿಗಳಿಂದ ಬೇರ್ಪಡಿಸಿ, ಒಂದಿಷ್ಟಾದರೂ ಖಾಸಗಿ ಸ್ಪೇಸ್ ಇರುವ ಜಾಗಕ್ಕೆ ವರ್ಗಾಯಿಸಿದರು. ತಿರುಪತಿ ತಿಮ್ಮಪ್ಪನಿಗೇ 45 ಕೋಟಿ ರೂಪಾಯಿಗಳ ವಜ್ರಖಚಿತ ಕಿರೀಟವನ್ನು ಲಂಚವಾಗಿ ಕೊಟ್ಟು ದೈವ ರಕ್ಷಣೆಯನ್ನು ಪಡೆಯಲು ನೋಡಿದ್ದ ಜನಾರ್ದನ ರೆಡ್ಡಿ ಅಲ್ಲಿಗೂ ಸುಮ್ಮನಾಗಲಿಲ್ಲ. ಚಂಚಲಗುಡ ಜೈಲಿನ ಮುಖ್ಯಸ್ಥನಾಗಿದ್ದ ಸೂಪರಿಂಟೆಂಡೆಂಟ್ ಕೇಶವನಾಯ್ಡು ಎಂಬಾತನಿಗೂ ಸಾಕಷ್ಟು ಲಂಚ ತಿನ್ನಿಸಿ ಜೈಲಿನಲ್ಲೂ ತನಗೆ ವಿಶೇಷ ಸವಲತ್ತುಗಳು ಸಿಗುವಂತೆ ನೋಡಿಕೊಂಡ. ಜನಾರ್ದನ ರೆಡ್ಡಿಯಿಂದ ಸಾಕಷ್ಟು ಅಮೇಧ್ಯವನ್ನು ಪೀಕಿದ ಕೇಶವ ನಾಯ್ಡು ಪ್ರತಿ ದಿನ ಜನಾರ್ದನ ರೆಡ್ಡಿಗೆ ಡ್ರೈ ಕ್ಲೀನ್ ಮಾಡಲಾಗಿದ್ದ ಶುದ್ಧ ಟವಲ್ ಮತ್ತು ಬೆಡ್ ಶೀಟ್‌ಗಳು, ಬೇಕರಿಯಿಂದ ತಾಜಾ ಬಿಸ್ಕತ್, ಬ್ರೆಡ್, ಚಾಕಲೇಟ್, ಬನ್ ಇತ್ಯಾದಿಗಳು, ಮಾರ್ಕೆಟ್ಟಿನಿಂದ ಹಣ್ಣುಹಂಪಲುಗಳು ಸಿಗುವಂತೆ ನೋಡಿಕೊಂಡ. ಅಷ್ಟೇ ಅಲ್ಲ, ರೆಡ್ಡಿಯ ನಾಲಿಗೆಗೆ ತುರುಕೆ ಆದಾಗಲೆಲ್ಲ ರುಚಿಕರವಾದ ಹೈದರಾಬಾದ್ ಬಿರಿಯಾನಿ ಸರಬರಾಜಾಗುವಂತೆ ಎಚ್ಚರ ವಹಿಸಿದ. ಜೊತೆಗೆ ಆಗೀಗ ರೆಡ್ಡಿಗೆ ರೂಢಿ ಆಗಿರುವ ವಿದೇಶಿ ಸ್ಕಾಚ್ ವಿಸ್ಕಿ ಕೂಡ ಸಿಗುವಂತೆ ನೋಡಿಕೊಂಡ. ಕೋಟ್ಯಾಂತರ ರೂಪಾಯಿಗಳ ಲಂಚ ಪಡೆದ ನಾಯ್ಡು ಇಷ್ಟು ಮಾಡಿದರೆ ಸಾಕೆ? ಇಲ್ಲವಲ್ಲ. ಅದಕ್ಕೆ ವಿಚಾರಣಾಧೀನ ಕೈದಿಗಳಲ್ಲೇ ಕೆಲವರನ್ನು ರೆಡ್ಡಿಯ ಅಡುಗೆ ಭಟ್ಟನಾಗಿಯೂ, ಸೇವಕನಾಗಿಯೂ, ಕಂಪ್ಯೂಟರ್ ಬಲ್ಲ ಸಹಾಯಕನಾಗಿಯೂ ನೇಮಿಸಿದ. ಜೊತೆಗೆ ಜೈಲಿನ ಕಂಬಿಗಳನ್ನು ಎಣಿಸಿಎಣಿಸಿ ಸುಸ್ತಾಗಿದ್ದ ರೆಡ್ಡಿಯ ದೇಹಕ್ಕೆ ವಾರಕ್ಕೆರಡು ಬಾರಿ ತೇಲ್ ಮಾಲಿಷ್ ನೀಡಲೂ ಮತ್ತೊಬ್ಬನನ್ನು ನೇಮಿಸಿದ್ದ!

ಸಮಾಜದಲ್ಲಿ ಸಮಾನತೆಯನ್ನು ಬಯಸಿದ್ದಕ್ಕೆ ನಮ್ಮ ಕಾನೂನು ಪಾಲಕರ ಕೆಂಗಣ್ಣಿಗೆ ಗುರಿಯಾಗಿ ಕೆಲವು ವರ್ಷಗಳ ಕಾಲ ಜೈಲು ಸೇರಿದ್ದ ಕುಮಾರ್ ಸಮತಳ ತಮ್ಮ 'ಜೈಲೆಂಬ ಲೋಕದಲ್ಲಿ' ಕೃತಿಯಲ್ಲಿ ವಿವರಿಸಿರುವಂತೆ ಜೈಲಿನೊಳಗೂ ನಮ್ಮ ಸಮಾಜದ ಪುಟ್ಟ ಪ್ರತಿಬಿಂಬ ಇರುತ್ತದೆ. ಆದ್ದರಿಂದ ಜೈಲರ್ ನೆರವಿನಿಂದ ರೆಡ್ಡಿ ಜೈಲಿನಲ್ಲೂ ತನ್ನ ಇಷ್ಟಾನುಗಳನ್ನು ಪೂರೈಸುವ ಸೇವಕರನ್ನು ನೇಮಿಸಿಕೊಂಡಿದ್ದರಲ್ಲಿ ಅಚ್ಚರಿ ಇಲ್ಲ ಬಿಡಿ. ಆದರೆ ಈ ಖದೀಮ ನಾಯ್ಡು ಮತ್ತು ರೆಡ್ಡಿ ಜೋಡಿ ಅಲ್ಲಿಗೆ ತೆಪ್ಪಾಗಲಿಲ್ಲ. ಕಳೆದ ಜನವರಿ ತಿಂಗಳ ಹನ್ನೊಂದರಂದು ರೆಡ್ಡಿಗೆ 46 ವರ್ಷ ತುಂಬಿದಾಗ ಆ ದಿನವನ್ನು ಜೈಲರ್ ನಾಯ್ಡು ದೇಶಕ್ಕೆ ಸ್ವಾತಂತ್ರ ಸಿಕ್ಕಿದ ದಿನದಂತೆ ಸಂಭ್ರಮದಿಂದ ಆಚರಿಸಿದ. ಅವತ್ತು ಚಂಚಲಗುಡ ಜೈಲಿನ ಒಳಗೇ ಇರುವ ಸಾಯಿಬಾಬಾ ದೇವಸ್ಥಾನದಲ್ಲಿ ರೆಡ್ಡಿ ಪರವಾಗಿ ವಿಶೇಷ ಪೂಜೆಗಳನ್ನು, ಹೋಮಹವನಗಳನ್ನೂ ನಡೆಸಿದ. ಜೈಲಿನಲ್ಲಿರುವ ಎಲ್ಲಾ ಕೈದಿಗಳಿಗೂ ಬಿರಿಯಾನಿ, ಚಿಕನ್, ಮಟನ್, ಸಿಹಿ ತಿನಿಸುಗಳ ಭೋಜನವೂ ಸಪ್ಲೈ ಆಯಿತು. ಶ್ರೀಕೃಷ್ಣದೇವರಾಯನ ತುಂಡಿನಂತಾಡುವ ರೆಡ್ಡಿ ಸಾಹೇಬರ ಹುಟ್ಟುಹಬ್ಬಕ್ಕೆ ಇಷ್ಟು ಮಾಡಿದರೆ ಸಾಕೆ? ಸಾಕಾಗುವುದಿಲ್ಲ. ಅದಕ್ಕೆ ನಾಯ್ಡು ಎಂಬ ಖದೀಮ ಜೈಲಿನ ಹತ್ತಿರವೇ ಇರುವ ತನ್ನ ಸರ್ಕಾರಿ ಮನೆಯಲ್ಲೇ ರೆಡ್ಡಿಗೆ ಒಂದು ವಿಶೇಷ ಪಾರ್ಟಿಯನ್ನೂ ಆಯೋಜಿಸಿದ!!

ಪಾಪ, ರೆಡ್ಡಿ ಮತ್ತು ನಾಯ್ಡುನ ದುರಾದೃಷ್ಟ, ಜೈಲಿನಲ್ಲಿದ್ದ ಯಾರಿಗೋ ಇವರಿಬ್ಬರ ಗಳಸ್ಯಕಂಠಸ್ಯ ಇಷ್ಟವಾಗಲಿಲ್ಲ. ರೆಡ್ಡಿಗಾಗಿ ನಾಯ್ಡು ಸರಬರಾಜು ಮಾಡುತ್ತಿದ್ದ ವಿಶೇಷ ಸೇವೆಗಳ ಕುರಿತ ಮಾಹಿತಿಯನ್ನು ರೆಡ್ಡಿಯ ಅಧ್ವಾನಗಳನ್ನು ತನಿಖೆ ಮಾಡುತ್ತಿರುವ ಸಿಬಿಐ ತಂಡಕ್ಕೆ ನೀಡಿದರು. ನಾಯ್ಡುವನ್ನು ತಕ್ಷಣ ಚಂಚಲಗುಡ ಜೈಲಿನಿಂದ ವರ್ಗಾವಣೆ ಮಾಡಿದ ಆಂಧ್ರ ಸರ್ಕಾರ ಅವನ ವಿರುದ್ಧ ಈಗ ತನಿಖೆಯನ್ನು ನಡೆಸುತ್ತಿದೆ.

ಯಾರಿಗೆ ಗೊತ್ತು ಸದ್ಯದಲ್ಲೇ ರೆಡ್ಡಿಯೊಂದಿಗೆ ನಾಯ್ಡು ಸಾಹೇಬರೂ ಕಂಬಿ ಎಣಿಸುವಂತಾಗಬಹುದು. ಕೋತಿ ಜನಾರ್ದನ ರೆಡ್ಡಿ ತಾನು ಕೆಡುವುದಲ್ಲದೆ ಭಾರತದ ಎಷ್ಟು ಅಧಿಕಾರಿ ವ್ಯವಸ್ಥೆಗಳನ್ನು ಮಂಗಮಾಡಿದ ಪರಿ ಇದು!

ಕುಂದಗೋಳ: ಅಕ್ಕಿಗೆ ಜೆಡಿಎಸ್ ಲಕ್ಕಿಯಾದರೆ, ಚಿಕ್ಕನಗೌಡನಿಗೆ ಅಡ್ವಾನ್ಸ್ ಸೋಲು..!

ನಮ್ಮ ಜಗತ್ತಿಗೆ ಶಾಸ್ತ್ರೀಯ ಸಂಗೀತದ ತಳಹದಿ ಹಾಕಿಕೊಟ್ಟ ಕುಂದಗೋಳವನ್ನು ಚೆಡ್ಡಿ ಶಾಸಕ ಎಸ್.ಐ.ಚಿಕ್ಕನಗೌಡರ ಕಳೆದ ನಾಲ್ಕೂವರೆ ವರ್ಷದಿಂದ ಶನಿಯಂತೆ ಕಾಡುತ್ತಿದ್ದಾನೆ. ಏನನ್ನೋ ಕಡಿದು ಗುಡ್ಡೆ ಹಾಕೋ ಹಾಗೆ ಫೋಜು ಕೊಟ್ಟ ಲಿಂಗಾಯತ ಲಾಬಿಯಲ್ಲಿ ಚುನಾಯಿತನಾಗಿದ್ದ ಈತ ಇಡೀ ತಾಲೂಕನ್ನೇ ಹರಿದು ಮುಕ್ಕುತ್ತಿದ್ದಾನೆ. ಕ್ಷೇತ್ರಕ್ಕೆಂದು ಬಂದ ಕೋಟ್ಯಂತರ ಅನುದಾನ ಅಕ್ಷರಶಃ ಲೂಟಿಯಾಗಿದೆ. ಯಾವೊಂದು ಅಭಿವೃದ್ಧಿ ಕಾಮಗಾರಿಗಳೂ ಇಲ್ಲಿಯ ಜನರಿಗೆ ಅನುಕೂಲ ಮಾಡಿಕೊಟ್ಟಿಲ್ಲ. ಈತನ ರಣಹಸಿವಿನ ಲೂಟಿ ಹಾಗೂ ಇವನ ತಮ್ಮನ ವಸೂಲಿ ಗತ್ತನ್ನ ಕಂಡಿರುವ ಕುಂದಗೋಳದ ಜನ ಚಿಕ್ಕನಗೌಡನಿಗೆ ತಕ್ಕ ಪಾಠ ಕಲಿಸಲು ಚುನಾವಣೆಯನ್ನೇ ಎದುರು ನೋಡುತ್ತಿದ್ದು ಆತನಿಗೀಗ ಅಡ್ವಾನ್ಸ್ ಸೋಲಿನ ಭಯ ಶುರುವಾಗಿದೆ.

ಪರ್ಸೆಂಟೇಜ್ ಫಿಕ್ಸ್ ಮಾಡಿಕೊಂಡು ಕಾಮಗಾರಿಗಳನ್ನು ಗುತ್ತಿಗೆ ನೀಡುವ ಚಿಕ್ಕನಗೌಡರು ತಮ್ಮ ಪಾಲಿನ ಹಣ ಕೊಟ್ಟ ನಂತರವೇ ಕೆಲಸಕ್ಕೆ ಶಂಕುಸ್ಥಾಪನೆ ಮಾಡುವುದನ್ನು ಕಳೆದ ನಾಲ್ಕು ವರ್ಷ ಅತಿ ನಿಯತ್ತಿನಿಂದ ಪಾಲಿಸಿಕೊಂಡು ಬಂದಿದ್ದಾನೆ. ಅಧಿಕಾರಿಗಳ ವರ್ಗಾವಣೆ, ಪೊಲೀಸ್ ಠಾಣಾ ಜೂಜು ಅಡ್ಡೆಗಳಿಂದ ಮಾಮೂಲಿಗಾಗಿ ಜೊಲ್ಲು ಸುರಿಸುವ ಗೌಡನದ್ದು ಕುಟುಂಬ ಪಾಳೆಗಾರಿಕೆಯ ಗತ್ತು. ಸ್ವಕ್ಷೇತ್ರದಲ್ಲಿ ತನ್ನ ತಮ್ಮನ ಹೆಸರಲ್ಲಿ ಕೇವಲ ಒಂದು ಎಕರೆಯಲ್ಲಿ ಮಾತ್ರ ಕಲ್ಲು ಗಣಿಗಾರಿಕೆ ನಡೆಸಲು ಪರವಾನಗಿ ಇದ್ದರೂ ಅನಾಮತ್ತು 5 ಎಕರೆಯಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆಯನ್ನು ಬಿಂದಾಸಾಗಿ ನಡೆಸುತ್ತಿದ್ದಾನೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹತ್ತಾರು ಕೋಟಿ ನಷ್ಟವಾದರೂ, ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಯಾಗಲಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಾಗಲಿ ಕ್ರಮ ಕೈಗೊಳ್ಳದೆ ಗೌಡನ ಗಾಡಿಗೆ ಡೀಸೆಲ್ ಹಾಕಿಸಿ ಹಲ್ಲು ಗಿಂಜುತ್ತಿದ್ದಾರೆ.

ಶನಿಯಾಗಿ ವಕ್ಕರಿಸಿದ

ಧಾರವಾಡ ಜಿಲ್ಲೆಯ ಕಲಘಟಗಿ ಕ್ಷೇತ್ರದಿಂದ ಸತತ ಎರಡು ಬಾರಿ ಶಾಸಕನಾಗಿದ್ದ ಎಸ್.ಐ.ಚಿಕ್ಕನಗೌಡ ಹುಟ್ಟು ರಾಜಕಾರಣದ ಫ್ಯಾಮಿಲಿಯಿಂದ ಬಂದವನಲ್ಲ. ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಂಡು ಮಾಮೂಲಿ ನೀಡುತ್ತಲೇ ಅಕ್ರಮ ಕಲ್ಲು ಗಣಿಗಾರಿಕೆಯನ್ನು ತನ್ನ ಮೂಲ ಕಸುಬನ್ನಾಗಿಸಿಕೊಂಡಿದ್ದ ಈತ ಸ್ವಲ್ಪ ದಿನದಲ್ಲೇ ಜುಮ್ ಅಂತ ಖಾದಿ ದಿರಿಸು ತೊಟ್ಟುಬಿಟ್ಟ. ತನ್ನ ಹತ್ತಿರದ ಸಂಬಂಧಿ ಮಾಜಿ ಮಂತ್ರಿ ಪಿ.ಸಿ.ಸಿದ್ದನಗೌಡರನ್ನ ವಿರೋಧಿಸುತ್ತಲೇ ರಾಜಕಾರಣದ ಅಂಗಳಕ್ಕೆ ಕಾಲಿಟ್ಟ. ಸಿದ್ದನಗೌಡರ ವಿರೋಧಿ ಅಲೆಯನ್ನೇ ಬಂಡವಾಳವನ್ನಾಗಿಸಿಕೊಂಡು 1999 ಹಾಗೂ 2004 ರಲ್ಲಿ ಸತತವಾಗಿ ಎರಡು ಬಾರಿ ಗೆದ್ದು ಶಾಸಕನಾದನಾದರೂ ಲೂಟಿಯೊಂದನ್ನು ಬಿಟ್ಟು ಮತ್ತಾವ ಸಾಧನೆಯನ್ನೂ ಮಾಡಿಲ್ಲ. ಕಾಂಗ್ರೆಸ್ಸಿನ ಸಂತೋಷ್ ಲಾಡ್ ಕಲಘಟಗಿಗೆ ಎಂಟ್ರಿಕೊಟ್ಟು ಜನರಿಗೆ ಹತ್ತಿರವಾಗುತ್ತಿದ್ದಂತೆ ಈ ಬಾರಿ ಸೋಲು ಗ್ಯಾರಂಟಿ ಎಂದುಕೊಂಡಿದ್ದ ಚಿಕ್ಕನಗೌಡರಿಗೆ ಕ್ಷೇತ್ರ ಮರುವಿಂಗಡಣೆ ಮರುಜನ್ಮ ನೀಡಿತ್ತು. 2008 ಕಲಘಟಗಿಯ 33 ಗ್ರಾಮಗಳು ಕುಂದಗೋಳ ಕ್ಷೇತ್ರಕ್ಕೆ ಸೇರ್ಪಡೆಗೊಂಡಿದ್ದರಿಂದ ಕುಂದಗೋಳಕ್ಕೆ ವಕ್ಕರಿಸಿದ. ಅಷ್ಟೇ ಅಲ್ಲ, ಯಡಿಯೂರಪ್ಪನ ಲಿಂಗಾಯತ ನಾಟಕದಲ್ಲಿ ಚುನಾಯಿತನಾಗಿಯೂಬಿಟ್ಟ. ಈ ಭಾಗದಲ್ಲಿ ಹೆಚ್ಚು ಜನಪ್ರಿಯತೆ ಗಳಿಸಿಕೊಂಡಿದ್ದ ಮಾಜಿ ಶಾಸಕ ಎಂ.ಎಸ್.ಅಕ್ಕಿಯವರು ಜೆಡಿಯು ತೊರೆದು ಬೊಮ್ಮಾಯಿಯ ಹಿಂದೆ ಬಿ.ಜೆ.ಪಿ.ಗೆ ಕಾಲಿಟ್ಟದ್ದು ಚಿಕ್ಕನಗೌಡನಿಗೆ ನೆರವಾಯಿತು.

ಹೊಸ ಮುಖ ಏನಾದರೂ ಬದಲಾವಣೆಯನ್ನು ತರಬಹುದೆಂಬ ಭರವಸೆಯೊಂದಿಗೆ ಗೆಲ್ಲಿಸಿದ್ದ ಕುಂದಗೋಳ ಕ್ಷೇತ್ರದ ಜನರಿಗೆ ಈ ಗೌಡ ಮಾಡಿದ್ದು ನಂಬಿಕೆ ದ್ರೋಹ. ಈಗ ಈತ ಮತ್ತೆ ಚುನಾವಣೆಗೆ ಹೊಸ ರೂಪದೊಂದಿಗೆ ಸಿದ್ಧವಾಗುತ್ತಿದ್ದಾನೆ.

ಅಲೆಗಳ ಅಬ್ಬರದಲ್ಲೇ ಮಿಂದೆದ್ದ ಕ್ಷೇತ್ರ

ಈ ಕ್ಷೇತ್ರದ ಇತಿಹಾಸ ಕೆದಕಿದರೆ, ಇಲ್ಲಿ ಚುನಾಯಿತರಾಗಿ ಶಾಸಕರಾಗಿರುವವರಲ್ಲಿ ಸಾಂದರ್ಭಿಕ ರಾಜಕೀಯ ಅಲೆಯಲ್ಲಿ ಆರಿಸಿ ಬಂದವರೇ ಹೆಚ್ಚು. ಪ್ರಭಾವಿ ಲಿಂಗಾಯತ ಮುಖಂಡರಾಗಿದ್ದ ಸಿ.ಎಸ್.ಕೋಟಿಹಾಳ, ವೀರೇಂದ್ರ ಪಾಟೀಲರ ಅಲೆಯಲ್ಲಿ ಗೋವಿಂದಪ್ಪ ಜುಟ್ಟಲ್, ಹೆಗ್ಗಡೆಯವರ ಪ್ರಭಾವದಿಂದ ಸಂಶಿ ಗ್ರಾಮದ ಬಿ.ಎ ಉಪ್ಪಿನ ಅಂಥವರು ಶಾಸಕರಾದರೂ ಹೇಳಿಕೊಳ್ಳುವಂತಹ ಸಾಧನೆಯನ್ನೇನೂ ಕ್ಷೇತ್ರದಲ್ಲಿ ಮಾಡಲಿಲ್ಲ.



ಇನ್ನೊಂದು ವಿಚಿತ್ರವೆಂದರೆ, ಸತತ ಗೆಲುವು ಸಾಧಿಸಿದ ಶಾಸಕರ ಸಂಖ್ಯೆ ಕೂಡಾ ತೀರಾ ವಿರಳ. 70ರ ದಶಕದಲ್ಲಿ ಕಂಬಳಿ ಎಂಬುವವರು ಇಲ್ಲಿಂದ ಎರಡು ಬಾರಿ ಗೆಲುವು ಸಾಧಿಸಿದ್ದರು. ಅನಂತರದಲ್ಲಿ ಕುಂದಗೋಳ ಕ್ಷೇತ್ರ ಎಂ.ಎಸ್. ಅಕ್ಕಿ ಅವರನ್ನು ಮಾತ್ರ ಸತತ 2 ಬಾರಿ ಗೆಲ್ಲಿಸಿತ್ತು, ಮೂರನೇ ಬಾರಿಗೂ ಗೆಲ್ಲುವ ಅವಕಾಶ ಅಕ್ಕಿಯವರಿಗೆ ಇತ್ತಾದರೂ ಬಿ.ಜೆ.ಪಿ ಸೇರಿ ಚಿಕ್ಕನಗೌಡನಿಗೆ ಕ್ಷೇತ್ರ ಬಿಟ್ಟುಕೊಟ್ಟದ್ದರಿಂದ ಅವರಾಗಿಯೇ ಅವಕಾಶ ತಪ್ಪಿಸಿಕೊಂಡಂತಾಗಿತ್ತು.

ಯಡ್ಡಿ ಹಿಂದೆ ಚಿಕ್ಕನಗೌಡ

ಸತತ ಮೂರು ಬಾರಿ ಗೆದ್ದು ಶಾಸಕನಾಗಿರುವ ಚಿಕ್ಕನಗೌಡರ ನಾಲ್ಕನೇ ಬಾರಿಯೂ ಯಾವ ಪಕ್ಷದಿಂದ ಸ್ಪರ್ಧಿಸಿದರೂ ಗೆದ್ದು ಬರುತ್ತೇನೆ ಎಂಬ ಹುಂಬ ಧೈರ್ಯದಲ್ಲಿದ್ದಾನೆ. ಅಸಲಿಗೆ ಈತ ಕಲಘಟಗಿಯಿಂದ ಮುಖ್ಯಮಂತ್ರಿ ಜಗದೀಶ ಶೆಟ್ಟರ, ನಿಂಬಣ್ಣನವರ, ಸಂಸದ ಪ್ರಹ್ಲಾದ ಜೋಷಿಯ ಬಲದಿಂದ ಗೆದ್ದು ಬಂದಿದ್ದರೆ, ಕುಂದಗೋಳದಿಂದ ಮಾಜಿ ಶಾಸಕ ಎಂ.ಎಸ್.ಅಕ್ಕಿ ಬೆಂಬಲದಿಂದ ಶಾಸಕನಾಗಿದ್ದ, ಆದರೀಗ ಅದೆಲ್ಲವನ್ನೂ ಮರೆತಿದ್ದಾನೆ. ಈ ಬಾರಿ ಚಿಕ್ಕನಗೌಡನ ಹಿಂದೆ ಇವರ್‍ಯಾರು ಇಲ್ಲ, ಯಾಕೆಂದರೆ, ಈಗಾಗಲೇ ಬಿ.ಜೆ.ಪಿ.ಯಿಂದ ಒಂದು ಕಾಲು ಹೊರಗಿಟ್ಟಿರುವ ಯಡಿಯೂರಪ್ಪನ ಕೆ.ಜೆ.ಪಿ ಪಕ್ಷವನ್ನು ಚಿಕ್ಕನಗೌಡ ಸೇರುವುದು ನಿಶ್ಚಿತವಾಗಿದೆ. ಒಂದು ವರ್ಷದ ಹಿಂದೆ ಯಡ್ಡಿಯ ಹತ್ತಿರದ ಸಂಬಂಧಿಯೊಬ್ಬರ ಮಗನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟು ಬೀಗನಾಗಿರುವ

ರೈಲ್ವೇ ನೇಮಕಾತಿಯಲ್ಲಿ ಭಾರೀ ವಂಚನೆ!

ನಮ್ಮ ದೇಶದಲ್ಲಿ ಅತಿಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಿರುವ ಇಲಾಖೆ ಅಂತಂದರೆ ಅದು ರೈಲ್ವೇ ಡಿಪಾರ್ಟ್‌ಮೆಂಟ್. ಇಲ್ಲಿ ಏನಿಲ್ಲವೆಂದರೂ 14 ಲಕ್ಷ ನೌಕರರು ಕೆಲಸ ಮಾಡುತ್ತಿದ್ದಾರೆ. ದೇಶಾದ್ಯಂತ 17 ವಲಯ ಕಚೇರಿಗಳನ್ನು ಹೊಂದಿರುವ ಈ ರೈಲ್ವೇಯ ವಾರ್ಷಿಕ ಆದಾಯವೇ 9,610 ಕೋಟಿ ರೂಪಾಯಿಗಳು. ಇಂತಿಪ್ಪ ಭರಪೂರ ಇಲಾಖೆಯನ್ನು ಮುಕ್ಕದೇ ಬಿಟ್ಟರೆ ಅದು ಭ್ರಷ್ಟಾಚಾರಕ್ಕೆ ಮಾಡುವ ಬಹುದೊಡ್ಡ ಅವಮಾನವಾಗಿಬಿಡುತ್ತದೆ. ಇದು ರೈಲ್ವೇ ಅಧಿಕಾರಿಗಳಿಗೆ ಚೆನ್ನಾಗಿ ಗೊತ್ತು. ಭ್ರಷ್ಟ ಅಧಿಕಾರಿಗಳು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ತಿಂದು ತೇಗಲು ತಮ್ಮದೇ ಗೌಪ್ಯ ಮಾರ್ಗಗಳನ್ನು ಮಾಡಿಟ್ಟುಕೊಂಡಿದ್ದಾರೆ. ಇದಕ್ಕೆ ರೈಲ್ವೇ ನೇಮಕಾತಿಯೂ ಹೊರತಾಗಿಲ್ಲ. ಅಲ್ಲದೇ ಕೇಂದ್ರ ಸರ್ಕಾರದ ಒಡೆತನವಿರುವುದರಿಂದ ಇಲ್ಲಿ ಮೇಯ್ದಾಡಲು ಅಷ್ಟಾಗಿ ಅಡ್ಡಿ ಆತಂಕಗಳೂ ಇಲ್ಲ.



ನಮ್ಮದೇ ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೇ ವಲಯದ ಕೇಂದ್ರ ಕಚೇರಿ ಇದೆಯಾದರೂ ಅದರಿಂದ ಕನ್ನಡಿಗರಿಗೆ ಅನುಕೂಲ ಅಂತಾದದ್ದು ಅಷ್ಟಕ್ಕಷ್ಟೆ. ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ಹಿಡಿಯುವ ಉತ್ತರ ಭಾರತದ ರಾಜಕಾರಣಿಗಳು ತಮ್ಮ ಉಪಕಾರ ಮನೋಭಾವವನ್ನು ಅಲ್ಲಿನ ಜನರಿಗೆ ತೋರಿಸಿಕೊಡುವುದಕ್ಕೋಸ್ಕರ ಸಲೀಸಾಗಿ ತುಂಬಬಹುದಾದ ರೈಲ್ವೇ ಇಲಾಖೆಗೆ ತಮ್ಮ ರಾಜ್ಯಗಳ ಜನರನ್ನು ತುಂಬಿಬಿಡುವ ಪರಂಪರೆ ಇತ್ತು. ಇದರ ವಿರುದ್ಧ ಕನ್ನಡಿಗರೂ ದೊಡ್ಡ ಮಟ್ಟದಲ್ಲಿ ಹೋರಾಡಿದ್ದರ ಫಲವಾಗಿ ಇದೀಗ ಸ್ಥಳೀಯ ಭಾಷೆಗಳಲ್ಲೂ ಪರೀಕ್ಷೆಗಳನ್ನು ನಡೆಸುವ ಮೂಲಕ ನೇಮಕಾತಿ ಮಾಡಿಕೊಳ್ಳುವ ನಿಯಮವೊಂದು ಜಾರಿಗೆ ಬಂದಿದೆ. ಇದರಿಂದಾಗಿ ಆಯಾ ಸ್ಥಳೀಯರಿಗೆ ಅನುಕೂಲವಾಗುತ್ತದೆಂದು ಭಾವಿಸಿದ್ದವರಿಗೆ ಭ್ರಷ್ಟ ಅಧಿಕಾರಿಗಳ ಹೊಸ ವರಸೆ ಮತ್ತೊಂದು ಸಮಸ್ಯೆಯಾಗಿ ಪರಿಣಮಿಸಿದೆ. ಬೇರೆ ಕಡೆ ಹೇಗೋ ತಿಳಿದಿಲ್ಲ, ಆದರೆ ಕರ್ನಾಟಕದಲ್ಲಂತೂ ರೈಲ್ವೇ ನೇಮಕಾತಿಯ ಅವ್ಯವಹಾರ ಎಲ್ಲೆ ಮೀರಿ ಹೋಗಿದೆ. ಅದಕ್ಕೆ ಗ್ರೂಪ್ ಡಿ ಹುದ್ದೆಗಳ ನೇಮಕಾತಿಯೇ ತಾಜಾ ಸಾಕ್ಷಿ.

ಅಷ್ಟಕ್ಕೂ ಈ ಗ್ರೂಪ್ ಡಿ ದರ್ಜೆಯ ನೌಕರರೆಂದರೆ ಗ್ಯಾಂಗ್‌ಮನ್, ಖಲಾಸಿ, ಪೋರ್ಟರ್, ಕಸಗುಡಿಸುವವ, ವಾಶರ್‌ಮನ್, ವಾಟರ್‌ಮನ್ ಮೊದಲಾದ ವಿಶೇಷ ಕೌಶಲ್ಯತೆಯ ಅವಶ್ಯಕತೆಯೇನೂ ಇಲ್ಲದ ಕೆಳದರ್ಜೆಯ ಹುದ್ದೆಗಳು. ಕೇವಲ ಎಸ್.ಎಸ್.ಎಲ್.ಸಿ ಪಾಸಾದವರು, ತೀರಾ ಅನಿವಾರ್ಯ ಟೆಕ್ನಿಕಲ್ ಕೌಶಲ್ಯತೆ ಬೇಕಿದ್ದರೆ ಐಟಿಐ ಪಾಸಾದವರು ಈ ಹುದ್ದೆಗಳಿಗೆ ಅರ್ಜಿ ಹಾಕಬಹುದು. ಆದರೆ ರೈಲ್ವೇ ಈ ನೇಮಕಾತಿಯನ್ನು ನಡೆಸುವ ಪರಿ ನೋಡಿದರೆ ಯಾವ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗೂ ಕಡಿಮೆ ಇಲ್ಲದಂತಹ ಹುದ್ದೆಗಳೇನೋ ಇವು ಎಂಬ ಅನುಮಾನ ಮೂಡುತ್ತದೆ. ಲಿಖಿತ ಪರೀಕ್ಷೆಯ ನಂತರ ಕಟ್ಟುನಿಟ್ಟಾಗಿ ದೈಹಿಕ ಪರೀಕ್ಷೆ, ವೈದ್ಯಕೀಯ ಪರೀಕ್ಷೆಗಳನ್ನೆಲ್ಲ ಈ ಹುದ್ದೆಗಳ ನೇಮಕಾತಿಯಲ್ಲಿ ನಡೆಸಲಾಗುತ್ತದೆ. ಅಸಲಿಗೆ ತಮ್ಮ ಕೈಬಿಸಿ ಮಾಡಿಕೊಳ್ಳಲು ಅಧಿಕಾರಿಗಳು ಮಾಡಿಕೊಂಡ ವ್ಯವಸ್ಥಿತ ಸಂಚಷ್ಟೇ ಅದು.

ಲಿಖಿತ ಪರೀಕ್ಷೆಯಂತೂ ಸ್ಥಳೀಯ ಭಾಷೆಯಲ್ಲಿ ಮತ್ತು ಅದೇ ವಲಯದ ಕೇಂದ್ರಗಳಲ್ಲಿ ನಡೆಯುವುದರಿಂದ ಅಧಿಕಾರಿಗಳು ಅಷ್ಟಾಗಿ ಆಟ ಆಡಲು ಸಾಧ್ಯವಿಲ್ಲ, ಅದಕ್ಕೆಂದೇ ಈ ದೈಹಿಕ, ವೈದ್ಯಕೀಯ ಪರೀಕ್ಷೆಗಳ ಅಡ್ಜಸ್ಟ್‌ಮೆಂಟ್ ಮಾಡಿಕೊಂಡಿದ್ದಾರೆ. ಇಲ್ಲಂತೂ ತಮಗೆ ಬೇಕಾದವರನ್ನು ಸುಲಭವಾಗಿ ಆಯ್ದುಕೊಳ್ಳಬಹುದು, ಬೇಡವಾದವರನ್ನು ಸಣ್ಣ ನೆಪ ಹೇಳಿ ಸಲೀಸಾಗಿ ವಾಪಾಸ್ಸು ಕಳುಹಿಸಬಹುದು. ಅಂಗವಿಕಲನೊಬ್ಬನೊಂದಿಗೆ ನೇಮಕಾತಿ ಮಂಡಳಿ ನಡೆದುಕೊಂಡ ಈ ಸಣ್ಣ ನಿದರ್ಶನ ಇವರ ಈ ಸಂಚನ್ನು ಬಯಲು ಮಾಡುತ್ತದೆ.

2009ರಲ್ಲಿ ಸುಮಾರು 4701 ಗ್ರೂಪ್ ಡಿ ಹುದ್ದೆಗಳಿಗೆ ಅರ್ಜಿ ಕರೆಯಲಾಗಿತ್ತು, ಅದಕ್ಕೆ ಪ್ರತಿಯಾಗಿ 6 ಲಕ್ಷ ಅರ್ಜಿಗಳು ಬಂದು ಬಿದ್ದಿದ್ದವು. ಲಿಖಿತ ಪರೀಕ್ಷೆ ನಡೆಸಿದ ನಂತರ 4,851 ಅಭ್ಯರ್ಥಿಗಳನ್ನು ದೈಹಿಕ ಪರೀಕ್ಷೆಗೆಂದು ಆಯ್ಕೆ ಮಾಡಲಾಗಿತ್ತು, ಅದರಲ್ಲಿ ಬೆಳಗಾವಿಯ ಕುರುವಿನಕೊಪ್ಪದ ಗಂಗಪ್ಪ ಯಕ್ಕುಂಡಿ ಎಂಬಾತನೂ ಒಬ್ಬನಾಗಿದ್ದ. ಅಸಲಿಗೆ ಈತ ಅಂಗವಿಕಲ, ತನಗಿದ್ದ ಅಂಗವಿಕಲರ ಕೋಟಾದಡಿಯಲ್ಲೇ ಅರ್ಜಿ ಸಲ್ಲಿಸಿ ಲಿಖಿತ ಪರೀಕ್ಷೆಯಲ್ಲಿ ಮೆರಿಟ್‌ನಲ್ಲಿ ಆಯ್ಕೆಯಾಗಿದ್ದ. ಶೇ.75 ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆ ಹೊಂದಿದವರಿಗೆ ರನ್ನಿಂಗ್, ಜಂಪಿಂಗ್‌ನಂತಹ ದೈಹಿಕ ಪರೀಕ್ಷೆಗಳಿಂದ ವಿನಾಯಿತಿ ನೀಡಲಾಗುತ್ತೆ, ಆದರೆ ಅವತ್ತು ಈತನನ್ನೂ ದೈಹಿಕ ಪರೀಕ್ಷೆಗೆ ಹಾಜರಾಗುವಂತೆ ಸೂಚಿಸಿದ್ದರು. ದಾಖಲಾತಿಗಳ ಪರಿಶೀಲನೆಗೆ ತನ್ನನ್ನೂ ಆಹ್ವಾನಿಸಿರಬಹುದೆಂದುಕೊಂಡು ಹೋದವನಿಗೆ 6 ನಿಮಿಷದಲ್ಲಿ 1500 ಮೀಟರ್ ಓಡಿಬರುವಂತೆ ಅಲ್ಲಿದ್ದ ಅಧಿಕಾರಿಗಳು ಹೇಳಿದ್ದರು. 'ನಾನು ಅಂಗವಿಕಲನಾಗಿದ್ದು ಶೇ.75ಕ್ಕಿಂತ ಹೆಚ್ಚಿನ ಊನತೆ ಇರುವುದಕ್ಕೆ ಮೆಡಿಕಲ್ ಸರ್ಟಿಫಿಕೇಟ್ ಇದೆ, ನಾನು ಹೇಗೆ ಓಡಲಿ? ಎಂದು ಪ್ರಶ್ನಿಸಿದವನಿಗೆ 'ಕೆಲಸ ಬೇಕಿದ್ದರೆ ನೀನು ಅಂಗವಿಕಲನಾದರೂ ಸರಿ ಇಲ್ಲಿ ಓಡಲೇಬೇಕು' ಎಂದು ಅಧಿಕಾರಿಗಳು ಅಸಡ್ಡೆಯಿಂದ ಉತ್ತರಿಸಿದ್ದರು. ಆತ ಓಡಲಾಗಲಿಲ್ಲ ಎಂಬ ಕಾರಣಕ್ಕೇ ಆತನನ್ನು ನೇಮಿಸಿಕೊಳ್ಳದೆ ಕೈ ಬಿಟ್ಟಿದ್ದರು.

ಹಾಗೆ ನೋಡಿದರೆ ಗ್ರೂಪ್ ಡಿ ನೌಕರರು ಮಾಡುವ ಕೆಲಸಗಳಿಗೆ ದೈಹಿಕ ಪರೀಕ್ಷೆಯ ಅವಶ್ಯಕತೆಯೇ ಇಲ್ಲ, ಇದೆಲ್ಲ ರೈಲ್ವೇ ಅಧಿಕಾರಿಗಳ ಭ್ರಷ್ಟತೆಯ ಹೊಂದಾಣಿಕೆ ಎಂಬುದು ಈ ಒಂದು ನಿದರ್ಶನದಿಂದ ಸ್ಪಷ್ಟವಾಗುತ್ತದೆ.

ರೈಲ್ವೇ ನೇಮಕಾತಿಯ ಗೋಲ್‌ಮಾಲ್‌ಗೆ ಮತ್ತೊಂದು ಸ್ಯಾಂಪಲ್ ಇದೆ. ಅದು ಪ್ರಶ್ನೆಪತ್ರಿಕೆಯ ಗೌಪ್ಯತೆ. ಐಎಎಸ್, ಕೆಎಎಸ್ ಇಲ್ಲವೇ ಮತ್ತಾವುದೇ ಪರೀಕ್ಷೆಗಳಿರಲಿ ಅಲ್ಲಿ ಅಭ್ಯರ್ಥಿಗೆ ಪ್ರಶ್ನಪತ್ರಿಕೆಯನ್ನು, ಆತ ಉತ್ತರಿಸಿದ ಒಎಂಆರ್ ಶೀಟ್‌ನ ಒಂದು ಪ್ರತಿಯನ್ನೂ ನೀಡುತ್ತಾರೆ. ಆದರೆ ರೈಲ್ವೇ ಪರೀಕ್ಷೆಗಳನ್ನು ಬರೆದ ಅಭ್ಯರ್ಥಿಗೆ ಪ್ರಶ್ನೆಪತ್ರಿಕೆಯನ್ನು ಹೊರಗೆ ಕೊಂಡೊಯ್ಯಲು ಬಿಡುವುದಿಲ್ಲ. ಪ್ರಶ್ನೆಪತ್ರಿಕೆಯಲ್ಲೇ ಉತ್ತರಿಸುವಂತೆ ವ್ಯವಸ್ಥೆ ಮಾಡಿ ಅದನ್ನು ಪರೀಕ್ಷೆಯ ಹಾಲ್‌ನಲ್ಲೇ ವಾಪಾಸ್ ಪಡೆದು ಕಳುಹಿಸುತ್ತಾರೆ. ಪ್ರಶ್ನೆಪತ್ರಿಕೆಯೇ ಇಲ್ಲದೆ, ತಾನು ಯಾವ ಪ್ರಶ್ನೆಗೆ ಏನು ಉತ್ತರ ಬರೆದು ಬಂದಿದ್ದೇನೆ ಎಂಬುದು ಗೊತ್ತಾಗುವುದಾದರೂ ಹೇಗೆ? ಅಲ್ಲದೆ ಬೇರೆ ಪರೀಕ್ಷೆಗಳಂತೆ ಸರಿ ಉತ್ತರಗಳನ್ನು ಪ್ರಕಟಿಸುವ ಪರಿಪಾಠವೂ ರೈಲ್ವೇ ಇಲಾಖೆಯಲ್ಲಿ ಇಲ್ಲ, ಅಲ್ಲಿಗೆ ಪರೀಕ್ಷೆ ಎಂಬುದೂ ನೆಪಕ್ಕಷ್ಟೇ ನಡೆಸುವ ಪ್ರಕ್ರಿಯೆ ಎಂಬುದು ಸ್ಪಷ್ಟ.

ಅಲ್ಲಿ ಅಭ್ಯರ್ಥಿಗಿಂತ ಹೆಚ್ಚಾಗಿ ಅಧಿಕಾರಿಗಳಿಗೇ ಹೆಚ್ಚು ಮುಕ್ತ ಅವಕಾಶವಿದೆ. ಏಕ್‌ದಮ್ ಸೆಲೆಕ್ಷನ್ ಲಿಸ್ಟ್ ಅಂತ ಪ್ರಕಟಿಸಿದಾಗಲೇ ಅಭ್ಯರ್ಥಿಗೆ ತಾನು ಆಯ್ಕೆಯಾಗಿದ್ದೇನೋ, ಇಲ್ಲವೋ ಎಂಬುದು ತಿಳಿಯುತ್ತದೆ. ಇನ್ನುಳಿದಂತೆ ತಾನು ಎಷ್ಟು ಅಂಕ ಗಳಿಸಿದೆ, ಎಷ್ಟು ಪ್ರಶ್ನೆಗಳು ತಪ್ಪಾಗಿದ್ದವು,



ಆಯ್ಕೆಯಾಗಿರುವವರು ಎಷ್ಟು ಅಂಕ ಗಳಿಸಿದ್ದಾರೆ, ಕಟ್‌ಆಫ್ ಏನು, ಈ ಯಾವೊಂದು ಅಂಶಗಳೂ ಅಭ್ಯರ್ಥಿಗೆ ತಿಳಿಯುವುದಿಲ್ಲ. ಏಕೆಂದರೆ ಅದಕ್ಕೆಲ್ಲ ಬೇಕಾದ ಪ್ರಶ್ನೆಪತ್ರಿಕೆಯೇ ಅಭ್ಯರ್ಥಿಯ ಬಳಿ ಇರುವುದಿಲ್ಲ.


ಇನ್ನೂ ಅಚ್ಚರಿ ಅಂತಂದರೆ ರೈಲ್ವೇ ಇಲಾಖೆಯ ಇಂತಹ ಎಡವಟ್ಟು ನಿಯಮದ ಬಗ್ಗೆ ಖುದ್ದು ರೈಲ್ವೇ ಇಲಾಖೆಯ ರಾಜ್ಯ ಖಾತೆ ಸಚಿವ ಕೆ.ಎಚ್.ಮುನಿಯಪ್ಪನವರಿಗೇ ತಿಳಿದಿಲ್ಲ. ನಮ್ಮ ಪತ್ರಿಕೆಯ ತಂಡ ಒಮ್ಮೆ "ನಿಮ್ಮ ಇಲಾಖೆಯಲ್ಲಿ ನಡೆಸುವ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ಪರೀಕ್ಷೆ ಮುಗಿದಬಳಿಕ ಅಭ್ಯರ್ಥಿಗಳಿಗೆ ಏಕೆ ನೀಡುವುದಿಲ್ಲ?" ಎಂದು ಮುನಿಯಪ್ಪನವರನ್ನು ಕೇಳಿದಾಗ "ಹೌದಾ, ಹಾಗೊಂದು ನಿಯಮ ಇದೆಯಾ?" ಎಂದು ಅವರು ನಮ್ಮನ್ನೇ ಮರುಪ್ರಶ್ನಿಸಿದ್ದರು. ಅಷ್ಟರಮಟ್ಟಿಗೆ ಭ್ರಷ್ಟ ಅಧಿಕಾರಿಗಳು ಗೋಲ್‌ಮಾಲ್ ನಡೆಸಲು ಇಡೀ ನೇಮಕಾತಿ ಪ್ರಕ್ರಿಯೆಯನ್ನು ತಮಗೆ ಬೇಕಾದಂತೆ ಮಾಡಿಟ್ಟುಕೊಂಡಿದ್ದಾರೆ.

ಕೊನೆಗೂ ಹೋರಾಟಕ್ಕೆ ನಾಂದಿ

ಮೇಲಿನ ಎರಡು ನಿದರ್ಶನಗಳು ಕೇವಲ ಸ್ಯಾಂಪಲ್ ಮಾತ್ರ. ಉದ್ಯೋಗದ ಕನಸಿಟ್ಟುಕೊಂಡು ನೇಮಕಾತಿ ಸ್ಥಳಕ್ಕೆ ಹೋಗುವ ಸಾವಿರಾರು ಅಮಾಯಕರಿಗೆ ಬೇರೆಬೇರೆ ರೀತಿಯದೇ ಅನುಭವಗಳು ಆಗಿವೆ. ರೈಲ್ವೇ ಇಲಾಖೆಯ ಈ ವಂಚನೆಯನ್ನು ಬಹಿರಂಗವಾಗಿ ವಿರೋಧಿಸಲು ಭಾರತ ಕಮ್ಯುನಿಸ್ಟ್ ಪಕ್ಷದ ಧಾರವಾಡ ಜಿಲ್ಲಾ ಘಟಕ ಸಜ್ಜಾಗಿದೆ. ಇದೇ 16 ರಂದು ನೈರುತ್ಯ ರೈಲ್ವೇ ನೇಮಕಾತಿ ಕಚೇರಿ ಎದುರು ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ. ಇದನ್ನು ಕಾನೂನಾತ್ಮಕ ಹೋರಾಟವನ್ನಾಗಿಸಲು ಹೈಕೋರ್ಟ್ ವಕೀಲರಾದ ಆರ್.ಎಂ.ಜಾವೇದ್ ಸಿದ್ದರಿದ್ದು ರೈಲ್ವೇಯಿಂದ ವಂಚನೆಗೊಳಗಾದವರನ್ನು ಸಂಘಟಿಸುತ್ತಿದ್ದಾರೆ.

2007 ಮತ್ತು 2009ರಲ್ಲಿ ನಡೆದ ಗ್ರೂಪ್ ಡಿ ನೇಮಕಾತಿಯಲ್ಲಿ ಅರ್ಹತೆಯಿದ್ದು ಇಂತಹ ಸಿಲ್ಲಿ ಕಾರಣಗಳಿಂದ ಉದ್ಯೋಗ ವಂಚಿತರಾದ ಯಾರೇ ಇದ್ದರೂ ಅವರು ಮುಕ್ತವಾಗಿ ಜಾವೇದ್ ಅವರನ್ನು ಅವರ ಮೊಬೈಲ್ ಸಂಖ್ಯೆ (9743797164, 9343402472) ಮೂಲಕ ಸಂಪರ್ಕಿಸಬಹುದು ಅಥವಾ ಹಳೇ ಹುಬ್ಬಳ್ಳಿಯ ಬ್ರಿಡ್ಜ್ ಬಳಿಯಿರುವ ಮುಧೋಳ ಭವನದಲ್ಲಿ ಅವರನ್ನು ಖುದ್ದಾಗಿ ಕಾಣಬಹುದು. ಅಂತೂ ರೈಲ್ವೇ ಇಲಾಖೆಯ ಭ್ರಷ್ಟ ಕೈಗಳ ವಿರುದ್ಧ ಹೋರಾಡಲು ಪಡೆಯೊಂದು ಸಜ್ಜಾಗಿದೆ. ಅದು ಯಶಸ್ವಿಯಾದರೆ, ಲಕ್ಷಾಂತರ ನಿರುದ್ಯೋಗಿಗಳಿಗೆ ಆಗುತ್ತಿರುವ ಮೋಸವಾದರೂ ತಪ್ಪಿದಂತಾಗುತ್ತದೆ.

■ ಹುಬ್ಬಳ್ಳಿಯಿಂ



ಕಾರಣದಿಂದಲೇ ಯಡಿಯೂರಪ್ಪನ ಪರವಾದ ಈ ಭಾಗದ ಶಾಸಕರ ಪಟ್ಟಿಯಲ್ಲಿ ಚಿಕ್ಕನಗೌಡನದೇ ಮೊದಲ ಹೆಸರು.

ಮುಂದಿನ ಚುನಾವಣೆಯ ತಯಾರಿಯನ್ನು ಕ್ಷೇತ್ರದಲ್ಲಿ ಈಗಾಗಲೇ ಶುರುವಿಟ್ಟಿರುವ ಚಿಕ್ಕನಗೌಡರು "ಬಿ.ಜೆ.ಪಿ.ಯನ್ನು ನಂಬಬೇಡಿ. ನಾನು ಅಲ್ಲಿರಲ್ಲ. ಕೆ.ಜೆ.ಪಿ.ಯಿಂದ ಸ್ಪರ್ಧಿಸುತ್ತೇನೆ" ಎಂಬ ಡೈಲಾಗ್ ಹೊಡೆಯುತ್ತಿದ್ದಾನೆ. ಇದಕ್ಕೆ ಪ್ರತಿಯಾಗಿ, ಬಿ.ಜೆ.ಪಿ ಸರ್ಕಾರದಲ್ಲೇ ಪ್ರಭಾವಿ ಶಾಸಕನಾಗಿದ್ದರೂ ಅಭಿವೃದ್ಧಿಗೆ ಕ್ಯಾರೆ ಎನ್ನದ ಗೌಡ ಎಲ್ಲಿದ್ದರೂ ಅಷ್ಟೇ ಎಂಬ ಮಾತುಗಳು ಜನರ ಬಾಯಿಂದ ಕೇಳಿಬರುತ್ತಿವೆ. ಇದೇ ಹವಾ ಚುನಾವಣೆವರೆಗೂ ಮುಂದುವರೆದದ್ದೇ ಆದಲ್ಲಿ ಕೆ.ಜೆ.ಪಿ.ಯ ಮೊದಲ ಸೋಲು ಇಲ್ಲಿಂದಲೇ ಪ್ರಾರಂಭವಾದರೆ ಆಶ್ಚರ್ಯವಿಲ್ಲ.

ಕೆಲಸವಿಲ್ಲದೆ ಕೋಟಿ ಗಳಿಕೆ

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಅತಿಹೆಚ್ಚು ಭ್ರಷ್ಟಾಚಾರ ನಡೆದಿರುವ ಕ್ಷೇತ್ರವೆಂದರೆ ಅದು ಕುಂದಗೋಳ ಕ್ಷೇತ್ರ. ಸರ್ಕಾರದಿಂದ ಇಲ್ಲಿಗೆ ಮಂಜೂರಾಗಿ ಬಂದ ಹತ್ತಾರು ಕೋಟಿ ಅನುದಾನದ ಒಂದೇಒಂದು ರೂಪಾಯಿ ಕೂಡ ಸದ್ಬಳಕೆಯಾಗಿಲ್ಲ. ಕೇಂದ್ರದ ಮಹತ್ವಾಕಾಂಕ್ಷೆಯ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಹಾಗೂ ಅತಿವೃಷ್ಟಿ, ಅನಾವೃಷ್ಟಿಯಿಂದಾಗಿ ಬಂದ ಕೋಟ್ಯಂತರ ಹಣ ಕಾಮಗಾರಿ ಕಾಣದೆ ನೇರವಾಗಿ ಗೌಡರ ತಿಜೋರಿ ಸೇರಿದೆ.

ಚಿಕ್ಕನಗೌಡರು ಕೈಗೊಂಡ ರಸ್ತೆ ಕಾಮಗಾರಿಗಳ ಆಯುಷ್ಯ ಕೇವಲ ಎರಡೇ ತಿಂಗಳು ಎನ್ನುವ ಹೊಸ ನಾಣ್ಣುಡಿಯೊಂದು ಇಲ್ಲಿ ಹುಟ್ಟಿಕೊಂಡಿದೆ. ಇದಕ್ಕೆ ಸಾಕ್ಷಿಯೆಂಬಂತೆ ಶಿರೂರು-ಬಸಾಪೂರ, ಹರ್ಲಾಪುರ-ಸವಣೂರು, ಕುಂದಗೋಳ-ಬಿಡನಾಳ, ಸವಣೂರ-ಶೇರವಾಡ ರಸ್ತೆಗಳಿಗೆ ಹಾಕಿದ್ದ ಟಾರನ್ನು ಈಗ ಹುಡುಕುವಂತಾಗಿವೆ. ತಾಲ್ಲೂಕಿನ ಅತಿದೊಡ್ಡ ಗ್ರಾಮವಾದ ಗುಡಗೇರಿಯಲ್ಲಿ 3 ಕೋಟಿ ವೆಚ್ಚದಲ್ಲಿ ಕೈಗೊಳ್ಳಬೇಕಿದ್ದ ಡಬಲ್ ರಸ್ತೆಗೆ ಟೆಂಡರ್ ಆಗಿದ್ದರೂ ಪರ್ಸೆಂಟೇಜ್ ಬಂದಿಲ್ಲ ಎಂಬ ಕಾರಣಕ್ಕೆ ಗುತ್ತಿಗೆ ನೀಡಲು ಶಾಸಕ ಚಿಕ್ಕನಗೌಡ ಹಿಂದೇಟು ಹಾಕುತಿದ್ದಾನೆ.

ಕ್ಷೇತ್ರದಲ್ಲಿ ವಸೂಲಿ ದಂಧೆಗೆ ತನ್ನ ಅಳಿಯ ಗದಿಗೆಪ್ಪ ಕಳ್ಳಿಮನಿ ಹಾಗೂ ತಮ್ಮ ರುದ್ರಗೌಡನಿಗೆ ಫುಲ್ ಉಸ್ತುವಾರಿ ನೀಡಿದ್ದಾನೆ. ಈಗ ತಾಲ್ಲೂಕಿನ ಆಯಕಟ್ಟಿನ ಜಾಗೆಯಲ್ಲಿನ ಅಧಿಕಾರಿಗಳ ಮೇಲೆ ಇವರದ್ದೇ ಹಿಡಿತ. ಇವರು ಹೇಳಿದ ಫೈಲಿಗಷ್ಟೇ ಅವರು ಸಹಿ ಮಾಡುವಂತಾಗಿದೆ. ಇನ್ನುಳಿದಂತೆ ಅಧಿಕಾರಿಗಳ ವರ್ಗಾವಣೆ, ಕಾಮಗಾರಿಗಳ ಪರ್ಸೆಂಟೇಜ್ ಫಿಕ್ಸ್ ಮಾಡಲು ಮಾಜಿ ಶಾಸಕ ಬಿ.ಎ.ಉಪ್ಪಿನವರ ಮಗ ಅಂದಾನೆಪ್ಪ ಉಪ್ಪಿನ, ತಾಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಡಿ.ವೈ.ಲಕ್ಕನಗೌಡರ, ಪುರಸಭೆಯ ಮಾಜಿ ಅಧ್ಯಕ್ಷ ಈಶ್ವರಪ್ಪ ಗಂಗಾಯಿ, ಪ್ರಕಾಶ್ ಕೂಬ್ಯಾಳ, ಯಡವಣ್ಣವರಂತಹ ಕ್ರಿಮಿಗಳನ್ನು ಚಿಕ್ಕನಗೌಡ ಸಾಕಿ ಬೆಳೆಸಿದ್ದಾನೆ. ಇವರೆಲ್ಲಾ ಸೇರಿಕೊಂಡು ಬಸವ ವಸತಿ ಯೋಜನೆಯಲ್ಲಿ ಮಂಜೂರಾದ ಬಡಜನರ ಮನೆಗಳನ್ನೂ 25-30 ಸಾವಿರಕ್ಕೆ ಬಿಕರಿಮಾಡಿಕೊಂಡಿದ್ದಾರೆ. ಬೆಣ್ಣಿಹಳ್ಳ ದುರಸ್ತಿಗೆಂದು ಸರ್ಕಾರ ನೀಡಿದ ಕೋಟ್ಯಂತರ ಅನುದಾನವನ್ನು ನವಲಗುಂದದ ಶಾಸಕ ಶಂಕರಪಾಟೀಲ ಮುನೇನಕೊಪ್ಪನೊಂದಿಗೆ ಸೇರಿಕೊಂಡು ನುಣ್ಣಗೆ ಬೋಳಿಸಿದ್ದೂ ಆಗಿದೆ. ಶಾಸಕನ ಈ ವರಸೆ ನೋಡಿ 'ಇಲ್ಲಿ ಕಾಮಗಾರಿ ಇಲ್ಲ, ಕರೆನ್ಸಿ ಮಾತ್ರ ಬಿಡಲ್ಲ ಎಂಬ ಸ್ಲೋಗನ್ ಕುಂದಗೋಳದ ಗಲ್ಲಿಗಳಲ್ಲಿ ಬಿಂದಾಸ್ ಚಾಲ್ತಿಯಲ್ಲಿದೆ.

ಶಾಸಕ ಚಿಕ್ಕನಗೌಡನ ವಿರುದ್ಧ ಯಾರೂ ಪ್ರತಿಭಟನೆ ಮಾಡುವಂತಿಲ್ಲ. ಒಂದು ವೇಳೆ ಮಾಡಿದರೆ, ಅವರ ಮೇಲೆ ಕಂಪ್ಲೇಂಟ್ ಗ್ಯಾರಂಟಿ. ತಾಲ್ಲೂಕು ಕೇಂದ್ರದಲ್ಲಿ ಪ್ರತಿ ಸೋಮವಾರ ಎಲ್ಲಾ ಅಧಿಕಾರಿಗಳು ಹಾಜರಿರಬೇಕು ಎಂಬ ಸರ್ಕಾರಿ ಆದೇಶವನ್ನ ಇಲ್ಲಿಯ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದ ನೂರಾರು ರೈತರು ಚಿಕ್ಕನಗೌಡನ ಚೇಲಾ ಅಧಿಕಾರಿಗಳಿಗೆ ಧಿಕ್ಕಾರ ಹಾಕಿದ್ದರು. ಇದಾದ ಮಾರನೆಯ ದಿನವೇ 15 ಕ್ಕೂ ಹೆಚ್ಚು ರೈತ ಮುಖಂಡರ ಮೇಲೆ ಚಿಕ್ಕನಗೌಡ ಕೇಸ್ ಫಿಟ್ ಮಾಡಿಸಿದ್ದು ಈತನ ದಬ್ಬಾಳಿಕೆಯ ರಾಜಕೀಯ ಖದರ್‌ಗೆ ಒಂದು ತಕ್ಕ ನಿದರ್ಶನ.

ಅಕ್ಕಿ ಎಂಟ್ರಿಗೆ ತರಗುಟ್ಟಿದ ಗೌಡ

ಕ್ಷೇತ್ರದ ಇತಿಹಾಸದಲ್ಲೇ ಪ್ರಾಮಾಣಿಕ ಮತ್ತು ಸಜ್ಜನ ರಾಜಕಾರಣಿ ಎಂದು ಹೆಸರು ಮಾಡಿದ್ದ ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್.ಅಕ್ಕಿ ಈ ಬಾರಿ ಜೆ.ಡಿ.ಎಸ್ ಮೂಲಕ ಕಣಕ್ಕಿಳಿಯಲು ತಯಾರಿ ನಡೆಸಿದ್ದಾರೆ. ಇದು ಸದ್ಯ ಚಿಕ್ಕನಗೌಡನ ಬುಡಕ್ಕೆ ಖಾರ ಇಟ್ಟಂತಾಗಿದೆ.

ಬಿ.ಜೆ.ಪಿ.ಯನ್ನು ವಿರೋಧಿಸುತ್ತಲೇ ರಾಜಕಾರಣ ಆರಂಭಿಸಿದ ಅಕ್ಕಿ ಸಂಯುಕ್ತ ಜನತಾದಳದಲ್ಲಿ ಪ್ರಬಲ ಲಿಂಗಾಯತ ನಾಯಕ ಕೂಡಾ ಆಗಿದ್ದರು. ಆದರೆ, ಈಗಿನ ಜಲಸಂಪನ್ಮೂಲ ಮಂತ್ರಿ ಬಸು ಬೊಮ್ಮಾಯಿಯ ಕುತಂತ್ರಕ್ಕೆ 5 ವರ್ಷ ರಾಜಕೀಯ ವನವಾಸ ಅನುಭವಿಸುವಂತಾಯಿತು.

ಕುಂದಗೋಳ ಕ್ಷೇತ್ರ ಬಿಟ್ಟುಕೊಟ್ಟಿದ್ದಕ್ಕೆ ಎಂ.ಎಲ್.ಸಿ ಮಾಡಿಸ್ತೀನಿ, ನಿಗಮ ಮಂಡಳಿ ಅಧ್ಯಕ್ಷಗಿರಿ ಕೊಡಿಸ್ತೀನಿ ಅಂತೆಲ್ಲಾ ರೈಲು ಹತ್ತಿಸುತ್ತಲೇ 5 ವರ್ಷ ಸಾಗು ಹಾಕಿದ ಬೊಮ್ಮಾಯಿಯ ನಯವಂಚಕ ಬುದ್ಧಿಗೆ ಬೇಸತ್ತಿರುವ ಅಕ್ಕಿ ಈಗ ಕ್ಷೇತ್ರದ ಜನರ ಒತ್ತಾಯದ ಮೇರೆಗೆ ಜೆ.ಡಿ.ಎಸ್ ಸೇರಿ ಚುನಾವಣಾ ಅಖಾಡಕ್ಕಿಳಿಯಲು ಸಜ್ಜಾಗಿದ್ದಾರೆ.

ಎರಡು ಅವಧಿಗೆ ಶಾಸಕರಾಗಿದ್ದ ಅಕ್ಕಿ ಕ್ಷೇತ್ರದಲ್ಲಿ ಯಾರೊಂದಿಗೂ ವಿರೋಧ ಕಟ್ಟಿಕೊಂಡ ಮನುಷ್ಯನಲ್ಲ. ಕ್ಷೇತ್ರದ ಅಭಿವೃದ್ಧಿಗೆ ಇದ್ದುದರಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದ ಅಕ್ಕಿಯವರಿಂದಾಗಿ ತಕ್ಕ ಮಟ್ಟಿಗೆ ಸುಸ್ಥಿತಿಯಲ್ಲಿದ್ದ ಕುಂದಗೋಳದಲ್ಲಿ ಒಂದಷ್ಟು ಜನೋಪಕಾರಿ ಕಾಮಗಾರಿಗಳೂ ನಡೆದಿದ್ದವು.


ಒಟ್ಟಿನಲ್ಲಿ ಕುಂದಗೋಳ ಕ್ಷೇತ್ರದ ಚುನಾವಣಾ ಅಖಾಡ ಈಗಿನಿಂದಲೇ ರಂಗೇರುತ್ತಿದೆ. ಕಾಂಗ್ರೆಸ್ಸಿನಿಂದ ಮಾಜಿ ಶಾಸಕ ಸಿ.ಎಸ್.ಶಿವಳ್ಳಿ, ಬಿ.ಜೆ.ಪಿ.ಯಿಂದ ಎಂ.ಆರ್.ಪಾಟೀಲ, ಬಿ.ಎಸ್.ಆರ್ ಕಾಂಗ್ರೆಸ್ಸಿನಿಂದ ಗುಡಗೇರಿಯ ಯುವಕ ಶಿವಾನಂದ ಬೆಂತೂರ ಈಗಾಗಲೇ ಪ್ರಚಾರ ಶುರುಮಾಡಿದ್ದಾರೆ. ಆದರ ಭ್ರಷ್ಟ ಚಿಕ್ಕನಗೌಡನಿಗೆ ಸೋಲುಣಿಸಿ ಮನೆ ಸೇರಿಸಲು ಜೆಡಿ.ಎಸ್‌ನ ಮಲ್ಲಿಕಾರ್ಜುನ ಅಕ್ಕಿಯೊಬ್ಬರೇ ಸಾಕು ಎನಿಸುತ್ತೆ.

■ ಹುರಳಿಕುಪ್ಪಿ ವಿನಯ್

ಅನಿತಾ ಯೆಮ್ಮೆಲ್ಲೆ ಆದಮ್ಯಾಲೆ ಭವಾನಿನೂ ಆಗಬೇಕಲ್ಲವೇನ್ರಿ?

ಕರ್ನಾಟಕ ಹೌಸಿಂಗ್ ಬೋರ್ಡಿನ ಚೇರಿನಲ್ಲಿ ಕುಳಿತು ಬರಿಗೈಲಿ ಮನೆಗೆ ಹೋಗುವುದು ಶುದ್ಧ ಅವಮಾನವಲ್ಲವೆ. ಈ ಹಿಂದೆ ಚೇರ್ಮನ್ ಆಗಿದ್ದವರು ಬೆಂಗಳೂರಲ್ಲಿ ಎಷ್ಟು ಸೈಟು ಮಾಡಿಕೊಂಡಿದ್ದಾರೆ. ಆದರೆ ತಾನು ಮೈಸೂರಿನಲ್ಲಿ ಕನಿಷ್ಠ ಮೂರು ಎಕರೆ ಮಾಡಿಕೊಂಡರೆ ತಪ್ಪೆ? ಹಾಗೆ ನೋಡಿದರೆ ಇಡೀ ಬಿಜೆಪಿ ಸರ್ಕಾರ ಕರ್ನಾಟಕವನ್ನೇ ಹರಿದುಮುಕ್ಕುತ್ತಿದೆ. ಮಂತ್ರಿಗಳಂತೂ ಕೋಟಿಗಟ್ಟಲೆ ಬಾಚಿದ್ದಾರೆ. ಅವರನ್ನೆಲ್ಲಾ ನೋಡಿ ಸುಮ್ಮನೆ ಕೂರಲೆ ಎಂದು ಯೋಚಿಸಿದ ಜಿ.ಟಿ. ದೇವೇಗೌಡ ಕೆಎಚ್‌ಬಿ ಕಳ್ಳರಕೂಟ ಕಟ್ಟಿಕೊಂಡು ಮೈಸೂರು ಸಮೀಪದ ಹಳ್ಳಿಗಳ ರೈತರ ಜಮೀನನ್ನೆ ಲಪಟಾಯಿಸಿದನಂತಲ್ಲಾ. ಇದನ್ನು ಕಣ್ಣಾರೆ ಕಂಡ ಸಂಸದ ವಿಶ್ವನಾಥ್ "ಕರ್ನಾಟಕ ಹೌಸಿಂಗ್ ಬೋರ್ಡು ಕಳ್ಳರ ಕೂಪವಾಗಿದೆ. ಅದರ ನಾಯಕ ಜಿ.ಟಿ. ದೇವೇಗೌಡ" ಎಂದು ಪತ್ರಿಕಾ ಗೋಷ್ಠಿ ನಡೆಸಿಬಿಟ್ಟರಂತಲ್ಲಾ. ಇದಕ್ಕೆ ಪ್ರತ್ಯುತ್ತರವಾಗಿ ದೇವೇಗೌಡ "ಇತ್ತೀಚಿಗೆ ಮೈಸೂರು ಹಾಳಾಗುತ್ತಿದೆ. ಇಲ್ಲಿ ವ್ಯಭಿಚಾರಗಳು ಹಗಲು ಹೊತ್ತೆ ನಡೆಯುತ್ತಿವೆ. ವಿಶ್ವನಾಥ್ ಎಂಬುವನು ಹಗಲು ಹೊತ್ತೆ ಚಂದ್ರಪ್ರಭಾ ಅರಸ್‌ರವರ ಸೀರೆ ಎಳೆದಿದ್ದ" ಎಂದುಬಿಟ್ಟನಂತಲ್ಲಾ, ಥೂತ್ತೇರಿ!

****



ನೀನು ನನ್ನ ಬಗ್ಗೆ ಏನಾದರೂ ಹೇಳಿದರೆ ನಾನೂ ಏನಾದರೂ ಹೇಳುತ್ತೇನೆ ಎಂಬ ಜೆಡಿಎಸ್ ನೀತಿಯಿಂದ ಹೊರಬಂದ ಜಿ.ಟಿ. ದೇವೇಗೌಡ ತಿಂದದ್ದನ್ನು ದಕ್ಕಿಸಿಕೊಳ್ಳಲು ಪುನಃ ಜೆಡಿಎಸ್ ಕಡೆ ನೋಡಲಾರಂಭಿಸಿದ್ದಾನಂತಲ್ಲಾ. ಅದೇ ಹೊತ್ತಿಗೆ ಯಾವ ರೇವಣ್ಣನಿಂದ ನೊಂದು, ಬೆಂದು ಬಿಜೆಪಿ ಸೇರಿದ್ದನೊ ಅದೇ ರೇವಣ್ಣನ ಕಾಟದಿಂದ ಸಕಲೇಶ್‌ಪುರದ ವಿಶ್ವನಾಥ ಮತ್ತು ಚನ್ನರಾಯಪಟ್ಟಣದ ಪುಟ್ಟೇಗೌಡ ಪಾರ್ಟಿ ಬಿಟ್ಟುಹೊರಟ ಸುದ್ದಿ ಕೇಳಿ ಕಂಗಾಲಾದನಂತಲ್ಲಾ, ತಿಂದಿರುವುದನ್ನು ದಕ್ಕಿಸಿಕೊಂಡು ಕೋರ್ಟಿಗೆ, ಜೈಲಿಗೆ ಸೇರ ಮಾಡದೆ ಶಲೆ ಎತ್ತಿ ಠೇಂಕಾರ ಮಾಡಬೇಕಾದರೆ ಕೆಜೆಪಿಯೇ ಸೂಕ್ತವೆಂದು ಜಿ.ಟಿ. ಅಪ್ಪರು ಸಲಹೆ ನೀಡಿದರಂತಲ್ಲಾ, ಆಗ ಜಿ.ಟಿ. ದೇವೇಗೌಡ "ನನ್ನ ಮುಂದೆ ಇನ್ನು ನಾಲ್ಕಾರು ತಿಂಗಳುಗಳಿವೆ. ಅಷ್ಟರಲ್ಲಿ ಮೈಸೂರು ಸಮೀಪದ ಎಷ್ಟಾದರೂ ಹಳ್ಳಿಯಿದ್ದರೆ ಅಥವಾ ಮೈಸೂರು ಆಸುಪಾಸಲ್ಲೇ ಭೂಮಿಯಿದ್ದರೆ ಹುಡುಕಿ" ಎಂದು ಕಳ್ಳ ಅಧಿಕಾರಿಗಳಿಗೆ ಹೇಳಿದನಂತಲ್ಲಾ, ಆಗ ಅಧಿಕಾರಿಗಳು "ರಾಮದಾಸ ಎಂಬ ಮಂತ್ರಿ, ಯಾವ ಜಾಗವನ್ನೂ ಉಳಿಸಿಲ್ಲ" ಎಂದರಂತಲ್ಲಾ, ಥೂತ್ತೇರಿ!!

****

ಎಚ್.ಡಿ. ರೇವಣ್ಣನವರ ಧರ್ಮಪತ್ನಿ ರಾಜಕಾರಣಕ್ಕೆ ಬರಲಿದ್ದಾರೆಂಬ ಸುದ್ದಿ ಕೇಳಿ ರೇವಣ್ಣನಿಗೇ ಫೋನ್ ಮಾಡಿದರೆ ಹೇಗೆ ಅನ್ನಿಸಿತು. ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು,

ರಿಂಗ್ ಟೋನ್: "ಹನಿಹನಿಗೂಡಿದ್ರೆ ಹಳ್ಳ ತೆನೆತೆನೆಗೂಡಿದ್ರೆ ಬಳ್ಳ....."

"ಹಲೋ ಯಾರ್ರಿ?"

"ನಾನು ಸಾರ್, ಯಾಹು, ಪತ್ರಕರ್ತ."

"ಪ್ರೆಸ್ ಮೀಟ್ ಕರದಾಗ ಬನ್ರಿ. ಈಗ್ಯಾಕ್ ಫೋನ್ ಮಾಡ್ತಿರಿ?"

"ಒಂದೇ ನಿಮಿಷ ಸಾರ್. ಭವಾನಿಯವರು ಚೆನ್ನಾಗಿದ್ದಾರ ಸಾರ್?"

"ಈಗ್ಯಾಕ್ರಿ ಅವ್ರುರ ಸುದ್ದಿ?"

"ಏನಿಲ್ಲ ಸಾರ್, ಅವರು ರಾಜಕಾರಣಕ್ಕೆ ಬರ್ತಿನಿ ಅಂದಿದ್ರು. ಆದ್ರೆ ದೇವೇಗೌಡ್ರು ಬೇಡ ಅಂದವ್ರುರೆ. ಇದು ಸರಿನಾ ಸಾರ್?"

"ನಮ್ಮ ತಂದೆ ಅಂಗೇಳ್ತರೆ ಅಂತ ಅದ್ನೆ ನಂಬಿಕತಿರಲ್ರೀ. ನಾನು ರಾಜಕೀಯಕ್ಕೆ ಬತ್ತಿನಿ ಅಂದಾಗ್ಲು ಅಂಗೆ ಅಂದಿದ್ರು."

"ಓಹೋ ಅವ್ರುರು ಬೇಡ ಅಂದ್ರೆ ಬನ್ನಿ ಅಂತ್ಲ ಸಾರ್."

"ಅಂಗಲ್ಲ ಕಂಡ್ರಿ. ಸಾರ್ವಜನಿಕವಾಗಿ ಅಂತ ಮಾತ ಒಪ್ಪಿಗಳಕ್ಯಾಯ್ತದೇನ್ರಿ? ಕುಮಾರನೆಡ್ತಿ ಅನಿತ ಯಲಕ್ಷನ್ನಿಗೆ ನಿಂತಗತ್ತಿನಿ ಅಂದಾಗ ನಮ್ಮ ತಂದೆ ನಿಂತಕೊ ಅನ್ನಲಿಲ್ಲ, ಬೇಡ ಅಂತ್ಲೂ ಹೇಳಲಿಲ್ಲ."

"ಮತ್ತೆ ಯಂಗೆ ಸಾ ನಿಮ್ಮ ರಾಜಕಾರಣದ ಮರ್ಮ?"

"ಅಲ್ಲ ಕಂಡ್ರಿ ನೀವೇ ಹೇಳಿ, ಕುಮಾರ ದೊಡ್ಡೊನೊ ನಾನು ದೊಡ್ಡೊನೊ?"

"ಹಿರಿಯೋನು ಕಿರಿಯೋನು ಅನ್ನದಕ್ಕಿಂತ ಕಿಲಾಡಿತನ ಮುಖ್ಯ ಸಾರ್. ಕುಮಾರಣ್ಣ ಯಾರನ್ನೆ ಆಗ್ಲಿ ಭುಜದ ಮೇಲೆ ಕೈ ಹಾಕಿ ಬನ್ನಿ ಬ್ರದರ್ ಅಂತನೆ. ಆಗಾಗ್ಗೆ ಕೆನ್ನೆಗೆ ಮುತ್ತು ಕೊಡ್ತನೆ. ನೀವಂಗೆ ಮಾಡ್ತಿರ?"

"ಥೂ, ಮುತ್ತು ಕೊಡಕ್ಕೆ ಮನೇಲಿ ಹೆಂಡ್ತಿ ಇಲವೇನ್ರಿ? ಅದರಲ್ಲೂ ಗಂಡುಸುರು ಕೆನ್ನಿಗೆ ಮುತ್ತು ಕೊಡಕ್ಕೆ ನನಿಗೇನು ತಲಿಕೆಟ್ಟದೇನ್ರಿ? ನಾನು ಯಾರಿಗೂ ಥ್ಯಾಂಕುನೂ ಕೊಡಕಿಲ್ಲ; ಅಂತದರಲ್ಲಿ ಮುತ್ತು ಕೊಡ್ತಿನೇನ್ರಿ."

"ನಿಜ, ಅಕಸ್ಮಾತ್ ನೀವು ಕೊಟ್ರು ಯಮ್ಮೆಕರ ಕೊಟ್ಟಂಗಾಯ್ತದೆ."

"ಏನಂದ್ರಿ? ಇನ್ನೊಂದು ಸತಿ ಹೇಳಿ."

"ನೀವು ಕೊಟ್ರೆ ಯಾವ ತರ ಆಯ್ತದೆ ಅಂದೆ ಸಾ. ಆದ್ರು ನಿಜವಾದ ಗಂಡುಸು ಗಂಡಿಸಿಗೇ ಮುತ್ತು ಕೊಡೊದಿಲ್ಲ, ಕೈ ಕೊಡ್ತನೆ. ಆದ್ರೆ ನೀವು ಕೈನೂ ಕೊಡದಿಲ್ಲ ಅಂತಿರಿ. ಪ್ರೀತಿ, ಅಭಿಮಾನದ ಪ್ರಕಟಣೆ ಯಾವ ತರ ಮಾಡ್ತಿರಿ ಸಾರ್?"

"ಅವ್ಯಲ್ಲ ಏನೊ ಗೊತ್ತಿಲ್ಲ ಕಂಡ್ರಿ ನನಿಗೆ. ದ್ಯಾವೇಗೌಡ್ರು ದೊಡ್ಡ ಮಗ ಯಂಗಿರಬೇಕೊ ಅಂಗಿದ್ದಿನಿ. ಅದ ಯಲ್ರು ತಿಳಕಬೇಕು ಅಷ್ಟೆ."

"ಅದ ತಿಳಕಳಕ್ಕಾಗದೆ ಪುಟ್ಟೇಗೌಡ, ವಿಶ್ವನಾಥ್ ಹೊರಗೋದ್ರು ಸಾರ್."

"ಹೋಗ್ಲಿ ಬುಡ್ರಿ, ಅದೇನು ಮಾಡ್ತರೊ ನಾನು ನೋಡ್ತಿನಿ."

"ಕೆಎಂಎಫ್ ಛೇರ್‌ಮನ್‌ಗಿರಿ ಹೋಗುವಾಗ್ಲು ಹಿಂಗೆ ಮಾತಾಡಿದ್ರಿ."

"ನೋಡ್ರಿ, ಇಂತ ಮಾತಿಗ್ಯಲ್ಲ ಈ ರೇವಣ್ಣ ಹೆದರದಿಲ್ಲ, ಕುಮಾರ ಮುಖ್ಯಮಂತ್ರಿಯಾಗಿದ್ದಾಗ ಯಲ್ಲಾರು ಕುಮಾರಣ್ಣ, ಕುಮಾರಣ್ಣ ಅಂತ ನನ್ನ ಸ್ಯಗ್ಲೆಟ್ ಮಾಡಿದ್ರು. ಆಗ ನಾನೇನು ಅಂತ ತೋರಿಸ್ದೆ. ಈಗ್ಲೂ ಅಂಗೆ ಮಾಡ್ತಿನಿ."

"ಆಗ್ಯಾರಿಗೆ ತೋರಿದ್ರಿ, ಸಾರ್."

"ಅವ್ರುನೆ ಕಂಡ್ರಿ ಚಲುವರಾಯಸ್ವಾಮಿ. ಕುಮಾರನ ಜೊತೆ ಸೇರಿಕೊಂಡು ತಾನೆ ಉಪಮುಖ್ಯಮಂತ್ರಿ ತರ ಆಡತಿದ್ದ, ಅವ್ರುನ ಕ್ಷೇತ್ರದ ಹುಡುಗರ ಕರದು ಅವ್ರುನಿಗೆ ಕ್ಯಾನುವಾಸು ಮಾಡಬ್ಯಾಡಿ ಸ್ವೀಟ್ ಕೊಡ್ತಿನಿ ಅಂದೆ. ಅಂಗೆ ಮಾಡಿದ್ಕೆ ಚಲುವ ಸೋತೋದ. ಆ ಹುಡುಗರ ಕರದು ಕೆಎಂಎಫ್ ಕೋವಾ ಕೊಟ್ಟು ಕಳಿಸಿದ್ದೆ."

"ಅಂಗರ ಸ್ವೀಟನ್ನೂ ದುಡ್ಡು ಕೊಟ್ಟು ತರಿಸಿರಲಿಲ್ಲ ಅನ್ನಿ."

"ದುಡ್ಡು ಕೊಡದೆ ಪುಗಸಟ್ಟೆ ಬತ್ತದೇನ್ರಿ. ದುಡ್ಡು ನಾನೇ ಕೊಡಬೇಕು ಅನ್ನದೇನು, ನಮ್ಮ ಕಾರ್ಯಕರ್ತರು ಕೊಡ್ತರೆ."

"ದೇವೇಗೌಡ್ರೂ ಅಂಗೆ ಸಾರ್. ದೇವಸ್ಥಾನಕ್ಕೆ ಬತ್ತರೆ. ಮಂಗಳಾರತಿ ತಟ್ಟೆಗೆ ಕಾಸಾಕಬೇಕಾದ್ರೆ ಜೇಬು ಹುಡುಕ್ತರೆ. ಅಷ್ಟರಲ್ಲಿ ಯಾರೊ ಕಾರ್ಯಕರ್ತ ಹಾಕಿಬುಡ್ತನೆ. ಅಪ್ಪನಿಗೆ ತಕ್ಕ ಮಗ ಅಂದ್ರೆ ನೀವು ಸಾರ್."

"ಅದ್ಕೆ ಕಂಡ್ರಿ, ನನ್ನೆಡ್ತಿನೂ ಯಮ್ಮೆಲ್ಲೆ ಮಾಡಿ ಅಂದ್ರೆ ನಮ್ಮ ತಂದೆ ಮಾತಾಡ್ತಯಿಲ್ಲ. ಕುಮಾರನೆಡ್ತಿ ಮಾತ್ರ ಯಮ್ಮೆಲ್ಲೆ ಆಗಬೇಕು ನನ್ನೆಂಡ್ತಿ ಆಗಬಾರ್ದ?"

"ನಿಜವಾಗ್ಲು ಆಗಬೇಕು ಸಾರ್. ಆ ಯೋಗ್ಯತೆ ಇರದೆ ಭವಾನಕ್ಕನಿಗೆ.

ಥೂತ್ತೇರಿ

▶ ಯಾಹೂ

ನೋಡಿ ಆಗ್ಲೆ ಬೆಂಗಳೂರು ಬಡಾವಣೆ, ಸರ್ಕಲಿನಲ್ಲಿ ರಾಧಿಕನ ಫೋಟೋ ಮಿಂಚಿತಾ ಅವೆ. ಆಕೆಗೂ ಯಾವುದಾದ್ರು ಕ್ಷೇತ್ರ ಮುಂದೆ ರೆಡಿಯಾಯ್ತದಾ ಸಾರ್."

"ಅದಕ್ಕೆಲ್ಲ ನಾವು ಅವಕಾಸ ಕೊಡದಿಲ್ಲ ಕಂಡ್ರಿ. ಅನಿತಾ ಯಮ್ಮೆಲ್ಲೆ ಆದಾಗ್ಲಿಂದ ನನ್ನೆಂಡ್ತಿ ಕೈಲಿ ಬೈಸಿಗೆಳದೇ ಆಗ್ಯದೆ. ಮನಿಗೆ ಬಂದಾಗ ಹೆಡತಿ ಮಕ ಸಿಂಡ್ರಿಸಿಗಂಡು ಬೋದ್ರೆ ಬೇಜಾರಾಗದಿಲ್ಲವೇನ್ರಿ. ಅದ್ಕೆ ನಾನು ಹೋಗಿ ತಂದೆಯೊರ್‍ನೆ ಕೇಳು, ನನ್ನೇನು ಕೇಳ್ತಿ ಅಂದೆ."

"ಆದ್ರು ಟಿಕೆಟ್ ಕೊಡೋರು ಪಾರ್ಟಿ ಪ್ರೆಸಿಡೆಂಟಲ್ಲವ ಸಾರ್?"

"ಪ್ರೆಸಿಡೆಂಟು ಸುಮ್ಮನೆ ನೈಪುಕ್ಕೆ ಮಾಡಿ ಕುಂಡ್ರಿಸಿರತಿವಿ ಕಂಡ್ರಿ. ಕಡಿಗೆ ಯಲ್ಲಾರಿಗೂ ನಮ್ಮಪ್ಪನೆ ಕೊಡದು."

"ಕೊಡ್ದಿಲ್ಲ ಅಂದ್ರೇನು ಮಾಡ್ತಿರಿ ಸಾರ್?"

"ಕೊಡ್ದಿಲ್ಲ ಅಂದ್ರೆ ಬ್ಯಾರೆ ಪೋಸ್ಟಿಲವೆ? ಎಮ್ಮೆಲ್ಸಿ ಮಾಡಿ ಅಂತಿವಿ. ಛೇರ್ಮನ್ ಮಾಡಿ ಅಂತಿವಿ."

"ಕೆ.ಎಂ.ಎಫ್ ಛೇರ್ಮನ್‌ಗಿರಿನಾ ಸಾರ್?"

"ಅದೊಂದೆ ಕಂಡ್ರಿ ಚನ್ನಾಗಿರದು. ಇಲಾತಿ ಹಸ ಯಂಗೆ ಹಾಲಿಂದಮೋ ಅಂಗೆ ಅದೆ. ಅದುವೆ ಹೋಗ್ಲಿ ಅದ್ನಾರ ಕೊಡ್ಲಿ."

"ನಿಜ ಸಾರ್, ಭವಾನಕ್ಕ ಕೆ.ಎಂ.ಎಫ್ ಛೇರಮ್ಯಾಲೆ ಕುಂತಿದ್ರೆ ನಿಜವಾಗ್ಲೂ ಡೈರಿಗೆ ಒಂದು ಕಳೆ ಬರುತ್ತೆ ಸಾರ್. ಅಂಗೆ ಹೆಣ್ಣುಮಗಳೊಬ್ಬಳು ಕೆ.ಎಂ.ಎಫ್. ಛೇರ್ ಮೇಲೆ ಕುತಗಬೇಕು ಸಾರ್. ಅದೇ ನಮ್ಮಾಸೆ."

"ನನ್ನಾಸೆನೂ ಅದೆ ಕಂಡ್ರಿ. ಆದ್ರೆ ಭವಾನಿ ಕೇಳ್ತಾಯಿಲ್ಲ, ಅವ್ಳು ಎಮ್ಮೆಲ್ಲೆ ಆಗಿ ಅನಿತುನ ಮೇಲೆ ಸೇಡು ತೀರಿಸಿಕೊಬೇಕಂತೆ."

"ಅವ್ರುರ ಸೇಡು ಇರ್ಲಿ, ನೀವು ಮುಖ್ಯಮಂತ್ರಿಯಾಗಿ ಕುಮಾರನ ಮ್ಯಾಲೆ ಸೇಡು ತಿರಿಸಿಗಳದ್ಯಾವಾಗ ಸಾರ್?"

"ಚುನಾವಣೆ ಆಗಿ ಜೆಡಿಎಸ್ ಮೆಜಾರಿಟಿ ಬರ್ಲಿ. ನಮ್ಮ ತಂದೆ ಅದ್ಯಂಗೆ ನನ್ನನ್ನು ಮುಖ್ಯಮಂತ್ರಿ ಮಾಡದಿಲ್ಲವೊ ನೋಡ್ತಿನಿ."

"ಥೂತ್ತೇರಿ!!!"

ಪೂಜಾ ಗಾಂಧಿ ಮದುವೆ

ಭಾವಿ ಗಂಡ ಮಹಾ ಪ್ರಚಂಡ!

ಯಾವುದೇ ವಿವಾದ, ಕಿತಾಪತಿ, ರಗಳೆಗಳಿಗೆ ಸಿಲುಕದೆ ತಾನಾಯಿತು ತನ್ನ ನಟನೆಯಾಯಿತು ಎಂಬಂತಿದ್ದವಳು. ಮೂಲತಃ ಕರ್ನಾಟಕದವಳಲ್ಲ, ಮನೆ ಭಾಷೆಯೂ ಕನ್ನಡವಲ್ಲ. ಮುಂಬಯಿಂದ ನಟನೆಗೆಂದೇ ಬೆಂಗಳೂರಿಗೆ ಬಂದವಳು. ಇನ್ನೇನು ಬೇಡಿಕೆ ಕ್ಷೀಣಿಸುತ್ತಿದ್ದಂತೆಯೇ ವಾಪಸ್ಸು ದೆಹಲಿಗೋ-ಮುಂಬಯಿಗೋ ಗಂಟುಮೂಟೆ ಕಟ್ಟುತ್ತಾಳೆನ್ನುವಾಗಲೇ ತಾನು ಜೆಡಿಎಸ್ ಸೇರುತ್ತೇನೆಂದರೆ ಹೇಗಾಗಬೇಡ? ಅದರ ಬೆನ್ನಲ್ಲೇ ತಾನು ಒಕ್ಕಲಿಗರ ಹುಡುಗ ಆನಂದ್‌ಗೌಡ ಎಂಬ ಉದ್ಯಮಿಯನ್ನು ಮದುವೆಯಾಗುತ್ತೇನೆಂದು ಘೋಷಿಸಿದರೆ ಏನೆನಿಸಬೇಡ?



ಬಿಸವಳಿದ ನಿರ್ಮಾಪಕರ ಭಾಗ್ಯದೇವತೆ ಪೂಜಾ ಗಾಂಧಿ ಇನ್ನೇನು ಮದುವೆಯಾಗಿ ಹೊಂಟೋಯ್ತಾಳೆ ಎಂದು ದುಃಖಿತಪ್ತ ಅಭಿಮಾನಿಗಳೆಲ್ಲ ಆಕೆಯ ಮನೆಯೆದುರು ಜಮಾಯಿಸಿದ್ದಾರಂತೆ!

ಹೀಗೆ ಜಮಾಯಿಸಿದ ನೃತದೃಷ್ಟರ ಪೈಕಿ ಕೆಲವರು ಎದೆಬಡಿದಕೊಂಡರಂತೆ. ಹಾಗೆಂದು ಆತುರಗೇಡಿ ಟಿವಿ ಚಾನಲ್ಲೊಂದು ಒಂದೇಸಮನೇ 'ಬ್ರೇಕಿಂಗ್ ನ್ಯೂಸ್' ಬಿತ್ತರಿಸಿದ್ದೇ ತಡ ಗಾಬರಿ ಬಿದ್ದ ನಟಿ ಪೂಜಾ ಗಾಂಧಿ ಆನಂದ್ ಉರ್ಫ್ ಆನಂದ್ ಗೌಡ



ಜೆಡಿಎಸ್ ಸೇರ್ಪಡೆಯಲ್ಲಿ ಪೂಜಾ

ಎಂಬ ತನ್ನ ಭಾವೀ ಪತಿಯ ಸಮೇತ ಮನೆ ಮುಂದೆ ಇಟ್ಟಾಡುತ್ತಿದ್ದ ಟೀವಿ ಕ್ಯಾಮೆರಾಗಳೆದುರು ಪ್ರತ್ಯಕ್ಷಳಾಗಿದ್ದೆ From today we are officially engaged..! ಎಂದು ಅಧಿಕೃತವಾಗಿ ಘೋಷಿಸಿದ್ದಾಳೆ.

ನೆರೆದ ಟಿವಿ ವರದಿಗಾರರು ಮತ್ತು ಫೋಟೋಗ್ರಾಫರುಗಳನ್ನು ಕಂಡೇ ರೋಮಾಂಚಿತಳಾದ ಪೂಜಾ ಗಾಂಧಿ ಪಕ್ಕಾ ಬಾಲಿವುಡ್ ಶೈಲಿಯಲ್ಲಿ ಆನಂದ್‌ರಂಥವರು ಸಿಕ್ಕಿದ್ದು ತನ್ನ ಪೂರ್ವಜನ್ಮದ ಪುಣ್ಯವೆಂದೂ, ಇಂಥಾ ಜಂಟಲ್‌ಮಾನ್ ಸಿಗಲು ತಾನು ಲಕ್ಕೀ... ಎಂದೂ ಡೈಲಾಗ್ ಹೊಡೆದಿದ್ದಾಳೆ. ಇನ್ನು ಪಕ್ಕ ನಿಂತು ಪೋಜು ಕೊಡುತ್ತಿದ್ದ ಖ್ಯಾತ(!) ಉದ್ಯಮಿ ಕಂ ಸಿನಿಮಾ ಫೈನಾನ್ಸಿಯರ್ ಆನಂದ್‌ಗೌಡ ಕಾಟಾಚಾರಕ್ಕಾದರೂ ಅಣಿಮುತ್ತೊಂದನ್ನು ಉದುರಿಸಬೇಕಲ್ಲವೆ?

'ಹೌದು; ಪೂಜಾ is a good human being. Kind hearted, ಒಳ್ಳೇ ನಟಿ. ಈಕೆ ಸಿಕ್ಕಿದ್ದೂ ನನ್ನ ಪುಣ್ಯ....!' ಎಂದುಬಿಟ್ಟರು ಆನಂದ್ ಅಲಿಯಾಸ್ ಆನಂದ್‌ಗೌಡರು!

Yes, ಕನ್ನಡದ ಯಶಸ್ವಿ ನಟಿ ಪೂಜಾ ಗಾಂಧಿ ಖ್ಯಾತ ಉದ್ಯಮಿ ಆನಂದ್ ಗೌಡರನ್ನು ವರಿಸುವ ಮೂಲಕ ದಾಂಪತ್ಯಕ್ಕೆ ಕಾಲಿಡುತ್ತಿದ್ದಾಳೆ. ಇದು ಕನ್ನಡಿಗರ ಸಂತೋಷಕ್ಕೆ ಕಾರಣವಾದ ಮೊದಲ ಸುದ್ದಿಯಾದರೆ, ಇದಕ್ಕಿಂತಲೂ ಖುಷಿಯ ಸುದ್ದಿಯೆಂದರೆ ತನ್ಮೂಲಕ ಪೂಜಾ ಕನ್ನಡತಿಯಾಗುತ್ತಿದ್ದಾಳೆ ಮತ್ತು ಮುಂಬಯಿಗೋ-ದೆಹಲಿಗೋ ಹೋಗಿ ನೆಲೆಸುವ ತನ್ನ ದೂರಾಲೋಚನೆಯನ್ನು ಕೈಬಿಟ್ಟಿದ್ದಾಳೆ.

ನಟಿಯೊಬ್ಬಳ ಬದುಕೆಂದರೆ ಜನಸಾಮಾನ್ಯರ ಕುತೂಹಲ ಹಾಳಾಗಲಿ ಬರಗೆಟ್ಟ ಟಿವಿ ಚಾನಲ್ಲುಗಳೇ ಮುಗಿಬಿದ್ದು ಕ್ಯಾಮೆರಾ ಕಾಳಗಕ್ಕಿಳಿಯುತ್ತವೆ. ಅಂಥಾದ್ದರಲ್ಲಿ ಏಕಾಏಕಿ ಗಪ್‌ಚುಪ್ಪಾಗಿ ಯಾರೋ ಅನಾಮಧೇಯ ಉದ್ಯಮಿಯೊಬ್ಬನನ್ನು ಕೈಹಿಡಿಯ ಹೊರಟ ಪೂಜಾ ಗಾಂಧಿಯ ಕ್ವಚಿತ್ ವರ್ತನೆ ಎಂಥವರಿಗಾದರೂ ಪ್ರಶ್ನಾರ್ಥಕವೆ. ಇಲ್ಲಿಗೆ ವರ್ಷದ ಹಿಂದೆ ಏಕಾಏಕಿ ಪೂಜಾ ತಾನು ಜೆಡಿಎಸ್‌ಗೆ ಸೇರ್ಪಡೆಯಾಗುತ್ತೇನೆಂದು ಘೋಷಿಸಿದಾಗಲೇ ಜನರಿಗೆ ಕುಮಾರಣ್ಣನತ್ತ ಪ್ರಶ್ನಾರ್ಥಕವಾಗಿ ನೋಡಿದ್ದರು. ಕೆಲವರು ಇದು ಜೆಡಿಎಸ್ ಎಮ್ಮೆಲ್ಸಿ ಮುಂಗಾರು ಮಳೆ ಕೃಷ್ಣಪ್ಪನದೇ ಕೈಚಳಕವೆಂದರು. ಇನ್ನೂ ಕೆಲವರು ರಮ್ಯಾ ಕಾಂಗ್ರೆಸ್ಸಿಗೆ ಸೇರ್ಪಡೆಯಾಗಿದ್ದಕ್ಕೆ ಪೈಪೋಟಿಯಾಗೇ ಪೂಜಾ ಜೆಡಿಎಸ್‌ಗೆ ಕಾಲಿಟ್ಟಿದ್ದಾಳೆ ಎಂದರು.

ಆದರೆ ಇದೆಲ್ಲದರ ಹಿಂದಿದ್ದದ್ದು ಯಾರೋ ಆನಂದಗೌಡನೆಂಬ ಅನಾಮಧೇಯ ಫೈನಾನ್ಸಿಯರ್ ಮತ್ತು ಆತನ ಹೃದಯದೊಳಗೆ ಪೂಜಾ ಕಾಲಿಟ್ಟಿದ್ದರ ಫಲವೇ ಆಕೆಯ ಜೆಡಿಎಸ್ ಪ್ರವೇಶದ ಮರ್ಮವೆಂಬುದು ಈಗ ಬಯಲಾಗುತ್ತಿದೆ.

ಬೇರೆಲ್ಲ ನಟಿಯರಂತೆ ಪೂಜಾ ಹೆಸರಾಂತ ಹೀರೋನನ್ನೋ, ಪ್ರಖ್ಯಾತ ರಾಜಕಾರಣಿಯನ್ನೋ ವರ್ಷಗಟ್ಟಲೆ ಒಡನಾಟ ನಡೆಸಿ ಮದುವೆ ಘೋಷಿಸಿದ್ದರೆ ಅದು ಅನಿರೀಕ್ಷಿತವೆನಿಸುತ್ತಿರಲಿಲ್ಲ. ಪೂಜಾ ಕನ್ನಡದ ವಿಭಿನ್ನ ಹೀರೋಯಿನ್. ರಮ್ಯಾ ರಕ್ಷಿತಾ, ರಾಧಿಕಾ, ರಾಧಿಕಾ ಪಂಡಿತ್, ರಾಗಿಣಿ ಇತ್ಯಾದಿ ಈ ಪೀಳಿಗೆಯ ನಟಿಯರ ಸಾಲಿನಲ್ಲಿ ಯಾವುದೇ ವಿವಾದ, ಕಿತಾಪತಿ, ರಗಳೆಗಳಿಗೆ ಸಿಲುಕದೆ ತಾನಾಯಿತು ತನ್ನ ನಟನೆಯಾಯಿತು ಎಂಬಂತಿದ್ದವಳು. ಮೂಲತಃ ಕರ್ನಾಟಕದವಳಲ್ಲ, ಮನೆ ಭಾಷೆಯೂ ಕನ್ನಡವಲ್ಲ. ಮುಂಬಯಿಂದ ನಟನೆಗೆಂದೇ ಬೆಂಗಳೂರಿಗೆ ಬಂದವಳು. ಇನ್ನೇನು ಬೇಡಿಕೆ ಕ್ಷೀಣಿಸುತ್ತಿದ್ದಂತೆಯೇ ವಾಪಸ್ಸು ದೆಹಲಿಗೋ-ಮುಂಬಯಿಗೋ ಗಂಟುಮೂಟೆ ಕಟ್ಟುತ್ತಾಳೆನ್ನುವಾಗಲೇ ತಾನು ಜೆಡಿಎಸ್ ಸೇರುತ್ತೇನೆಂದರೆ ಹೇಗಾಗಬೇಡ? ಅದರ ಬೆನ್ನಲ್ಲೇ ತಾನು ಒಕ್ಕಲಿಗರ ಹುಡುಗ ಆನಂದ್‌ಗೌಡ ಎಂಬ ಉದ್ಯಮಿಯನ್ನು ಮದುವೆಯಾಗುತ್ತೇನೆಂದು ಘೋಷಿಸಿದರೆ ಏನೆನಿಸಬೇಡ?

ಅಷ್ಟಕ್ಕೂ ಈ ಆನಂದ್ ಅಲಿಯಾಸ್ ರಮಾನಂದ್ ಉರ್ಫ್ ಆನಂದ್‌ಗೌಡ ಯಾರು? ಈತ ನಿಜಕ್ಕೂ ದೇವೇಗೌಡರ ಸಮೀಪದ ಸಂಬಂಧಿಯೇ? ಅಥವಾ ಕಾಂಗ್ರೆಸ್ ನಾಯಕ ಡೀಕೆಗೆ ಈತ ದೂರದ ನೆಂಟನೆ? ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರ ಪತ್ನಿ ಪ್ರೇಮಾಕೃಷ್ಣರಿಗೆ ಶಿವಮೊಗ್ಗ ತೀರ್ಥಹಳ್ಳಿ ಮೂಲದ ಈ ಮಲೆನಾಡು ಗೌಡನೂ ದೂರದ ಸಂಬಂಧಿಯೆಂಬುದು ನಿಜವೆ? ಒಂದಾನೊಂದು ಕಾಲಕೆ ವರನಟ ರಾಜ್‌ಕುಮಾರ್ ಕುಟುಂಬಕ್ಕೆ ಈತನ ತಂದೆ ಕೆ.ಸಿ. ಅಶೋಕ್ ಆತ್ಮೀಯರಾಗಿದ್ದರೆಂಬ ಸಂಗತಿ ಎಷ್ಟು ಸತ್ಯ? ಈತ ನಿಜಕ್ಕೂ ಹಿಂದಿ ಸಿನಿಮಾಗಳಿಗೆ ಫೈನಾನ್ಸ್ ಮಾಡುವಷ್ಟು ಅನುಕೂಲಸ್ಥನೆ? ಗಾಂಧಿನಗರದ ಅನೇಕ ಕನ್ನಡ ಚಿತ್ರಗಳಿಗೆ ಈತ ಸಾಲಕೊಟ್ಟಿದ್ದಾನೆಂಬುದು ಖರೆಯೆ? ಈತ ಅದ್ಹೇಗೆ ಪೂಜಾ ಗಾಂಧಿಗೆ ಗಂಟುಬಿದ್ದ? ನಿರ್ಮಾಪಕ ಕೆ. ಮಂಜುವೇ ಈತನನ್ನು ಪೂಜಾ ಗಾಂಧಿಗೆ ತಗುಲಿ ಹಾಕಿದರೆಂಬುದಕ್ಕೆ ಏನು ಕಾರಣ? ಅಷ್ಟಕ್ಕೂ ಈತ ಓರ್ವ ಎನ್ನಾರೈ ಗೌಡನೆ? ಈತನಿಗಿದು ಎಷ್ಟನೇ ಮದುವೆ? ಅಂದಹಾಗೆ ಮೇರುನಟಿ ಬಿ. ಸರೋಜಾದೇವಿಯವರ ಪಾಳಯದಲ್ಲಿ ಇಂಥದೊಂದು ಹೆಸರಿಗೆ ಯಾವ ಹಿನ್ನೆಲೆಯಿದೆ?

ಇಂಥ ಅಸಂಖ್ಯಾತ, ಅಸಂಬದ್ಧ ಪ್ರಶ್ನಾವಳಿಗಳ ಜೊತೆಜೊತೆಗೆ ಪೂಜಾ ಗಾಂಧಿಯ ಭಾವೀಗಂಡನ ನಾಮಾವಳಿ ಕೇಳಿಬರುತ್ತಿದೆಯೆಂದರೆ ಹಕೀಕತ್ತು ಬೇರೆಯೇನೋ ಇರಲೇಬೇಕು. ಈ ಬಗ್ಗೆ ತಲೆ ಕೆಡಿಸಿಕೊಂಡ ಗಾಂಧಿನಗರದ ಮಂದಿಗೆ ಆನಂದಗೌಡ ಕೆದಕಿದಷ್ಟೂ ನಿಗೂಢವಾಗುತ್ತಿದ್ದಾನೆಯೇ ಹೊರತು ತಲೆಬುಡ ಗೊತ್ತಾಗುತ್ತಿಲ್ಲ. ಕೆಲವರ ಬಳಿ ತಾನು ಶಿವಮೊಗ್ಗದ ತೀರ್ಥಹಳ್ಳಿಯವನೆಂದೂ ರಾಷ್ಟ್ರಕವಿ ಕುವೆಂಪುಗೆ ತಾನು ಸಮೀಪದ ಸಂಬಂಧಿಯೆಂದೂ ಈತ ಹೇಳಿಕೊಂಡಿದ್ದಾನೆ. ಇನ್ನೂ ಕೆಲವರಿಗೆ ತಾನು ಮಾಜಿ ವಿದೇಶಾಂಗ ಸಚಿವ ಎಸ್.ಎಂ. ಕೃಷ್ಣರ ಧರ್ಮಪತ್ನಿ ಪ್ರೇಮಾ ಕೃಷ್ಣ ಸಂಬಂಧಿಯೆಂದೂ, ಕೃಷ್ಣರ ಅಳಿಯ ಕಾಫಿ ಡೇ ಸಿದ್ಧಾರ್ಥನ ಜೊತೆ ಸೇರಿ ರಿಯಲ್ ಎಸ್ಟೇಟ್ ಬಿಜಿನೆಸ್ ಮಾಡ್ತೀನಿ ಎಂದೂ ಹೇಳಿಕೊಂಡಿದ್ದಾನೆ.

ಆದರೆ ಜೆಡಿಎಸ್‌ನ ಕೆಲ ಗೌಡರು ಹೇಳುವುದೇ ಬೇರೆ. ತಾನು ದೇವೇಗೌಡರ ಪತ್ನಿ ಚನ್ನಮ್ಮನವರ

ನಾಳಿನ ರಾಜಕಾರಣಕ್ಕೆ ನಿಶ್ಚಿತಾರ್ಥವೇ ಸೋಪಾನ?



ಪೂಜಾ ಘೋಷಿಸಿದ್ದು ಅನೇಕರಿಗೆ ಅಚ್ಚರಿಯೆನಿಸಿತ್ತು. ಆದರೆ ಪೂಜಾಳ ಲೆಕ್ಕಾಚಾರವೇ ಬೇರೆಯಿತ್ತು. ಚಿತ್ರರಂಗಕ್ಕೆ ಬಂದು ಹಲವಾರು ವರ್ಷಗಳಾದವು. ಬಹುತೇಕ ಪ್ರಮುಖ ನಟರೊಂದಿಗೆ ನಟಿಸಿಯೂ ಆಯಿತು. ಈಗ ಉತ್ತಮ ಆಫರ್‌ಗಳು ಬರುತ್ತಿಲ್ಲ, ಆಕೆಯ ಬದುಕು ಕವಲು ದಾರಿಯಲ್ಲಿತ್ತು.

ಛಲಗಾತಿ ಪೂಜಾ ಅಷ್ಟು ಸುಲಭಕ್ಕೆ ಸೋಲೊಪ್ಪುವ ಹೆಣ್ಣಲ್ಲ. ಶುರುವಿನಲ್ಲಿ ಕತ್ರಿಗುಪ್ಪೆಯಲ್ಲಿದ್ದ ಬಾಡಿಗೆ ಮನೆ ತೊರೆದು ನಟ ಉಪೇಂದ್ರನ ಮನೆಯೆದುರಿನ ರೋಷನ್ ಅಪಾರ್ಟ್‌ಮೆಂಟ್‌ನಲ್ಲೊಂದು ಐಷಾರಾಮಿ ಫ್ಲಾಟ್ ಖರೀದಿಸಿದ್ದೇ ಆಕೆ ಬೆಂಗಳೂರಿನಲ್ಲಿ ನೆಲೆ ನಿಲ್ಲುತ್ತಾಳೆಂದು ನಿರ್ಧರಿಸಿದ್ದರ ಸೂಚನೆಯಾಗಿತ್ತು. ಜನ ತನ್ನನ್ನು ಗುರುತಿಸುವುದು ಕರ್ನಾಟಕದಲ್ಲಿ. ಏನೇ ಸಾಧಿಸಿದರೂ ಇಲ್ಲೇ ಸಾಧಿಸಬೇಕು. ಇನ್ನು ಮದುವೆಯ ವಿಷಯಕ್ಕೆ ಬಂದರೆ ವ್ಯರ್ಥ ತಾಪತ್ರಯವೇಕೆಂದು ಆಯ್ದುಕೊಂಡಿದ್ದು ಆನಂದ್‌ಗೌಡನನ್ನು. ಆ ಹೊತ್ತಿಗಾಗಲೇ ರಮ್ಯಾ ಕಾಂಗ್ರೆಸ್ಸಿಗೆ ಕಾಲಿಟ್ಟಾಗಿತ್ತು. ಹೇಗೂ ಜೆಡಿಎಸ್‌ಗೆ ಮುಂಬರುವ ಚುನಾವಣೆಯಲ್ಲಿ ಅಧಿಕಾರ ಗ್ಯಾರಂಟಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾದರೂ ಆಗಬಹುದು, ಆಗ ತನ್ನನ್ನು ಎಮ್ಮೆಲ್ಸಿ ಮಾಡುವುದು ಕಷ್ಟವೇನಲ್ಲ ಅಥವಾ ಬೆಂಗಳೂರಿನ ಯಾವುದಾದರೂ ಕ್ಷೇತ್ರಕ್ಕೆ ನಿಲ್ಲಿಸಲೂಬಹುದು. ಗೆದ್ದರೆ ಬಂಪರ್ ಸೋತರೂ ಪಾಪ್ಯುಲರ್!


ಈ ಎಲ್ಲಾ ಲೆಕ್ಕ ಹಾಕಿಯೇ ಕಳೆದೊಂದು ವರ್ಷದಿಂದ ಬನ್ನೇರುಘಟ್ಟ ರಸ್ತೆಯಲ್ಲೊಂದು ಅದ್ದೂರಿ ಬಂಗಲೆ ಕಟ್ಟಿಸಲಾರಂಭಿಸಿದ ಪೂಜಾಳ ಪೂರ್ವ ತಯಾರಿ ಒಂದು ಭಾಗವೇ ಆನಂದ್‌ಗೌಡನೊಂದಿಗಿನ ನಿಶ್ಚಿತಾರ್ಥ. ಪೂಜಾಳ ಮಹತ್ವಾಕಾಂಕ್ಷೆಯನ್ನು ಅರಿತೇ ಆನಂದ್‌ಗೌಡ ಕೈಜೋಡಿಸಿದ್ದಾನೆ, ಆತನ ಪಾಲಿಗೆ ಬಂದದ್ದೆಲ್ಲವೂ ಲಾಭವೇ ತಾನೆ?

ಪ್ರತಿಯೊಂದನ್ನೂ ಅಳೆದು ತೂಗಿ ಲೆಕ್ಕ ಹಾಕಿಯೇ ಹೆಜ್ಜೆಯಿಡುವ ಜಾಯಮಾನದ ಪೂಜಾ ಇದ್ದಕ್ಕಿದ್ದಂತೆ ಜೆಡಿಎಸ್ ಸೇರಿದ್ದಾಗಲಿ, ಈಗ ಅನಂದ್‌ಗೌಡನೊಂದಿಗೆ ನಿಶ್ಚಿತಾರ್ಥಕ್ಕಿಳಿದಿದ್ದಾಗಲಿ ಯಾರಿಗೂ ಅಚ್ಚರಿಯೆನಿಸುತ್ತಿಲ್ಲ, ದುಡುಕಿನ ನಿರ್ಧಾರವೂ ಅದಲ್ಲ.

ಇತ್ತೀಚೆಗೆ ತೆರೆಕಂಡ ದಂಡುಪಾಳ್ಯದ ಎರಡನೇ ಭಾಗವನ್ನು ಅದರ ನಿರ್ದೇಶಕರು ಘೋಷಿಸಿದ್ದೇ ತಡ ಯಾವುದೇ ಕಾರಣಕ್ಕೂ ತಾನು ಅದರಲ್ಲಿ ನಟಿಸೋಲ್ಲ ಎಂದು








...ಮಗನೆಂದೂ ನಿನ್ನೆಮೊನ್ನೆಯ ತನಕ ...ಕದಲ್ಲಿದ್ದು ಇತ್ತೀಚೆಗಷ್ಟೇ ಬೆಂಗಳೂರಿಗೆ ...ನೆಂದೂ ಹೇಳಿಕೊಂಡಿದ್ದಾನಂತೆ. ಇನ್ನು ಕೆಲವರ ...ಾನು ಕಾಂಗ್ರೆಸ್ ದೈತ್ಯ ಡೀಕೆಯ ಆಕ್ಕನ ...ಂದೂ, ರಿಯಲ್ ಎಸ್ಟೇಟ್ ...ಕೊಂಡಿದ್ದೇನೆಂದೂ ಪರಿಚಯಿಸಿಕೊಂಡಿದ್ದಾನಂತೆ! ...ಮ ಆನಂದ್‌ಗೌಡನ ಬಗ್ಗೆ ...ಹೊರದುದ್ದಕ್ಕೂ ಕೇಳಿಬರುವ ಮಾತುಗಳು. ...ರ್ಫ್ ಆನಂದ್ ಅನೇಕರಿಗೆ ತನ್ನ ಬಗ್ಗೆ ಕಾಲ್ಪನಿಕ ...ಕೊಟ್ಟಿರಬೇಕು! ಗಾಂಧಿನಗರ, ...ಮಹಾರಥರಾದ ಮುನಿರತ್ನ, ರಾಮು, ...ನ್, ಕೆ. ಮಂಜು, ಕೆಸಿಎನ್ ಕುಮಾರ್, ...ಜ್ ಬಾಲರಾಜ್ ಇತ್ಯಾದಿಗಳ ಪೈಕಿ ಈತನ ಬಗ್ಗೆ ...ನ್ನ ಗೊತ್ತಿರುವುದು ಕೆ. ಮಂಜುಗೆ ಮಾತ್ರ. ...ಎರಡು ವರ್ಷದ ಹಿಂದೆ ತಾನೊಂದು ಬೆಂಜ್ ಖರೀದಿಸುತ್ತಿದ್ದೇನೆಂದು, ಅದರ ಬಗ್ಗೆ ತನಗೆ ...ಬೇಕೆಂದು ಈತ ನಿರ್ಮಾಪಕ ಕೆ. ಮಂಜುಗೆ ...ಾಲು ಬಿದ್ದಿದ್ದನಂತೆ. ಮಂಜು ಹೋಗಿ ...ದರೆ ಗಿರಾಕಿ ಮಾತಿಗೆ ಮೊದಲೇ ...ಮಂತ್ರಿ, ಸಾರಿಗೆ ಮಂತ್ರಿ, ಪೊಲೀಸ್ ...ಷನರ್, ಗೃಹ ಮಂತ್ರಿ ಇತ್ಯಾದಿ ಡೈಲಾಗು ...ಯುತ್ತಿದ್ದನಂತೆ.

...ಮಾತುಮಾತಿಗೆ ಮಂತ್ರಿ, ಪೊಲೀಸರ ಹೆಸರು ...ವಾಗಲೇ ಷೋ ರೂಮಿನ ಸಿಬ್ಬಂದಿಗೆ ...ಮಾನ ಬಂತಂತೆ. ಆದು ಬ್ಯಾಂಕ್ ಸಾಲದ ಮೇಲೆ ...ಕಾರು ಖರೀದಿಸುವುದೆಂದರೆ ...ರಿಗಾದರೂ ಗುಮಾನಿ ಕಾಡದಿರುತ್ತಾ? ಮುಂದೆ ...ಆನಂದ್ ಗೌಡ ತಾನು ರಿಯಲ್ ಎಸ್ಟೇಟ್ ...ಯೆಂದು ಕೆಲವರೆದುರು ಪೋಜು ಕೊಟ್ಟರೆ ...ಕೆಲವರಿಗೆ ತಾನೊಬ್ಬ ಎನ್ನಾರೈ ಎಂದೂ, ...ನ್ನೆ ತನಕ ತಾನು ಅಮೆರಿಕದಲ್ಲಿದ್ದೇನೆಂದೂ ...ಕೊಂಡಿದ್ದ. ಇನ್ನೂ ಕೆಲವರ ಬಳಿ ತಾನು ಬಿಲ್ಡರ್ ...ಅದೊಂಥರ ವಿಜಿಟಿಂಗ್ ಕಾರ್ಡು ಕೊಟ್ಟಿದ್ದ. ...ಚಿಕತ್ತೇನೆಂದರೆ ಈತನಿಗೂ ಮಾಜಿ ಪ್ರಧಾನಿ ...ಗೌಡರಿಗೂ, ಎಸ್.ಎಂ. ಕೃಷ್ಣ, ಡೀಕೆ, ಕುವೆಂಪು ...ಗೂ ಸಂಬಂಧವಿರಲಿಲ್ಲ. ಬೆಂಗಳೂರಿನಲ್ಲಿ ...ಗೆ ಗೌಡ್ರು, ಗೌಡ ಅಂತ ಅಡ್ಡ ...ಟ್ಟುಕೊಂಡು ವಸೂಲಿ, ವಂಚನೆ ಮಾಡುವುದನ್ನೇ ...ಆಂಧ್ರ ಮೂಲದ ಆಸಾಮಿಗಳು ...ಗಿಸಿಕೊಂಡಿದ್ದಾರೆ. ಐಷಾರಾಮಿ ಕಾರು, ...ಬಾ ಚಿನ್ನಾಭರಣ, ದುಬಾರಿ ...ರೆಂಟುಗಳಲ್ಲಿ ಅಡ್ಡೆ ಹಾಕುವುದು; ಕಾಂಟ್ರಾಕ್ಟ್ ...ಸುತ್ತೇನೆಂದು-ಡೀನೋಟಿಫಿಕೇಶನ್ ...ಸುಂದು ವಂಚಿಸುವ ಯಾರೋ ...ಬಾಜಿಯಿರಬೇಕೆಂದೇ ಅನೇಕರು ಲೆಕ್ಕ ...ಸ್ದರು.

ಏಕೆಂದರೆ ಓಡಾಡಲು ಬೆಂಜ್ ಕಾರು ಮತ್ತು ಕತ್ತು, ಕೈಗಳಲ್ಲಿ ಜೋತಾಡುತ್ತಿದ್ದ ಚಿನ್ನದ ಸರಪಣಿಗಳ ಹೊರತಾಗಿ ಈ ಆನಂದ್ ಅಲಿಯಾಸ್ ರಮಾನಂದ್ ಉರ್ಫ್ ಆನಂದ್‌ಗೌಡನಿಗೆ ಬೇರೆ ಯಾವುದೇ ಐಡೆಂಟಿಟಿಯಿರಲಿಲ್ಲ. ಇಂಥವನು ಏಕಾಏಕಿ ಕೊಳ್ಳೇಗಾಲದಲ್ಲಿ ನಟಿ ಪೂಜಾ ಗಾಂಧಿ ಜೊತೆ ಪ್ರತ್ಯಕ್ಷನಾಗಿದ್ದೇ ಅಲ್ಲಿನ ಮಂತ್ರವಾದಿಯೊಬ್ಬನ ಮನೆಯಲ್ಲಿ, ಅದೆಂಥದೋ ವಾಮಾಚಾರ ಹೋಮ-ಹವನ ಶುರುಹಚ್ಚಿಕೊಳ್ಳುತ್ತಾನೆಂದರೆ ಯಾರಿಗೆ ತಾನೇ ಅಚ್ಚರಿಯೆನಿಸಲ್ಲ?

ಅದ್ಯಾರು ಈತನನ್ನು ನಟಿ ಪೂಜಾ ಗಾಂಧಿಗೆ ಅಂಟು ಹಾಕಿದ್ದರೋ ಗೊತ್ತಿಲ್ಲ, ಅದ್ಹೇಗೆ ಪೂಜಾ ಗಾಂಧಿ ಈತನ ವಶವಾದಳೋ ಬಲ್ಲವರಿಲ್ಲ.



ಕೆಲದಿನಗಳ ಹಿಂದೆ ಆಕೆ ಇದ್ದಕ್ಕಿದ್ದಂತೆ ಜೆಡಿಎಸ್ ಹೆಡ್ಡಾಫೀಸಿನಲ್ಲಿ ಪ್ರತ್ಯಕ್ಷಳಾದಾಗ ಆನಂದ್‌ಗೌಡ ಆಕೆಯ ಬೆನ್ನಲ್ಲೇ ಇದ್ದ. ಅನೇಕರು ಆತನನ್ನು ಯಾರೋ ಬಾಡಿಗಾರ್ಡ್ ಅಥವಾ ಬೌನ್ಸರ್ ಇರಬೇಕೆಂದೇ ಭಾವಿಸಿದ್ದರು. ನೋಡುವುದಕ್ಕೂ ಹಾಗೇ ಇದ್ದ ಆನಂದ್‌ಗೌಡ ಕಟ್ಟುಮಸ್ತಾಗಿ, ಜಿಮ್ಮಿಗೆ ಹೋಗಿ ಬಾಡಿ ಬೆಳೆಸಿದವನಂತೆ. ಮುಂಬಯಿ ಮೂಲದ ಬಾಡಿಗಾರ್ಡ್ ಥರವೇ ಮೀಸೆ ಬೋಳಿಸಿಕೊಂಡಿದ್ದ. ಅದೂ ದಂಡುಪಾಳ್ಯ ಚಿತ್ರದ ಶೂಟಿಂಗ್‌ನಲ್ಲಿ ಅಚಾನಕ್ಕಾಗಿ ಎಂಟ್ರಿ ಕೊಟ್ಟಿದ್ದ.

ಈ ಮಧ್ಯೆ ಪೂಜಾಳ ತಂದೆ ಪವನ್ ಗಾಂಧಿ ಇದ್ದಕ್ಕಿದ್ದಂತೆ ದೆಹಲಿಯಿಂದ ಬೆಂಗಳೂರಿಗೆ ವಾಸ್ತವ್ಯ ಬದಲಾಯಿಸಿದ್ದು ಮತ್ತು ಪೂಜಾಳ ತಾಯಿ ಜ್ಯೋತಿ ಗಾಂಧಿ ಹೊತ್ತಲ್ಲದ ಹೊತ್ತಲ್ಲೂ ಮಗಳಿಗೆ ಬೆಂಗಾವಲಾಗಿ ಬರುತ್ತಿದ್ದದ್ದು ಇನ್ನಷ್ಟು ಕಾರಣವಾಯಿತು. ಇನ್ನೂ ವಿಚಿತ್ರವೆಂಬಂತೆ ಇಲ್ಲಿಗೆ ಮೂರು ತಿಂಗಳ ಹಿಂದಷ್ಟೇ ಏಕಾಏಕಿ ಪೊಲೀಸ್ ಕಮೀಷನರ್ ಕಚೇರಿಯಲ್ಲಿ ಪ್ರತ್ಯಕ್ಷರಾದ ಪವನ್ ಗಾಂಧಿ ತನಗೆ ಪ್ರಾಣಾಪಾಯವಿದೆಯೆಂದೂ ರಕ್ಷಣೆಗೆಂದು ರಿವಾಲ್ವರ್ ಲೈಸೆನ್ಸ್‌ಗೆ ಅರ್ಜಿ ಹಾಕಿದ್ದೇನೆಂದೂ ಹೇಳಿಕೊಂಡರು. ಇದಕ್ಕೂ ಮುನ್ನ ಅದ್ಯಾರೋ ಡಾ. ಕಿರಣ್ ಎ ಎಂಬಾತ ತಾನೇ ಪೂಜಾ ಗಾಂಧಿಯ ಖಾಸಾ ಗೆಳೆಯನೆಂದೂ ಆಕೆ ತನ್ನ ಕಾರನ್ನು ಕಿತ್ತುಕೊಂಡಿದ್ದಾಳೆಂದೂ ಪತ್ರಿಕಾಗೋಷ್ಠಿ ಕರೆದು ಬೊಬ್ಬೆಯಿಟ್ಟ.

ಯಾರು ಈ ಡಾ. ಕಿರಣ್ ಎಂದು ಕೆದಕಿದ ಸಿನಿಮಾ ಪತ್ರಕರ್ತರಿಗೆ ಗೊತ್ತಾಗಿದ್ದೇನೆಂದರೆ; ಪೂಜಾಳ ಬೆನ್ನಿಗೆ ಬೇತಾಳನಂತೆ ಬಿದ್ದಿದ್ದ ಡಾ. ಕಿರಣ್ ಉರ್ಫ್ ಕಿರಣ್ ಗೌಡ ಕೂಡ ಜಾತಿಯಲ್ಲಿ ಒಕ್ಕಲಿಗ ಮತ್ತು ಮುಂಗಾರು ಮಳೆ ಕೃಷ್ಣಪ್ಪನ ಸೋದರಳಿಯ. ಪೂಜಾಳನ್ನು ಮುಂಬಯಿಂದ ಕರೆತಂದು, ಮುಂಗಾರು ಮಳೆಯ ಮೂಲಕ ಕನ್ನಡಚಿತ್ರರಂಗಕ್ಕೆ ಪರಿಚಯಿಸಿದ್ದು ಕೂಡ ಜಾತಿಯಲ್ಲಿ ಒಕ್ಕಲಿಗರಾದ ಜೆಡಿಎಸ್‌ನ ಮುಂಗಾರು ಮಳೆ ಕೃಷ್ಣಪ್ಪ, ಈಗ ನೋಡಿದರೆ ಮತ್ತೆ ಅದೇ ಜೆಡಿಎಸ್ ಮೂಲದ, ಜಾತಿಯಲ್ಲಿ ಒಕ್ಕಲಿಗನಾದ ಆನಂದ್‌ಗೌಡ!

ಬಹುಶಃ ಡಾ. ಕಿರಣ್ ಪತ್ರಿಕಾಗೋಷ್ಠಿ ಕರೆದು ಪೂಜಾ ವಿರುದ್ಧ ವಾಚಾಮಗೋಚರ ಕಿಡಿಕಾರಿದ್ದರ ಪರಿಣಾಮವಾಗೇ ಆಕೆಯ ತಂದೆ ಬೆಂಗಳೂರಿಗೆ ಬಂದು ಮಗಳ ರಕ್ಷಣೆಗೆ ನಿಂತಿದ್ದಾರೆಂದೂ, ಅದೇ ಕಾರಣಕ್ಕೆ ರಿವಾಲ್ವರ್ ಲೈಸೆನ್ಸ್ ಪಡೆದುಕೊಂಡರೆಂದೂ ಮತ್ತು ಆಕೆಯ ಜೊತೆ ಎಲ್ಲೆಂದರಲ್ಲಿ ಸುತ್ತಾಡುವ ಆಜಾನುಬಾಹು ಈ ಯುವಕನೇ ಆಕೆಯ ಬಾಡಿಗಾರ್ಡೆಂದೂ ಯಾರೆಲ್ಲ ಲೆಕ್ಕ ಹಾಕಿದ್ದರೋ ಅವರಿಗೀಗ ವಾಸ್ತವ ಅರಿವಾಗಿದೆ.

ಅದೇನು ಒತ್ತಡವೋ, ತಂತ್ರವೋ, ಅನಿವಾರ್ಯತೆಯೋ ಗೊತ್ತಿಲ್ಲ, ಅಂತೂ ಪೂಜಾ ಆನಂದಗೌಡನ ಕೈಹಿಡಿಯಲು ನಿರ್ಧರಿಸಿದ್ದಾಳೆ. ಬಹುಶಃ ಆಕೆಗೇ ಗೊತ್ತಿರಲಿಕ್ಕಿಲ್ಲ, ಈ ಆನಂದ್‌ಗೌಡ ಉರ್ಫ್ ರಮಾನಂದ್ ಹೆಸರಾಂತ ಬಿಲ್ಡರ್ ಎಂಬುದು ಅರ್ಧ ಸತ್ಯ ಮಾತ್ರ. ಹೇಗೆ ದೇವೇಗೌಡರಿಗಾಗಲಿ, ಕೃಷ್ಣ-ಡೀಕೆಗಾಗಲಿ ಈತ ಸಂಬಂಧಿಯಲ್ಲವೋ, ಹಾಗೆ ಈತ ರಿಯಲ್ ಎಸ್ಟೇಟ್ ಕುಬೇರನಾಗಲಿ, ಬಿಲ್ಡರ್ ಆಗಲಿ ಅಲ್ಲ. ಜಯನಗರದ ಐದನೇ ಬ್ಲಾಕಿನ 9 ನೇ ಮುಖ್ಯರಸ್ತೆಯ 41 ನೇ ಕ್ರಾಸಿನಲ್ಲಿ ಈತನಿಗೊಂದು ಸ್ವಂತ ಮನೆಯಿದೆ ನಿಜ. ಆದರದು ಈತನ ತಾಯಿ ಹರೀಣಾಕ್ಷಿಯ ಹೆಸರಲ್ಲಿದೆ. ಬಲ್ಲವರೇ ಹೇಳುವಂತೆ ಈಕೆ ಶುದ್ಧ ಧನಪಿಶಾಚಿ!

ಆನಂದ್‌ಗೌಡನ ತಂದೆ ಒಂದಾನೊಂದು ಕಾಲಕ್ಕೆ ಮೈಸೂರು ರಸ್ತೆಯ ಬ್ಯಾಟರಾಯನಪುರದಲ್ಲೊಂದು ಹನುಮಂತಗರದಲ್ಲಿ ಮತ್ತೊಂದು ಸಿನಿಮಾ ಟೆಂಟುಗಳನ್ನು ನಡೆಸುತ್ತಿದ್ದರಂತೆ. ತಂದೆಯ ನಿಧನಾ ನಂತರ ತಾಯಿ ಅದನ್ನು ಮಾರಿದಳೆಂದೂ ಬದುಕಿದ್ದಷ್ಟೂ ದಿನ ತಂದೆ ವರನಟ ರಾಜ್ ಕುಟುಂಬಕ್ಕೆ ಆಪ್ತರಾಗಿದ್ದರೆಂದೂ ಬಲ್ಲವರು ಹೇಳುತ್ತಾರೆ. ಈತನ ತಂಗಿಯೊಬ್ಬಳು ಅಮೆರಿಕದಲ್ಲಿ ನೆಲೆಸಿ ಅಲ್ಲೇ ಅಮೆರಿಕನ್ ಓರ್ವನನ್ನು ಮದುವೆಯಾಗಿದ್ದಾಳಂತೆ. ಆಗಾಗ ತಂಗಿಯನ್ನು ನೋಡಲು ಅಮೆರಿಕಕ್ಕೇ ಹೋಗಿಬಂದು ಮಾಡುವ ಆನಂದ್‌ಗೌಡ ಅದನ್ನೇ ನೆಪಮಾಡಿಕೊಂಡು ತಾನು ಎನ್ನಾರೈ ಎಂದು ಪೋಜು ಕೊಡುತ್ತಾನೆ.

ಮಿಕ್ಕಂತೆ ಈತ ಯಾವುದೇ ಕನ್ನಡ ಚಿತ್ರಕ್ಕೂ ಫೈನಾನ್ಸ್ ಮಾಡುವುದಿರಲಿ, ಪುಡಿ ಡಾಕ್ಯುಮೆಂಟರಿಗೂ ದುಗ್ಗಾಣಿಯ ನೆರವಾಗಿಲ್ಲ. ಇನ್ನು ಹಿಂದಿ ಸಿನಿಮಾಗಳಿಗೆ ಫೈನಾನ್ಸ್ ಮಾಡುತ್ತೇನೆಂದರೆ ನಂಬುವವರ್‍ಯಾರು? ಈತನ ಕುರಿತಂತೆ ಕೇಳಿಬರುವ ಮತ್ತೊಂದು ವದಂತಿಯೆಂದರೆ ಈತನಿಗದು ಮೊದಲ ಮದುವೆಯೇನಲ್ಲ, ಬಹುಶಃ ಎರಡನೆಯದ್ದೂ ಆಗಿರಲಿಕ್ಕಿಲ್ಲ. ಇಲ್ಲಿಗೆ ಆರು ವರ್ಷದ ಹಿಂದೆ ಮೇರುನಟಿ ಬಿ. ಸರೋಜಾದೇವಿಯವರ ಸಹೋದರಿಯ ಮಗಳೊಂದಿಗೆ ಈತನ ವಿವಾಹವಾಗಿತ್ತು. ಅದೇನಾಯಿತೋ, ಹನಿಮೂನಿಗೆ ಹೋಗಿ ವಾಪಸ್ಸಾಗುವಷ್ಟರಲ್ಲೇ ಈತನ ಬಂಡವಾಳ ಬಯಲಾಗಿತ್ತು.

ಕೈಹಿಡಿದ ಯುವತಿಗೆ ಅದೇನು ಮರ್ಮ ಗೊತ್ತಾಯಿತೋ ಹನಿಮೂನು ಕೂಡ ಅರ್ಧಕ್ಕೇ ನಿಲ್ಲಿಸಿದವಳು ಡೈವೋರ್ಸಿಗೆ ಅರ್ಜಿ ಹಾಕಿದ್ದಳು. ಆರೇ ತಿಂಗಳಲ್ಲಿ ವಿಚ್ಛೇದನವಾಯಿತು. ಈಗ ಪೂಜಾ ಗಾಂಧಿಯ ಜೊತೆ ನಿಶ್ಚಿತಾರ್ಥಕ್ಕಿಳಿದಿದ್ದಾನೆ. ಪೂಜಾ ದುರುಳೆಯಲ್ಲ- ದುರಹಂಕಾರಿಯಲ್ಲ, ಉತ್ತಮ ನಟಿ, ಜೊತೆಗೆ ಮಹಾನ್ ದಯಾವಂತೆ. ಪ್ರಾಣಿದಯೆ ಕುರಿತಂತೆ ಯಾವುದೇ ಪ್ರಚಾರ ಬಯಸದೆ ಕೆಲಸ ಮಾಡುವಾಕೆ.

ಇಂಥವಳಿಗೆ ಗಂಟುಬಿದ್ದ ಆನಂದ್ ಉರ್ಫ್ ಆನಂದ್‌ಗೌಡ ನಿಜಕ್ಕೂ ಬದಲಾಗಿದ್ದರೆ ಸಂತೋಷ. ಆದರೆ ಆತ ಬಿಲ್ಡರಲ್ಲ, ಉದ್ಯಮಿಯಲ್ಲ, ಹಿಂದಿ ಸಿನಿಮಾಗಳಿಗೆ ಫೈನಾನ್ಸ್ ಮಾಡುವಷ್ಟು ಬಲಾಢ್ಯನಲ್ಲ, ಆತನಿಗಿದು ಮೊದಲ ಮದುವೆಯೂ ಅಲ್ಲ. ಬೆಂಜ್ ಕಾರಿದೆ ಮತ್ತು ಜಯನಗರದಲ್ಲಿ ಅಪ್ಪ ಕಟ್ಟಿಟ್ಟ ಬಂಗಲೆಯಿದೆ ಎಂಬ ಒಂದೇ ಕಾರಣಕ್ಕೆ ಯಾರೂ ಮಹಾತ್ಮರಾಗುವುದಿಲ್ಲ. ಈತ ಓದಿದ್ದು ಕೇವಲ ಪಿಯೂಸಿ ಮಾತ್ರ. ಇಂಗ್ಲಿಷ್ ನಿರರ್ಗಳವಾಗಿ ಮಾತಾಡಿದ ಮಾತ್ರಕ್ಕೆ ವಿದ್ಯಾವಂತ ವಿವೇಕಿಯಾಗುವುದಿಲ್ಲ. ಬಾಡಿ ಬೆಳೆಸಿದವರೆಲ್ಲ ಶೂರರೂ ಅಲ್ಲ ಧೀರರೂ ಅಲ್ಲ.

ನಟಿ ಸರೋಜಾದೇವಿಯವರ ಆಸ್ತಿಯ ಮೇಲೆ ಕಣ್ಣಿಟ್ಟು ಅವರ ಸಹೋದರಿಯ ಮಗಳ ಬಾಳಲ್ಲಿ ಆಟವಾಡಿದವನು ನಾಳೆ ಪೂಜಾ ಗಾಂಧಿಯ ಆಸ್ತಿಗೆ ಕಂಟಕನಾಗಲಾರ ಎಂಬುದಕ್ಕೆ ಏನು ಗ್ಯಾರಂಟಿ?

ಯಾವುದಕ್ಕೂ ಪೂಜಾ ಹುಷಾರಾಗಿರಲಿ. ಯಾಮಾರದಿರಲಿ. ಹಿರಿಯ ನಟಿಯ ಸಹೋದರಿಯ ಮಗಳಿಗಾಗಿದ್ದು ಆಕೆಗೆ ಬಾರದಿರಲಿ. ಶುಭವಾಗಲಿ.....!

■ ರಾ.ಸೋಮನಾಥ್





ಭಾಗ 1



ಕಾಡಿನ ಪ್ರವಾಸ



• ರೀಟಾ ರೀನಿ



ಡೊನಾಲ್ಡ್ ಆಂಡರ್‌ಸನ್ ಜೊತೆ ಕಾಡಿನಲ್ಲಿ ನಾಲ್ಕು ದಿ...

ಡೊನಾಲ್ಡ್ ಆಂಡರ್‌ಸನ್ ನನಗೆ ಈಗ ಒಂದು ತಿಂಗಳಿಂದ ಪರಿಚಯ ಅಷ್ಟೇ. ಈ ಒಂದು ತಿಂಗಳಲ್ಲಿ ಅವರೊಂದಿಗೆ ಆತ್ಮೀಯತೆ ಬೆಳೆದಿತ್ತು. ಸರಿಸುಮಾರು ನನ್ನಷ್ಟು ವಯಸ್ಸಿನ ಇವರ ಬಗ್ಗೆ ಏನು ಎತ್ತ ಎಂದು ತಿಳಿದುಕೊಳ್ಳುವ ಮೊದಲೇ ನಾಲ್ಕು ದಿನಗಳ ಕಾಡಿನ ಪ್ರವಾಸದ ಬಗ್ಗೆ ಪಾರ್ವತೀಶ್ ಪ್ರಸ್ತಾಪಿಸಿದರು. ವಾಸ್ತವವಾಗಿ ಡೊನಾಲ್ಡ್ (ಡಾನ್) ನನಗೆ ಪರಿಚಯವಾಗುವ ಮೊದಲೇ ಈ ಪ್ರವಾಸ ನಿಗದಿಯಾಗಿತ್ತು, ಹಾಗಾಗಿ ಈ ಕಾರ್ಯಕ್ರಮದಲ್ಲಿ ನಾನು ಇರಲೇ ಇಲ್ಲ, ಗೌರಿ ಮತ್ತು ಪಾರ್ವತೀಶ್ ಅನಿವಾರ್ಯ ಕಾರಣಗಳಿಂದ ಹೋಗಲು ಸಾಧ್ಯವಾಗದಾಗ ಅವಕಾಶವನ್ನು ನಾನು ಒಪ್ಪಿಕೊಳ್ಳಬೇಕು ಅನ್ನೋ ಒತ್ತಾಯಕ್ಕೆ ಒಳಗಾಗಿದ್ದೆ. ಹಾಗೆ ಗೌರಿ ಹೇಳುವ ಹಾಗೆ ಗೌರಿ-ಪಾರ್ವತೀಶ್ ಎಂಬ 'ಫ್ರಂಟ್ ಬೆಂಚರ್ಸ್' ಅನ್ನು ಹಿಂದಿಕ್ಕಿ ನಾನು ಫ್ರಂಟ್ ಬೆಂಚ್‌ಗೆ ಬಂದಿದ್ದೆ. ನಿಜವಾಗಿ ಹೇಳಬೇಕು ಅಂದ್ರೆ ಕಾಡಿಗೆ ಹೋಗಿ ಬರುವತನಕ ನನಗೆ ಸಿಕ್ಕ ಈ ಅವಕಾಶ ಎಷ್ಟು ಮಹತ್ವದ್ದು ಅಂತ ನನಗೆ ಗೊತ್ತಿರಲಿಲ್ಲ.

ಕಾಡಿನಲ್ಲಿ ಎಂಥ ಪ್ರವಾಸ ಸಾಧ್ಯ? ಬಂಡೀಪುರ, ನಾಗರಹೊಳೆಗಳಲ್ಲಿ ಇರುವ ರಿಸಾರ್ಟ್‌ನಂಥ ಜಾಗಗಳಲ್ಲಿ ಮೋಜಿಗಾಗಿ ಉಳಿದುಕೊಂಡು ಒಂದಷ್ಟು ಟೈಮ್ ಪಾಸ್ ಮಾಡಿ ಬರುವಂಥದ್ದೇ? ಅದಕ್ಕಾಗಿ ನಾಲ್ಕು ದಿನಗಳನ್ನು ಕೊಡುವಷ್ಟು ಸಮಯ ಅಂತೂ ನನಗಿರಲಿಲ್ಲ. ಅದಕ್ಕಿಂತಲೂ ಹೆಚ್ಚಾಗಿ ಕಾಡು, ಕಾಡುಪ್ರಾಣಿಗಳನ್ನು ಕಾಪಾಡಬೇಕು ಎಂಬ ತಾತ್ವಿಕ ಅಭಿಪ್ರಾಯದಲ್ಲಿ ನನಗೆ ಸಹಮತ ಬಿಟ್ಟರೆ ಅದಕ್ಕಾಗಿ ವಿಶೇಷವಾಗಿ ನಾನೇನು ತೊಡಗಿಸಿಕೊಂಡವಳೂ ಅಲ್ಲ. ಕಾಡಿನ ಬದುಕಿಗೆ ಸಂಬಂಧಿಸಿದಂತೆ ಒಂದೆರಡು ಪುಸ್ತಕಗಳನ್ನು ಓದಿಕೊಂಡದ್ದು ಬಿಟ್ಟರೆ ಕಾಡಿನ ಅನುಭವಗಳ



ಕರಡಿ ಬ್ರೂನೊ ಜೊತೆ ಡಾನ್

ಬಗ್ಗೆಯಾಗಲೀ, ಅಲ್ಲಿನ ಪ್ರಾಣಿಗಳ ವರ್ತನೆಗಳ ಬಗ್ಗೆಯಾಗಲಿ ಅಂಥಾ ಆಸಕ್ತಿಯೂ ನನಗಿರಲಿಲ್ಲ. ವಾಸ್ತವವಾಗಿ ಕಾಡಿಗೆ ಹೋಗುವುದು ಎಂದರೇನೇ ಅಲ್ಲಿನ ಜೀವಸಂಕುಲದ ಪ್ರೈವೆಸಿಗೆ ಅಡ್ಡಿ ಎಂದು ಭಾವಿಸಿದವಳು ನಾನು. ಆದರೆ ಡೊನಾಲ್ಡ್ ಆಂಡರ್‌ಸನ್ ಪರಿಚಯವಾದ ನಂತರ ಅವರು ಹಂಚಿಕೊಳ್ಳುತ್ತಿದ್ದ ಕಾಡಿನ ದಟ್ಟ ಅನುಭವಗಳ ಹಿನ್ನೆಲೆಯಲ್ಲಿ ಒಮ್ಮೆ ಕಾಡಿಗೆ ಹೋಗಿ ಬರಬೇಕು ಅನಿಸುತ್ತಿತ್ತು, ಆದರೆ ಈ ಬಯಕೆಯ ಈಡೇರಿಕೆಗೆ ಇಷ್ಟು ಬೇಗ ಅವಕಾಶ ಬರುತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ, ಅನಿರೀಕ್ಷಿತವಾಗಿ ಬಂದ ಈ ಅವಕಾಶವನ್ನು ಒಪ್ಪಿಕೊಳ್ಳುವ ಸಿದ್ಧತೆಯೂ ನನಗಿರಲಿಲ್ಲ.

ಡಾನ್, ಖುರ್ಷೀದ್ ಮತ್ತು ನನ್ನನ್ನು ಬಿಟ್ಟು ಬಾಲಾಜಿ ಮತ್ತು ಚಂದನ್ ಎಂಬ ಇನ್ನಿಬ್ಬರು ಬರುವ ಬಗ್ಗೆ ತಿಳಿದಾಗ ಒಂಚೂರು ಹಿಂದೇಟು ಹಾಕಿದೆ. ಮೊದಲೇ ಕಾಡು, ಡಾನ್‌ಗೆ ಬೇರೆ 78 ವರ್ಷ. ಹೇಗೋ ಏನೋ ಅನ್ನೋ ಅನುಮಾನ, ಭಯ! ಆದರೆ ಹೊರಡುವ ಎರಡು ದಿನ ಮೊದಲು ಬಾಲಾಜಿಯವರ ಮನೆಯಲ್ಲಿ ಪರಿಚಯ ಕೂಟ ಮಾಡಿಕೊಂಡೆವು. ತುಂಬಾ ಧೈರ್ಯ ಬಂತು. ಆಗಲೇ ಕಾಡಿಗೆ ಹೋಗಬಹುದು ಎಂದು ಮನಸ್ಸು ಮಾಡಿದೆ.

ಡಾನ್ ಮನೆಯಲ್ಲಿ ಅನೇಕ ಫೋಟೋಗಳು, ಒಂದೊಂದು ಫೋಟೋಗೂ ಒಂದೊಂದು ಕತೆ ಇದೆ ಎನ್ನುವುದನ್ನು, ಅವುಗಳಲ್ಲಿ ಕೆಲವು ಕತೆಗಳನ್ನು ಕೇಳಿಸಿಕೊಂಡಿದ್ದ ನನಗೆ ಕಾಡಿಗೆ ಹೋಗುವ ಆಸಕ್ತಿ ಕೆರಳಿತು. ಅದಕ್ಕೆ ಪೂರಕವಾಗಿ ಒಂದು ಸಂಜೆ ಡಾನ್ ಮನೆಗೆ ಹೋಗಿದ್ದಾಗ ಅವರ ಸ್ನೇಹಿತ ಜಿಮಿ ಅಲ್ಲಿಗೆ ಬಂದಿದ್ದರು. ಇವರು ಮತ್ತು ಕೆಲವು ಜೊತೆಗಾರರು ಕಾಡಿನಲ್ಲಿ ಕ್ಯಾಂಪ್ ಮಾಡುವುದು ಹಂಟಿಂಗ್, ಫಿಶಿಂಗ್ ಮತ್ತು ಈಟಿಂಗ್ – ಇಂತಹ ರೋಚಕ ಅನುಭವಕ್ಕಾಗಿ ಒಂದಾಗಿ ಸೇರುತ್ತಿದ್ದ ಸ್ನೇಹಿತರು. ಇಬ್ಬರು ಸ್ನೇಹಿತರು ಸೇರಿಕೊಂಡು ಮೇಕೆದಾಟಿನಲ್ಲಿ ಆದ ಅನುಭವವನ್ನು ನೆನಪಿಸಿಕೊಂಡರು. ಕಾಡಿನ ಅನುಭವಗಳನ್ನು ನೆನಪು ಮಾಡಿಕೊಳ್ಳುವಾಗ ನೀವು ಡಾನ್ ಮುಖ ನೋಡಬೇಕು. ಮೈಯಲ್ಲಿನ ರಕ್ತವೆಲ್ಲಾ ಮುಖಕ್ಕೆ ನುಗ್ಗಿ ಬಂದಂತೆ, ವಯಸ್ಸನ್ನು ಮೀರಿದ ಉತ್ಸಾಹದಿಂದ ನಿರಿನಿರಿ ಮಿನುಗುತ್ತದೆ. ಅವತ್ತಿನ ಅವರ ನೆನಪು ಹೀಗಿತ್ತು: ಮೇಕೆದಾಟು ದಟ್ಟಕಾರಣ್ಯದಲ್ಲಿ ಸ್ನೇಹಿತರು ಟೆಂಟ್ ಹಾಕಿ ಕ್ಯಾಂಪ್ ಮಾಡಿದ್ದರು. ರಾತ್ರಿ ಟೆಂಟ್‌ನಲ್ಲಿ ಮಲಗುವಾಗ ಹೊರಗಡೆ ನಾಲ್ಕು ಅಡಿಗೆ ಒಂದರಂತೆ ಲಾಂದ್ರಗಳನ್ನು ತೂಗುಹಾಕಿ ಮಲಗಿದ್ದರು. ಆಗ ಡಾನ್ ಅವರೇ ತಂಡದ ಕ್ಯಾಪ್ಟನ್ ಆಗಿದ್ದುದರಿಂದ ಎಚ್ಚರವಾಗಿರಬೇಕಾದ ಅನಿವಾರ್ಯತೆಯಿಂದ ಅವರನ್ನು ಬಿಟ್ಟು ಉಳಿದವರು ಸುಮಾರಾಗಿ ಟೈಟ್. ಎಲ್ಲರೂ ಮಲಗಿದ್ದರು. ರಾತ್ರಿ ಸುಮಾರು ಒಂದು ಗಂಟೆಯ ಹೊತ್ತಿಗೆ ಬಿದಿರು ಮುರಿಯುವ ಸದ್ದು ಕೇಳಿಸಿತು. ಇಲ್ಲೇ ಎಲ್ಲೋ ಹತ್ತಿರದಲ್ಲಿ ಆನೆ ಇದೆ ಎಂಬುದು ಗೊತ್ತಾಯಿತು. ಆನೆ ತಾವಿದ್ದ ಟೆಂಟ್ ಹತ್ತಿರ ಬರುತ್ತಿದೆಯೋ ಇಲ್ಲವೋ ಎಂದು ಶಬ್ದದಿಂದ ಖಾತ್ರಿ ಮಾಡಿಕೊಳ್ಳುವಷ್ಟರಲ್ಲಿ ಕಣ್ಣಿಗೆ ಕಾಣುವಂತೆ ಕೆಲವೇ ಮೀಟರ್‌ಗಳ ದೂರದಲ್ಲಿ ಅದು ಟೆಂಟ್ ಕಡೆಯೇ ಬರುವುದು ಕಾಣಿಸಿತು. ಇನ್ನೇನು ಎಲ್ಲರ ಕತೆ ಮುಗಿದಂತೆಯೇ ಅಂದುಕೊಂಡ ಡಾನ್, ಆ ಕ್ಷಣದಲ್ಲೂ ಒಂದು ಯೋಚನೆ ಮಾಡಿದರಂತೆ. "ಹೇಗೂ ಸಾಯೋದು ಸಾಯ್ತೀವಿ, ನಮ್ಮನ್ನು ಸಾಯಿಸುತ್ತಿರುವುದು ಏನು ಅಂತನಾದ್ರು ಇವರು ನೋಡಲಿ" ಅಂತ ಸದ್ದು ಮಾಡದೆ ಸ್ನೇಹಿತರನ್ನು ಅಲುಗಾಡಿಸಿ ಎಬ್ಬಿಸಿದರಂತೆ. ಎಬ್ಬಿಸಿ ಅಲ್ಲಿ ನೋಡಿ ಅಂತ ಕೈ ತೋರಿಸಿದರಂತೆ. ಎಲ್ಲರೂ ದಂಗು ಬಡಿದುಹೋಗಿದ್ದರು! ಈ ಹೆಜ್ಜೆ ಇನ್ನೊಂದು ಹೆಜ್ಜೆ ತಮ್ಮ ಕಡೆ ಬಂದೇ ಬಿಟ್ಟಿತು ಎಂದು ದಿಗ್ಭ್ರಮೆಯಲ್ಲಿ ಮುದುಡಿ ಕೂತಿರುವಾಗ ಸದ್ಯ, ಆನೆ ಲಾಂದ್ರದ ಬೆಳಕಿಗೆ ಹೆದರಿಯೋ ಏನೋ ದಿಕ್ಕು ಬದಲಿಸಿ ಹೊರಟುಹೋಯ್ತಂತೆ.

ಕಾಡಿನಲ್ಲಿ ಇಂಥಾ ಎಷ್ಟೋ ಅನುಭವಗಳನ್ನು ತುಣುಕು ತುಣುಕಾಗಿ ಹೇಳುವ ಡಾನ್, ಈಗಲೂ ಕಾಡಿಗೆ ಹೋಗುವ ಇಂಗಿತ ವ್ಯಕ್ತಪಡಿಸುವುದು – ಈ ಎರಡನ್ನೂ ತಾಳೆ ಹಾಕಿ ಕಾಡಿಗೆ ಹೋಗುವುದು ಅಂದ್ರೆ ಹೀಗೆ ಟೆಂಟ್ ಹಾಕಿ, ಮುಂದೆ ಬೆಂಕಿ ಹಚ್ಕೊಂಡು ಕ್ಯಾಂಪ್ ಮಾಡೋದು ಅಂತಿದ್ದೆ. ಆಗೇನಾದ್ರು ಪ್ರಾಣಿಗಳು ಬಂದುಬಿಟ್ರೆ ಏನ್ ಗತಿ. ಬಾಲಾಜಿ, ಖುರ್ಷೀದ್, ಚಂದನ್ ಮತ್ತು ನಾನು ಓಡಾದ್ರು ಓಡಬಹುದು. 78 ವರ್ಷದ ಡಾನ್ ಕತೆ! ಮೈ ಝುಂ ಅನ್ತಿತ್ತು, ಇದರ ಸಹವಾಸವೇ ಬೇಡ ಅಂದುಕೊಂಡಿದ್ದೆ, "ತುಂಬಾ ರಿಸ್ಕ್ ಇದೆ ಪಾರ್ವತೀಶ್" ಎಂದು ಅಳಲನ್ನು ತೋಡಿಕೊಂಡಿದ್ದೆ. "ಏನು ಮಾಡೋದು, ಅಜ್ಜನಿಗೆ ಅಷ್ಟು ಉತ್ಸಾಹ ಇದೆ, ನೀವು ಹೋಗಿ ಬನ್ನಿ ಏನೂ ಆಗಲ್ಲ" ಅಂತ ಧೈರ್ಯ ತುಂಬಿದ್ದರು.

ನಮ್ಮ ಪ್ರವಾಸದ ಒಟ್ಟು ಸ್ವರೂಪವನ್ನ ನನ್ನದೇ ರೀತಿಯಲ್ಲಿ ಕಲ್ಪಿಸಿಕೊಂಡಿದ್ದ ನನಗೆ ಅದರಲ್ಲಿ ರಿಸ್ಕ್ ಇದೆ ಅನಿಸುತ್ತಿತ್ತು, ಆದರೂ ರಿಸ್ಕ್ ತಗೊಳ್ಳೋದೂ ಒಂದು ಥ್ರಿಲ್. ಆ ಥ್ರಿಲ್‌ನಲ್ಲೇ ಕಾಡಿನ ಪ್ರವಾಸದ ತಯಾರಿಗೆ ಮುಂದಾದೆ. ಏನೇನು ತೆಗೆದುಕೊಳ್ಳಬೇಕು ಎಂಬುದರ ಒಂದು ಪಟ್ಟಿಯನ್ನು ಡಾನ್ ಕೊಟ್ಟಿದ್ದರು. ಅದರಲ್ಲಿ ನನ್ನ ವೈಯಕ್ತಿಕ ವಸ್ತುಗಳನ್ನು ಬಿಟ್ಟರೆ ಪ್ರವಾಸಕ್ಕೆ ಬೇಕಾದ ಉಳಿದ ಎಲ್ಲಾ ತಯಾರಿಯನ್ನು ಮಾಡಿಕೊಂಡಿದ್ದವರು ಬಾಲಾಜಿ ಮತ್ತು ಚಂದನ್. ಕಾಫಿ ಟೀ ಮಾಡಿಕೊಳ್ಳಲು ಹಾಲು, ಕಾಫಿ ಪುಡಿ, ಸ್ಟೌವ್‌ನಿಂದ ಹಿಡಿದು ಪಾತ್ರೆ, ತಿಂಡಿ ತೀರ್ಥದ ಪ್ರತಿಯೊಂದು ವ್ಯವಸ್ಥೆಯನ್ನೂ ಅಚ್ಚುಕಟ್ಟಾಗಿ ಮಾಡಿಕೊಂಡಿದ್ದರು. ಇತ್ತ ನಾನು ಡಾನ್ ಹತ್ತಿರ ಹೋದಾಗ ಅವರು ಮತ್ತೆ ಮತ್ತೆ ಕೇಳುತ್ತಿದ್ದುದು "ಟೆಲಿಲೆನ್ಸ್ ಕ್ಯಾಮರಾ ಇದೆ ತಾನೇ?" ಅಂತ. ಡಿಜಿಟಲ್ ಕ್ಯಾಮೆರಾ ಇತ್ತು, ಆದರೆ ಡಿಎಸ್‌ಎಲ್‌ಆರ್ ಕ್ಯಾಮೆರಾ ಇರಲಿಲ್ಲ. ಇಲ್ಲ ಎನ್ನುವಂತಿಲ್ಲ. ಏಕೆಂದರೆ ಕ್ಯಾಮೆರಾ ಇಲ್ಲದೆ ಗಾಡಿ ಹತ್ತಬೇಡಿ ಅಂದಿದ್ದರಂತೆ ಈ ಅಜ್ಜ. ಸರಿ, ನನ್ನ ಕೆಲವು ಪ್ರೊಫೆಷನಲ್ ಫೋಟೋಗ್ರಾಫರ್ ಸ್ನೇಹಿತರನ್ನು ನಾಲ್ಕು ದಿನದ ಮಟ್ಟಿಗೆ ಡಿಎಸ್‌ಎಲ್‌ಆರ್ ಕೊಡ್ತೀರಾ ಕೇಳಿದೆ. ಯಾವ ಗ್ಯಾರಂಟಿಯಲ್ಲಿ ಕೊಟ್ಟಾರು? ಅವರಿಗೆ ಬೇರೆಬೇರೆ ಕಮಿಟ್‌ಮೆಂಟ್‌ಗಳು ಇದ್ದುದರಿಂದ ಹೊಂದಿಸಲು ಸಾಧ್ಯವಾಗಲಿಲ್ಲ. ಇಂಟರ್‌ನೆಟ್‌ನಲ್ಲಿ ಬಾಡಿಗೆಗಾಗಿ ಕ್ಯಾಮೆರಾ ಸಿಗುವ ಬಗ್ಗೆ ಜಾಲಾಡಿದೆ. ನನ್ನ ಗಮನಕ್ಕೆ ಬಂದ ಕೆಲವು ಮಾಹಿತಿಗಳು ದುಬಾರಿಯಾಗಿತ್ತು, ಪ್ರವಾಸವೇ ಬೇಡ ಎನಿಸುವಷ್ಟು!

ಈ ಹಿಂದೆ ನಮ್ಮ ಹತ್ರ ಒಂದು ಎಸ್‌ಎಲ್‌ಆರ್ ಕ್ಯಾಮೆರಾ ಆದ್ರೂ ಇತ್ತು. ಅದನ್ನ ಕಳೆದ ವರ್ಷ ಕಮ್ಯುನಿಕೇಷನ್ ಕೋರ್ಸ್ ಮಾಡ್ತಿದ್ದ ಕಾಂತರಾಜನಿಗೆ ಕೊಟ್ಟುಬಿಟ್ಟಿದ್ದೆವು. ಎಸ್‌ಎಲ್‌ಆರ್ ಕ್ಯಾಮೆರಾ ಆದರೂ ಸರಿ, ಕ್ಯಾಮೆರಾ ಅಂತ ಒಂದು ಸಿಕ್ಕರೆ ಸಾಕು ಅಂತ ಅವರಿವರನ್ನು ಕೇಳಿದ್ದೆ. ಒಂದಿಬ್ಬರು ಅರೇಂಜ್ ಮಾಡಿಕೊಡುವ ಆಶ್ವಾಸನೆಯನ್ನೂ ಕೊಟ್ಟಿದ್ದರು. ಅಷ್ಟರಲ್ಲಿ

ಸ್ನೇಹಿತ ಉದಯ್ ಕಾಡಿಗೆ ಹೋಗ್ತಿದ್ದೀನಿ ಅಂ...
ಎಸ್‌ಎಲ್‌ಆರ್ ಬೇಡ, ಅದರಿಂದ ಸಮಸ್ಯೆನೇ ...
'ಟ್ರಾಪರ್ಸ್' ಸಂಸ್ಥೆಯವರು ಕಡಿಮೆ ದರದಲ್ಲಿ ಬಾ...
ಕೊಡ್ತಾರೆ ಟ್ರೈ ಮಾಡಿ ಎಂದು ನೆರವಾದ. 4000 ಕ...
ಡಿ3100 ಡಿಎಸ್‌ಎಲ್‌ಆರ್ ಮತ್ತು ಒಲಂಪಸ್ ಮೆ...
ಬೈನಾಕುಲರ್ಸ್ ಎರಡನ್ನು ಬಾಡಿಗೆಗೆ ತಂದೆ. ಹೋ...
ಹಿಂದಿನ ದಿನ!

ಕ್ಯಾಮೆರಾ ಬಳಸೋದು ಹೇಗೆ? ನೀವು ಕ್ಯಾ...
ತಗೊಳ್ಳಿ, ಅದರ ಮಿನಿಮಮ್ ಆಪರೇಷನ್ ...
ಹೇಳಿಕೊಡ್ತೀನಿ ಅಂದಿದ್ದ ಉದಯ್‌ನ ಭರವಸೆಯ ...
ತಗೊಂಡೆ. ಆದರೆ ಆತ ಇರುವ ಬನ್ನೇರುಘಟ್ಟ ರ...
ಕಚೇರಿಗೆ ತಲುಪಲು ಸಾಧ್ಯವಾಗಲೇ ಇಲ್ಲ. ಮಳೆ, ...
ಇಷ್ಟೊತ್ತಿಗಾಗಲೇ ರಾತ್ರಿ 8 ಗಂಟೆ ಆಗಿತ್ತು, ಹಾಗೆ ಫ್ರೊ...
ಡೈರೆಕ್ಟ್ ಮಾಡೋಕಾಗುತ್ತಾ ಅಂದೆ. ನಕ್ಕ ಉದ...
"ಟೈಮ್ ಇದ್ರೆ ಒಂದು ಸ್ವಲ್ಪ ಹೊತ್ತು" ಇಂಟರ್‌ನೆಟ...
ಕೆಲವು ವಿಡಿಯೋ ಕ್ಲಿಪ್ಪಿಂಗ್ಸ್ ನೋಡಿ, ಒಂದು ಐಡಿ...
ಬರುತ್ತೆ" ಅಂತ ಸೂಚಿಸಿದ. ಸರಿ ಇಂಟರ್‌ನೆಟ್ ...
ಮಾಡಿದ್ರೆ ಅದು ಕನೆಕ್ಟೇ ಆಗ್ಲಿಲ್ಲ. ನನ್ನ ಅದೃಷ್ಟ...
ಹಳಿದುಕೊಳ್ತಾ ಕ್ಯಾಮೆರಾ ತಿರುಗಿಸಿ ಮುರುಗಿಸಿ ಒಂ...
ರಿಸರ್ಚ್ ಮಾಡ್ಕೊಂಡೆ. ಅಷ್ಟು ದುಡ್ಡು ಕೊಟ್ಟು ತಂದಿ...
ವೇಸ್ಟ್ ಆಗುತ್ತಲ್ಲಾ ಅನ್ನೋ ಆತಂಕಕ್ಕೆ ರಾತ್ರಿ ಇಡೀ...
ಬರಲಿಲ್ಲ. ಗಂಟೆಗೊಮ್ಮೆ ಎಚ್ಚರವಾಗ್ತಿತ್ತು. ಬೆಳಗ್ಗೆ 6 ಗ...
ಬೆಳಕು ಹರಿದಾಗ ಕ್ಯಾಮೆರಾ ತಗೊಂಡು ನನ್ನ ತ...
ಮನೆಗೆ ಹೋದೆ. ನಾನು ತಂದಿದ್ದ ಡಿ3100 ಕ್ಯಾಮೆ...
ಬೇಸಿಕ್ಸ್ ಬಗ್ಗೆ ಒಂದೆರಡು ವೀಡಿಯೋ ನೋಡಿ ಗು...
ಹಾಕಿಕೊಂಡುಬಂದದ್ದಷ್ಟೇ ನನಗೆ ಕ್ಯಾಮೆರಾ ಕ್ಲಾಸ್...
ಕ್ಯಾಮೆರಾ ಎಷ್ಟು ಬಳಕೆಯಾಗಬಹುದು ಎಂಬ ...
ನನಗಿರಲಿಲ್ಲ. ಒಂದು ವೇಳೆ ಉಪಯೋಗಕ್ಕೆ ಬರು...
ಆದರೆ ಸಿದ್ಧತೆ ಇಲ್ಲ ಅನ್ನುವಂತಾಗಬಾರದು ಎನ್ನುವ ಕಾ...
ಕ್ಯಾಮೆರಾ ಮತ್ತು ಬೈನಾಕುಲರ್ಸ್ ಎರಡನ್ನೂ ಒ...
ಪ್ರಯಾಣದ ನಾಲ್ಕೈದು ಗಂಟೆ ಸಾಕು. ಇನ್ನೊಂ...
ಕಲಿಯಬಹುದು ಅಂತ ಸಮಾಧಾನ ಮಾಡಿಕೊಂ...

ಅಂದು ಬೆಳಗ್ಗೆ ಬಾಲಾಜಿಯವರ ಮನೆಯಲ್ಲಿ ...
ಡಾನ್‌ಗೆ ಪ್ರಿಯವಾದ ಉಪ್ಪಿಟ್ಟು ಕೇಸರಿಬಾತ್!
ಹೆಂಗಸರಿಗೆ ಇಷ್ಟವಾಗುವ ಒಡವೆ ಇಟ್ಟುಕೊಳ್ಳುವ
ಪುಟ್ಟ ಪೆಟ್ಟಿಗೆಯನ್ನು ಗಿಫ್ಟ್ ತಂದಿದ್ದರು. ಬಾಲಾಜಿ...
ಮನೆಯವರು ಬಹಳ ಆಪ್ತವಾಗಿ ಕಂಡರು. ಡಾನ್ ...



ಡಾನ್ ಜೊತೆ ರೀಟಾ




ಕಾಡಿನಲ್ಲಿ ಚಂದನ್, ಬಾಲಾಜಿ, ಡಾನ್, ಖುರ್ಷೀದ್ ಮತ್ತು ರೀ...

...ನಡುವೆ ಹಾಸ್ಯದ ಲೇಪನ ದಟ್ಟ ಅನುಭವಗಳ ದರ್ಶನ. ...ಒಳ್ಳೆಯ ನಟ ಕೂಡ. ಅವರ ವಿವರಗಳನ್ನು ...ಬ್ಬರು ರಿಪೋರ್ಟ್ ಮಾಡುವುದಕ್ಕಿಂತ ಅದನ್ನು ...ಹಾಗಿನ ಮಜವೇ ಬೇರೆ. ಅವರು ಹೇಳೋದನ್ನೆಲ್ಲಾ ...ಕೇಳು ಅನ್ನೋ ಟೆಂಪ್ರಮೆಂಟ್ ಒಡ್ಡುವ ವ್ಯಕ್ತಿತ್ವ.

...ಗ ವಯಸ್ಸಿನ ಕಾರಣಕ್ಕೆ ಮುಕ್ಕಾಗಿರುವ ಡಾನ್‌ರ ...ನ ಫೋಟೋಗಳನ್ನು ನೋಡಬೇಕು. ದೃಢಕಾಯ, ...ದ ನಿಲುವು. ಆಜಾನುಬಾಹು. ಸಹಜವಾಗಿಯೇ ...ಗೆ ಕನ್ನಡದ ಸಿನಿಮಾ ಒಂದರಲ್ಲಿ ಟಾರ್ಜನ್ ಪಾತ್ರ ...ಲು ಅವಕಾಶ ಬಂದಿತ್ತಂತೆ. ಆದರೆ ಕನ್ನಡ ಗೊತ್ತಿಲ್ಲ ...ದ ಕಾರಣಕ್ಕೆ ಅದನ್ನು ನಿರಾಕರಿಸಿದರಂತೆ. ಒಂದುಕ್ಷಣ ...ಹೇಳುತ್ತಾರೆ. "ಚಂದನ್, ನೀನು ಇಂಗ್ಲಿಷ್‌ನ ...ನ್ ಸಿನಿಮಾ ನೋಡಿದ್ದೀಯಾ? ಅದರಲ್ಲಿ ಅವನು ...ಗೊರಿಲ್ಲಾ ಜೊತೆ ಓಡಾಡ್ತಿರ್ತಾನೆ ಅಲ್ವಾ? ಒಂದು ...ನ್ನಡ ಸಿನಿಮಾದಲ್ಲಾಗಿದ್ದರೆ ಕೋತಿನಾದ್ರೂ ಹಿಡ್ಕೊಂಡು ...ತ್ತೇಕಿತ್ತು ಅಲ್ವಾ? ಆಗ ನನಗೆ ರೀನಿ ಪರಿಚಯನೇ ...ನೋಡು" ಎನ್ನುತ್ತಾ ಇರುವವರನ್ನೇ ಹಾಸ್ಯಕ್ಕೆ ...ಕೊಳ್ಳುತ್ತಾರೆ.

...ಮ್ಮ ಈ ಪ್ರವಾಸ ಹೇಗಿರುತ್ತೆ, ಎಲ್ಲಿ ಹೋಗ್ತೀವಿ ...ಸ್ಪಷ್ಟ ಕಲ್ಪನೆಯೇ ನನಗಿರಲಿಲ್ಲ. ಆದರೆ ...ಮುದ್ದಕ್ಕೂ ಡಾನ್ ತಮ್ಮ ಅನುಭವಗಳ ...ಳೆಯಿಂದ ನಮ್ಮ ಪ್ರವಾಸಕ್ಕೆ ಅಪರೂಪದ ಪ್ರವೇಶಿಕೆ ...ದ್ದರು. ಬಾಲ್ಯದಲ್ಲಿಯೇ ಕಾಡಿನೊಂದಿಗೆ ನಂಟು ...ಸಿದ ಡಾನ್, ಕೆನ್ನೆತ್‌ರ ಅನೇಕ ಕಾಡಿನ ಪ್ರವಾಸಗಳಲ್ಲಿ ...ದ್ದವರು. ಇವತ್ತಿನ ಪರಿಸ್ಥಿತಿಯಲ್ಲಿ ಪರಿಸರ ಸಂರಕ್ಷಣೆ, ...ಮತ್ತು ವನ್ಯಜೀವಿ ಸುರಕ್ಷತೆಯ ಬಗ್ಗೆ ಅಪಾರ ...ಹಾಗೂ ಯೋಜನೆಗಳು ಇರುವ ಹಿನ್ನೆಲೆಯಲ್ಲಿ ...ಾಲ್ಡ್ ಆಂಡರ್‌ಸನ್ ಆಗಲಿ, ಕೆನ್ನೆತ್ ...ರ್‌ಸನ್‌ರಾಗಲಿ ಕೊಲೆಗಡುಕರಂತೆ ಕಾಣುತ್ತಾರೆ. ನಾ ...: "ಹಿಂದೆ ಅಷ್ಟೊಂದು ಪ್ರಾಣಿಗಳನ್ನೆಲ್ಲಾ ...ದ್ದೀರಲ್ಲಾ ಡಾನ್, ಅದರ ಬಗ್ಗೆ ಈಗ ಏನನಿಸುತ್ತೆ?" ...ಮಾಡಿದೆ ಅಂತ ಅನಿಸ್ತಿದೆ. ಆದರೆ ಆಗಿನ ಪರಿಸ್ಥಿತಿ ...ಇತ್ತು. ಒಂದು ಹಳ್ಳಿಯಲ್ಲಿ ಎರಡೇ ಎರಡು ...ನ್ನು ಇಟ್ಟುಕೊಂಡು ಜೀವನ ಮಾಡುವ ರೈತನೊಬ್ಬನ ...ಾಧಾರವೇ ಕಾಡಿನ ಹುಲಿಯ ಪಾಲಾಗುತ್ತದೆ ಎಂದರೆ ...ಹುಲಿ ಹಳ್ಳಿಯಲ್ಲಿ ಪಳಗುತ್ತದೆ. ಮುಂದೆ ಊಟಕ್ಕಾಗಿ ...ನು ಮೇಲೆ ದಾಳಿ ಮಾಡುತ್ತದೆ. ಹೆಚ್ಚು ...ಮಕಾರಿಯಾಗುತ್ತದೆ. ಅಂಥ ಸಂದರ್ಭಗಳಲ್ಲಿ ಅಂಥಾ ...ಮುನ್ನು ಕೊಲ್ಲದೆ ಬೇರೆ ದಾರಿಯಿರಲಿಲ್ಲ. ನಮ್ಮನ್ನು ...ಗಿ ಕರೆಸಿಕೊಳ್ಳುತ್ತಿದ್ದರು. ಜೊತೆಗೆ ಅಪಾಯಕಾರಿ ...ಪ್ರಾಣಿಗಳನ್ನು ಕೊಂದು ಜಯ ಸಾಧಿಸುವುದು ...ುತನದ ಕೆಲಸ ಎಂದೇ ಭಾವಿಸಲಾಗುತ್ತಿತ್ತು" ...ತ್ತಾರೆ.

...0-50 ವರ್ಷಗಳ ಹಿಂದಿನ ಬದುಕಿನಲ್ಲಿ ...ಕಾಡುಗಳ ನಡುವೆ ಅಷ್ಟೇನು ಅಂತರ ಇಲ್ಲದಿದ್ದ ...ರ್ಭಗಳಲ್ಲಿ ಕಾಡುಪ್ರಾಣಿಗಳು ಮನುಷ್ಯ ಜೀವನಕ್ಕೆ



ಉಪಟಳವಾಗುತ್ತಿದ್ದವು. ಅವುಗಳನ್ನು ಕೊಂದು ಗಂಡಸುತನ ಮೆರೆಯುತ್ತಿದ್ದ ಇದೇ ಡಾನ್ ಈಗ ಪ್ರಾಣಿಗಳ ಒಂದೊಂದು ದನಿಯನ್ನು ತದೇಕಚಿತ್ತದಿಂದ ಆಲಿಸುವ, ಪ್ರಾಣಿಗಳ ಹೆಜ್ಜೆ ಜಾಡನ್ನು ಆಪ್ಯಾಯತೆಯಿಂದ ನೇವರಿಸುವ, ಕಾಡು ಮತ್ತು ವನ್ಯಪ್ರಾಣಿಗಳ ಸಂರಕ್ಷಕರಾಗಿಬಿಟ್ಟಿದ್ದಾರೆ. ಅವರ ಹಿಂದಿನ ಕಾಡುಪ್ರಾಣಿಗಳೊಂದಿಗಿನ ಹೋರಾಟದ ಹಲವು ಸಂಧರ್ಭಗಳು ನಮ್ಮ ಪ್ರಯಾಣದ ಹಾದಿಗೆ ಜೀವ ತುಂಬುತ್ತಿತ್ತು. ನಾವು ಪ್ರಯಾಣಿಸುತ್ತಿದ್ದ ಬೊಲೆರೋ ಗಾಡಿ, ಅದರ ಫೋರ್‌ವ್ಹೀಲ್ ಡ್ರೈವ್ ಬಗ್ಗೆ ಏನೋ ಮಾತು ಬಂದಾಗ ಡಾನ್ ನೆನಪು ಅವರ ಫೋರ್ಡ್ ಕಾರ್ ಬಗ್ಗೆ ಹೊರಳಿತು.

"ಇದೇ ದಾರಿಯಲ್ಲಿ... ಕೊಳ್ಳೆಗಾಲದ ರಾಮ್‌ಪುರದ ಕಾಡಿನಲ್ಲಿ ಒಂದು ಮದವೇರಿದ ಆನೆಯ ಉಪಟಳ ಜಾಸ್ತಿ ಆಗಿತ್ತು. ಅದನ್ನು ಬೇಟೆ ಆಡಬೇಕು ಅಂತ ಜನ ನಮ್ಮನ್ನು ಕರೆದಿದ್ರು. ಆಗ ನಮ್ಮತ್ರ ಒಂದು ಫೋರ್ಡ್ ಮಾಡೆಲ್ ಎ ಕಾರ್ ಇತ್ತು. ಆ ಕಾರಿನ ರೇಡಿಯೇಟರ್‌ಗೆ ನೀರು ತುಂಬಿಸಿಕೊಂಡು ಗಾಡಿ ಓಡಿಸಬೇಕಿತ್ತು. ಈಗಿನಂತೆ ರೇಡಿಯೇಟರ್‌ಗೆ ಕೂಲೆಂಟ್‌ಗಳು ಅದೂ ಇದೂ ಆಗ ಇರಲಿಲ್ಲ. ಆ ರೇಡಿಯೇಟರ್‌ಗೆ ಒಂದು ಹೋಸ್‌ಪೈಪ್ ಇತ್ತು. ಈ ಹೋಸ್ ಪೈಪ್ ಕಾರಿನ ಫ್ಯಾನ್‌ಗೆ ಸಿಕ್ಕೊಂಡು ತುಂಡಾಗಿತ್ತು. ಅದು ಯಾವಾಗ ಆಯಿತೋ ಏನೋ ರೇಡಿಯೇಟರ್‌ನ ನೀರೆಲ್ಲ ಖಾಲಿಯಾಗಿ ಗಾಡಿ ಬಿಸಿಯಾಗಿ ನಿಂತೇಹೋಯಿತು. ನಾನು ಹೇಗೋ ತುಂಡಾಗಿದ್ದ ಪೈಪ್ ಅನ್ನು ಸೇರಿಸಿ ಮತ್ತೆ ನೀರು ಸೋರದಂತೆ ಮಾಡಿದೆ. ಈಗ ನೀರು ತುಂಬಿಸಬೇಕು, ಹಾಳಾದ್ದು ಗಾಡಿ ನಿಂತುಹೋಗಿದ್ದ ಜಾಗದಲ್ಲಿ ಒಂದೇ ಒಂದು ಹನಿ ನೀರು ಸಿಗೋ ಸೂಚನೆ ಇರಲಿಲ್ಲ. ಇನ್ನು ರಾಂಪುರದವರೆಗೆ ಹೋಗಬೇಕಲ್ಲಾ? ನಮ್ಮಪ್ಪ ಒಂದು ಸಲಹೆ ಕೊಟ್ರು - ರೇಡಿಯೇಟರ್‌ಗೆ ಉಚ್ಚೆ ಉಯ್ಯುವುದು ಬಿಟ್ಟರೆ ಬೇರೆ ದಾರಿ ಇಲ್ಲ ಅಂತ. ಸರಿ, ನಾನು ನಮ್ಮಪ್ಪ ಅದರಲ್ಲಿ ಉಚ್ಚೆ ಉಯ್ದೆವು. ಆಗ ನಮ್ಮ ಜೊತೆ ಒಬ್ಬ ಪಾರ್ಸಿ ಹುಡುಗ ಇದ್ದ. ಅವನಿಗೋ ನಾಚಿಕೆ, ನಾಚಿಕೆ. ನಮ್ಮನ್ನ ದೂರ ಹೋಗಿ, ದೂರ ಹೋಗಿ ಅಂತ ಅಟ್ಟಿದ. ನಾವು ದೂರ ಹೋದಮೇಲೆ 'ಏಯ್ ಏನೂ ಬರ್ತಿಲ್ಲ' ಅಂತ ಕೂಗ್ದಾನೆ. ಹೇಗಾದರೂ ಆಗಲಿ, ಮೂರು ಜನರ ಸುಸು ಮೇಲೆ ಗಾಡಿ ಓಡುವುದಂತೂ ಸಾಧ್ಯವೇ ಇರಲಿಲ್ಲ. ನಾನು ಕಾರಿನ ಪಕ್ಕ ನಿಂತು, ಹೋಗಿಬರುವವರನ್ನೆಲ್ಲ ಅಡ್ಡ ಹಾಕಿ ಅಲ್ಲಿ ಸುಸು ಮಾಡಿ ಅಂತ ರೇಡಿಯೇಟರ್ ತೋರಿಸುತ್ತಿದ್ದೆ. 'ಥೂ ಆಗಲ್ಲ' ಅಂತ ನಾಚಿಕೊಂಡು ಕೆಲವರು ಹೋಗ್ತಿದ್ರು. ನಾನು 'ಒಂದು ರೂಪಾಯಿ ಕೊಡ್ತೀನಿ ಅದರಲ್ಲಿ ಸುಸು ಮಾಡಿ' ಅಂತ ಅರೆಬರೆ ಕನ್ನಡದಲ್ಲಿ ಗಿಂಜುತ್ತಿದ್ದೆ. ಹೇಗೋ ಕೊನೆಗೆ ಎಂಟು ಜನ ರೇಡಿಯೇಟರ್‌ನಲ್ಲಿ ಸುಸು ಮಾಡಿಸುವಷ್ಟು ಯಶಸ್ವಿಯಾದೆ. ಆಶ್ಚರ್ಯ ಏನು ಗೊತ್ತಾ? ಅಷ್ಟೇ ಸುಸು ಮೇಲೆ ನಾವು ರಾಂಪುರ ತಲುಪಿದ್ವಿ. ಅಲ್ಲಿ ಸುಸು ಎಲ್ಲಾ ತೊಳೆದು ನೀರು ತುಂಬಿಸಿಕೊಂಡ್ವಿ."

ನಾವಿನ್ನು ನಗುತ್ತಿರುವಾಗಲೇ ಬೈರಮಂಗಲಕ್ಕೆ ಹೊರಳುವ ಅಡ್ಡದಾರಿ ಬಂತು. ಕೈ ತೋರಿಸುತ್ತಾ - 'ಈ ರಸ್ತೆ ಬೈರಮಂಗಲಕ್ಕೆ ಹೋಗುತ್ತೆ' ಅಂದ್ರು. ನಾವು ಕಾರಿನಿಂದ ಇಣುಕಿ ರಸ್ತೆಗುಂಟ ಕಣ್ಣು ಹಾಯಿಸಿದೆವು. "ನಾನು ಚಿಕ್ಕವನಾಗಿದ್ದಾಗ ಒಂದು ಸಾರಿ ಇದೇ ಬೈರಮಂಗಲಕ್ಕೆ ಕೊಕ್ಕರೆ ಬೇಟೆಗೆ ಬಂದಿದ್ದೆವು...' ಎಂದು ಆರಂಭಿಸಿದರು. ನಾವು ಹೋಗುವ ದಾರಿ ಡಾನ್‌ಗೆ ಎಷ್ಟು ಪರಿಚಿತ ಇತ್ತು ಅಂದ್ರೆ ಒಂದೊಂದಷ್ಟು ಮೈಲಿಗಳ ಅಂತರಕ್ಕೂ ಎಡಕ್ಕೋ ಬಲಕ್ಕೋ ಕೈತೋರಿಸಿ ಏನಾದರೊಂದು ಅನುಭವ ಹೇಳುತ್ತಿದ್ದರು.

"ಕೊಕ್ಕರೆ ಬೇಟೆಗೆ ಅಂತ ಹೋದಾಗ ನಮ್ಮ ಜೊತೆ ಒಬ್ಬ ಇಂಗ್ಲಿಷ್ ಹುಡುಗ ಇದ್ದ. ಬೇಟೆ ಮುಗಿಸಿ ಕಾರಿನ ಹತ್ತಿರ ಹಿಂತಿರುಗಿ ಬಂದೆವು. ಬಂದವನೇ ಆ ಹುಡುಗ ತನ್ನ ಮೈ ಮೇಲೆ ಇದ್ದ ಬಟ್ಟೆಯೆಲ್ಲಾ ಬಿಚ್ಚಿಬಿಟ್ಟ. ನಾನು, 'ಲೇ ಏನ್ ಮಾಡ್ತಾ ಇದ್ದೀಯಾ? ಊರಿನ ಜನ ನೋಡಿದ್ರೆ ಬಡಿದಾಕ್ತಾರೆ' ಅಂದೆ. ಅವನು, 'ಅವರು ಏನಾದ್ರೂ ಮಾಡಿಕೊಳ್ಳಲಿ, ನನಗೆ ಈ ಜಿಗಣೆ ಹತ್ತಿಸಿಕೊಂಡು ಹೋಗೋದು ಬೇಕಿಲ್ಲ' ಅಂತ ಎಲ್ಲಾ ಒದರಿಕೊಂಡ. ನನಗೂ ಚೆಕ್ ಮಾಡ್ಕೊ ಅಂತ ಹೇಳಿದ. ನಾನು ತಲೆ ಕೆಡಿಸಿಕೊಳ್ಳಲಿಲ್ಲ. ಮನೆಗೆ ಹೋಗಿ ನೋಡ್ತೀನಿ... ಯಾವ ಒಂದು ಜಾಗದಲ್ಲಿ ಜಿಗಣೆ ಇರಬಾರದು ಅಂತ ಬೇಡಿಕೊಂಡಿದ್ದೆನೋ ಅದೇ ಜಾಗದಲ್ಲಿ ಅಮಲೇರಿದ್ದ ಜಿಗಣೆಯೊಂದು ನೇತಾಡುತ್ತಿತ್ತು. ನನಗೆ ಜಿಗಣೆ ನೋಡಿ ಭಯ ಆಗಲಿಲ್ಲ. ಅದನ್ನ ಹೊಡೆಯೋಕೆ ಅಂತ ನಮ್ಮ ಮನೆಯ ಹುಡುಗ ಒಂದು ಹಾಕಿ ಸ್ಟಿಕ್ ಹಿಡ್ಕೊಂಡು ಬರ್ತಾನೆ! ನಾನು ಜೋರಾಗಿ ಕೂಗು ಹಾಕಿದೆ. ಒಳಗೆ ಏನೋ ಮಾಡ್ತಿದ್ದ ಅಮ್ಮ ಓಡಿ ಬಂದು ನನ್ನ ಅವಸ್ಥೆ ನೋಡಿ ಅಯ್ಯಯ್ಯೋ ಅನ್ನುತ್ತಾ ದಂಗಾದಳು. ಕೊನೆಗೆ ಹೊಗೆಸೊಪ್ಪಿನ ಪುಡಿ ಹಾಕಿ ಆ ಜಿಗಣೆಯನ್ನು ಬೀಳಿಸಿದ್ರು."

ಅಸಲಿಗೆ ಈ ಕಾಡಿನ ಪ್ರವಾಸದ ಬಗ್ಗೆ ನನಗೆ ಆಸಕ್ತಿ ಇರಲಿಲ್ಲವಾದ ಕಾರಣ, ಹೆಚ್ಚು ಪ್ರಶ್ನೆಗಳನ್ನು ಹಾಕಿಕೊಳ್ಳದೆ, ಖಾಲಿ ಮನಸ್ಸಿನ ಮೇಲೆ ಅನುಭವದ ಚಿತ್ತಾರ ಮೂಡಬಹುದೇನೋ ನೋಡೋಣ ಅಂತ ಹೋದವಳು ನಾನು. ನಾನು ಹೊರಡುವಾಗ 'ಅಣ್ಣ ಕಾಡಿಗೆ ಹೋಗ್ತಾ ಇದ್ದೀಯಾ ಕಬ್ಬು ತಗೊಂಡ್ಹೋಗು' ಅಂತ ಒಂದಷ್ಟು ಕಬ್ಬು ತಂದುಕೊಟ್ಟಿದ್ದರು ನನ್ನ ತಂಗಿ ಸೌಮ್ಯ ಮತ್ತು ಅಖಿಲ್. ಸಿಹಿಗುಂಬಳ ತಗೋಬೇಕು ಅಂತಿದ್ರು ಬಾಲಾಜಿ. ಕಾಡಿಗೆ ಹೋಗುವಾಗ ಈ ಕಬ್ಬು ಕುಂಬಳಕಾಯಿ ಅಷ್ಟು ಮಹತ್ವದ್ದು ಅಂತ ನನಗೆ ಅನಿಸಿರಲಿಲ್ಲ. ಸುಮ್ನೆ ಲಗೇಜು ಅಂತ ತಂದುಕೊಟ್ಟಿದ್ದ ಕಬ್ಬು ಮನೇಲಿ ಬಿಟ್ಟುಹೋಗಿದ್ದೆ. ಗಾಡಿ ಹತ್ತುವ ಮೊದಲೂ ಡಾನ್ ಕೇಳಿದ್ದರು, 'ಕುಂಬಳಕಾಯಿ ತಗೊಂಡಿದ್ದೀರಾ ತಾನೇ?' ಅಂತ.

ಪಂಡ್ಯ ಹತ್ತಿರವಾಗುತ್ತಿದ್ದಂತೆ ಗಾಡಿಯಿಂದ ಇಣುಕಿಇಣುಕಿ ಏನೋ ನೋಡುತ್ತಿದ್ದರು. ಏನು ಹುಡುಕುತ್ತಿದ್ದೀರಿ ಅಂತ ಕೇಳಿದ್ದಕ್ಕೆ, 'ದೀಸ್ ಫೆಲೋಸ್ ಕ್ಯಾರಿ ಶುಗರ್‌ಕೇನ್ ಇನ್ ದ ಕಾರ್ಟ್ ಮ್ಯಾನ್. ಟೆಲ್ ದೆಮ್ ವಿ ವಿಲ್ ಗಿವ್ ಫಿಫ್ಟಿ ರೂಪೀಸ್ ಅಂಡ್ ಟೇಕ್ ಸಮ್ ಶುಗರ್‌ಕೇನ್' (ಇಲ್ಲಿನೋರು ಗಾಡಿಗಳಲ್ಲಿ ಕಬ್ಬು ತಗೊಂಡೋಗ್ತಾ ಇರ್ತಾರೆ, ಅವರನ್ನ ನಿಲ್ಸಿ *50* ರೂಪಾಯಿ ಕೊಡ್ತೀವಿ ಅಂತ ಹೇಳಿ ಒಂದಷ್ಟು ಕಬ್ಬು ಕೊಂಡ್ಕೊಳ್ಳಿ) ಅಂದ್ರು. ಅಯ್ಯೋ ಮನೇಲಿದ್ದ ಕಬ್ಬು ತರಬೇಕಿತ್ತು, ಹೀಗೆ ದಾರೀಲಿ ಹೋಗೋರ ಹತ್ತಿರ ಹಲ್ಲು ಗಿಂಜಿ 'ಕಬ್ಬು ಕೊಡಿ' ಅಂತ ಕೇಳೋದು ತಪ್ಪಿರೋದು ಅಂದ್ಕೊಂಡೆ.

ಹಾಗೆ ಅಂದುಕೊಳ್ಳುವಾಗಲೇ ಒಂದು ಟ್ರಾಕ್ಟರ್‌ನಲ್ಲಿ ದೊಡ್ಡ ಲೋಡಿನ ಕಬ್ಬು ಸಾಗುತ್ತಿತ್ತು. ಅವ ಬಲಕ್ಕೆ ನಮ್ಮ ಗಾಡಿ ಎಡಕ್ಕೆ. ಸ್ವಲ್ಪ ಮುಂದೆ ಹೋಗಿ ಎಡದಲ್ಲಿ "ಗಾಡಿ ನಿಲ್ಲಿಸಿ ಬಾಲಾಜಿ ದಡಬಡಾಯಿಸಿ ಆ ಬದಿಗೆ ಹೋದರು. ಕೈ ಅಡ್ಡ ಹಾಕಿ ಟ್ರಾಕ್ಟರ್ ನಿಲ್ಲಿಸಿ ಕಬ್ಬು ಕೇಳಿದ್ರು, ಗಾಡಿ ನಿಲ್ಸಕ್ಕಾಗಲ್ಲ. ಸ್ವಲ್ಪ ಮುಂದೆ ಫ್ಯಾಕ್ಟರಿ ಇದೆ ಅಲ್ಲಿ ಕೇಳಿ" ಅಂದು ಆತ ಮುಂದೆ ಹೋದ. ಪೆಚ್ಚು ಮೋರೆ ಹಾಕ್ಕೊಂಡೆ ಬಂದ್ರು ಪಾಪ ಬಾಲಾಜಿ.

ಇನ್ನು ಸ್ವಲ್ಪ ಮುಂದೆ ಹೋಗುತ್ತಿದ್ದಂತೆ ಕಬ್ಬು ತುಂಬಿದ್ದ ಒಂದು ಎತ್ತಿನ ಗಾಡಿ ಹಿಂಭಾರಕ್ಕೆ ಸಿಡಿ ಎದ್ದು ಕಾಲು ಮೇಲೆ ಮಾಡಿಕೊಂಡಂತೆ ಕೂತಿತ್ತು. ಅಕ್ಕಪಕ್ಕ ಅದರ ಮಾಲಿಕರ ಸುಳಿವಿಲ್ಲ. ಅಲ್ಲೇ ಹತ್ತಿರದಲ್ಲಿದ್ದ ತೋಟ, ಅದಕ್ಕೆ ಹೊಂದಿಕೊಂಡಂತಿದ್ದ ಮನೆಯವರೇ ಅದರ ಮಾಲಿಕರಿರಬಹುದು ಅಂತ ರಸ್ತೆಯಿಂದ ಕೆಳಗಿಳಿದು, 'ಯಾರಾದ್ರೂ ಇದ್ದೀರಾ' ಅಂತ ಕೂಗುತ್ತಾ ಹೋದೆ. ಯಾರೂ ಪ್ರತಿಕ್ರಿಯಿಸಲಿಲ್ಲ. ಗಾಡಿ ಕಡೆ ತಿರುಗಿ ನೋಡುವಷ್ಟರಲ್ಲಿ ಈ ಕಡೆ ಇದ್ದವರು ಗಾಡಿಯಿಂದ ಏಳೆಂಟು ಜಲ್ಲೆ ಎಳೆದುಹಾಕಿ ತುಂಡು ಮಾಡಿಕೊಳ್ಳುತ್ತಿದ್ದರು. ಇನ್ನೇನು ನಮ್ಮ ರೈತರು ಒಂದತ್ತು ಕಬ್ಬಿನ ಜಲ್ಲೆ ತಗೊಂಡ್ರೆ ತಕರಾರು ಮಾಡೋದಿಲ್ಲ ಅಂತ ಭರವಸೆಯಲ್ಲಿ ನಾನೂ ಜಲ್ಲೆ ಮುರಿಯೋಕೆ ಕೈ ಹಾಕಿದೆ. ಅಷ್ಟರಲ್ಲಿ ಬಾಲಾಜಿಯವರಿಗೆ ಗಾಡಿಯ ಮಾಲಿಕರು ಸಿಕ್ಕು 'ಅಸಮಾಧಾನದ ಪರ್ಮಿಶನ್' ಕೊಟ್ಟಿದ್ದನ್ನ ಅವರು ತಗೊಂಡು ಬಂದ್ರು. ಅಷ್ಟಕ್ಕೆ ಸಾಕು ಅಂತ ನಾವೇ ಬ್ರೇಕ್ ಹಾಕ್ಕೊಂಡು ಸಿಕ್ಕಿದ್ದಷ್ಟನ್ನು ಗಾಡಿಯಲ್ಲಿ ಪೇರಿಸಿಕೊಂಡು ಹೊರಟ್ವಿ..... ಇದು ನಮ್ಮ ಪ್ರಯಾಣದ ಮೊದಲರ್ಧ!

(ಮುಂದುವರೆಯುವುದು)

ಎಡಪಂಥದ ಬೆಂಕಿ ಚೆಂಡು: ಹ್ಯೂಗೋ ಚಾವೆಝ್



ಈ ಯುಗವು ಒಂದು ಹೃದಯಕ್ಕೆ ಜನ್ಮ ನೀಡುತ್ತದೆ. ವಿಚಾರದ ಪರ್ಯಾಯ ದಾರಿಗಳು ರೂಪುಗೊಳ್ಳುತ್ತಿದೆ. ಹೊಸ ತಲೆಮಾರಿನವರಲ್ಲಿ ವಿಭಿನ್ನವಾಗಿ ಆಲೋಚಿಸುವವರು ಬಹುಜನರಿದ್ದಾರೆ. ಇತಿಹಾಸದ ಅಂತ್ಯವೆಂಬುದು ಸಂಪೂರ್ಣ ತಪ್ಪು ಕಲ್ಪನೆಯೆಂದು ಅದು ಸಾಬೀತುಪಡಿಸುತ್ತದೆ. ಅಮೆರಿಕನ್ ಧ್ರುವೀಕರಣದ 'ಫೇಕ್ಸ್ ಅಮೆರಿಕಾ' ಮತ್ತು ಬಂಡವಾಳಶಾಹಿ ನವ ಉದಾರವಾದಿ ಲೋಕವೆಲ್ಲವೂ ಅಳಿದುಹೋಗುತ್ತಿದೆ. ಈ ವ್ಯವಸ್ಥೆಯು ಕೇವಲ ಬಡತನವನ್ನು ಬೆಳೆಸುವುದೆಂದು ಜಗತ್ತು ಮನಗಂಡಿದೆ. ಇನ್ನು ಅದನ್ನು ಯಾರು ನಂಬಿಯಾರು.

- ಸಿಲ್ವಿಯೋ ರಾಡ್ರಿಗಸ್, ಲ್ಯಾಟಿನ್ ಅಮೆರಿಕಾದ ಹೆಸರಾಂತ ಚಿಂತಕ

ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತದರ ಚೇಲಾಗಳೇ ವಿಜೃಂಭಿಸುತ್ತಿರುವ ಈ ಕಾಲಘಟ್ಟದಲ್ಲಿ, ಜಗತ್ತಿನಾದ್ಯಂತ ನ್ಯಾಯಪಕ್ಷಪಾತಿಗಳು ಭ್ರಮನಿರಸನಗೊಳ್ಳುತ್ತಿರುವ ಇಂದಿನ ಸಂಕಟಮಯ ಸಂದರ್ಭದಲ್ಲಿ ಹ್ಯೂಗೋ ಚಾವೆಝ್ ಎಂಬ ಸಾಮ್ರಾಜ್ಯಶಾಹಿ ವಿರೋಧಿಗಳ ಪಾಲಿನ ರಿಯಲ್ ಹೀರೋ 80% ಮತಗಳನ್ನು ಪಡೆದು ಸತತ 4ನೇ ಬಾರಿಗೆ ವೆನೆಝುವೆಲಾದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. **Anti Globalisation Fire Brand** ಎಂದೇ ಖ್ಯಾತರಾದ ಹ್ಯೂಗೋ ಚಾವೆಝ್‌ರ ಈ ಗೆಲುವು ಸಿಲ್ವಿಯೋ ರಾಡ್ರಿಗಸ್‌ರ (ಈ ಮೇಲೆ ಉಲ್ಲೇಖಿಸಿದ) ಮಾತುಗಳನ್ನು ಪುಷ್ಟೀಕರಿಸುತ್ತಿದೆ.



ವಿಶ್ವದ ಸ್ವಯಂಘೋಷಿತ ಯಜಮಾನ ಅಮೆರಿಕಾವನ್ನು ನಿರಂತರವಾಗಿ ಮೂದಲಿಸುತ್ತಿದ್ದರೂ ಚರಿತ್ರೆಯ ಪುಟ ಸೇರದೇ ಮುಂಚೆಗಿಂತಲೂ ಬಲಿಷ್ಠರಾಗಿಯೇ ಇರುವ ಹ್ಯೂಗೋ ಚಾವೆಝ್‌ರ ಈ ಶಕ್ತಿಯ ಹಿಂದೆ ಅಪಾರ ಶ್ರಮ ಅಡಗಿದೆ. ಅಧಿಕಾರಕ್ಕೇರಿದ ಮರುಗಳಿಗೆಯಲ್ಲೇ ಈ ಜನನಾಯಕ ಮಾಡಿದ ಮೊದಲ ಅತ್ಯಂತ ಪುಣ್ಯದಾಯಕ ಕೆಲಸವೆಂದರೆ ತನ್ನ ನೆಲದಲ್ಲಿ ಬಂಡವಾಳಶಾಹಿಗಳಿಗೆ, ಭೂಮಾಲೀಕ ವರ್ಗಕ್ಕೆ ಚಟ್ಟ ಕಟ್ಟಿದ್ದು. ಭ್ರಷ್ಟಾಚಾರದಿಂದ ನಲುಗಿ ಇನ್ನೇನು ಎಕ್ಕುಟ್ಟಿ ಹೋಗಲಿದೆ ಎಂಬ ತನ್ನ ತಾಯಿನಾಡಿನಲ್ಲಿ ಭ್ರಷ್ಟರ ಎದೆಗೆ ಕೊಡಲಿ ಏಟು ನೀಡಿ ಮಕಾಡೆ ಮಲಗಿಸಿದ್ದು. ಭೂಸುಧಾರಣೆ ಕಾನೂನು ಜಾರಿ ಮಾಡಿ ರೈತನಿಗೆ ಭೂಮಿ ನೀಡಿದ್ದು. ಹೀಗೆ ಪಟ್ಟಿ ಮಾಡುತ್ತಾಹೋದರೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಲ್ಯಾಟಿನ್ ಅಮೆರಿಕಾದ ಈ ಬಲಾಢ್ಯ ದೇಶ ಅಮೆರಿಕಾ ಸಂಯುಕ್ತ ಸಂಸ್ಥಾನದ ಪಾಲಿಗೆ ಮಗ್ಗುಲ ಮುಳ್ಳು. ವೆನೆಝುವೆಲಾದ ಭೂಗರ್ಭದಲ್ಲಿ ಅಡಗಿರುವ 'ಮಕರಂದ'ವಾಗಿರುವ ಅಪಾರ ತೈಲ ಸಂಪತ್ತು ಅಮೆರಿಕಾ ಎಂಬ ವಿಷಯುಕ್ತ ಕೀಟ ಹೀರಲಾಗದರೆತೆ ತಡೆಯೊಡ್ಡಿದ್ದು ಇದೇ ಚಾವೆಝ್ ಎಂಬ ಮುಳ್ಳು. ಇದು ಸಾಧ್ಯವಾಗಿದ್ದು ಚಾವೆಝ್ ಅವರ ಅಚಂಚಲವಾದ ಬದ್ಧತೆಯಿಂದ...

ಈ ಅಚಂಚಲ ಬದ್ಧತೆಯ ಹಿಂದೆ ಚಾವೆಝ್ ಸಾಗಿ ಬಂದ ಕಠಿಣ ಹಾದಿಯ ಪಯಣದ ಕೊಡುಗೆಯಿದೆ. 1954ರ ಜುಲೈ 25ರಂದು ವೆನೆಝುವೆಲಾದ ಬಾರಿನಾಸ್ ಪ್ರಾಂತ್ಯದ ಸಬಾನಿಟಿಯಲ್ಲಿ ಶಿಕ್ಷಕರೋರ್ವನ ಮಗನಾಗಿ ಜನಿಸಿದ ಚಾವೆಝ್ ತನ್ನ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಪಡೆದ ಬಳಿಕ ತನ್ನ 17ನೇ ವಯಸ್ಸಿಗೆ ಸೈನಿಕ ಶಿಕ್ಷಣ ಅಕಾಡೆಮಿಗೆ ಸೇರಿ 1975ರಲ್ಲಿ ಸೈನಿಕ ವಿಜ್ಞಾನ ಮತ್ತು ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದರು. ಆ ಹೊತ್ತಿಗಾಗಲೇ ರಾಜಕೀಯದಲ್ಲೂ ಆಸಕ್ತಿ ಬೆಳೆಸಿದ್ದ ಚಾವೆಝ್ ಕಾರಕಸ್‌ನ ಸೈಮನ್ ಬೊಲಿವರ್ ಯುನಿವರ್ಸಿಟಿಯಲ್ಲಿ ರಾಜಕೀಯ ಮೀಮಾಂಸೆಯ ಪದವಿಗೆ ಸೇರಿದರೂ ಅದನ್ನು ಪೂರ್ತಿಗೊಳಿಸಲಾಗಲಿಲ್ಲ. ಸೈಮನ್ ಬೊಲಿವರ್ ಯುನಿವರ್ಸಿಟಿಯ ರಾಜಕೀಯ ಶಾಸ್ತ್ರದ ಡ್ರಾಪ್ ಔಟ್ ವಿದ್ಯಾರ್ಥಿ ಹ್ಯೂಗೋ ಚಾವೆಝ್ ಮುಂದೊಂದು ದಿನ ಜಾಗತಿಕ ರಾಜಕೀಯದಲ್ಲಿ ದಮನಿತರ ಪಾಲಿನ ಗಟ್ಟಿಧ್ವನಿಯಾಗುವರು ಎಂದು ಯಾರೂ ನಿರೀಕ್ಷಿಸಿರಲಿಕ್ಕಿಲ್ಲ. ಈ ಹ್ಯೂಗೋ ಚಾವೆಝ್ ಡ್ರಾಪ್ ಔಟಾದ ಯುನಿವರ್ಸಿಟಿ ಲ್ಯಾಟಿನ್ ಅಮೆರಿಕಾದ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯ ಸೆಲೆಯಾಗಿದ್ದ ಸೈಮನ್ ಬೊಲಿವರ್‌ರ ಹೆಸರಿನಲ್ಲೇ ಇದೆ. ಜಗತ್ತಿನಾದ್ಯಂತದ ವಿಮೋಚನಾ ಹೋರಾಟಗಾರರ ಸಂಗಾತಿ ಆರ್ನೆಸ್ಟೊ ಚೆಗುವಾರ ಮತ್ತು ಕ್ಯೂಬಾದ ಕ್ರಾಂತಿ ಪುರುಷ ಫಿದೆಲ್ ಕ್ಯಾಸ್ಟ್ರೋರಂತೆಯೇ ಬೊಲಿವರ್ ಕೂಡಾ ಚಾವೆಝ್ ಪಾಲಿಗೆ ಸ್ಫೂರ್ತಿಯ ಬತ್ತದ ಸೆಲೆ. ಆದುದರಿಂದಲೇ ಚಾವೆಝ್ ತನ್ನ ನೆಚ್ಚಿನ ನಾಯಕನ ಹೆಸರಿನಲ್ಲೇ ಒಂದು ಕ್ರಾಂತಿಕಾರಿ ಚಳವಳಿಗೆ 1983 ಜುಲೈ 24ರಂದು ಮುನ್ನುಡಿ ಬರೆದರು. ಈ ಕ್ರಾಂತಿಕಾರಿ ಚಳವಳಿಕಾರರ ಗುಂಪಿನ ನೇತೃತ್ವ ವಹಿಸಿದ್ದ ಚಾವೆಝ್ ಸೈನಿಕನಾಗಿದ್ದಾಗ್ಯೂ ಹಂತಹಂತವಾಗಿಯೇ ಹೋರಾಟ ಕಟ್ಟಿದರು. 1989ರಲ್ಲಿ ಅಧ್ಯಕ್ಷ ಕಾರ್ಲೋಸ್ ಆಂಡರ್ಸ್ ಪೆರೆಸ್ ಅಂತಾರಾಷ್ಟ್ರೀಯ ಹಣಕಾಸು ನಿಧಿಯ ನೆರವು ಮತ್ತು ಕಾರ್ಯಸೂಚಿಯನ್ನು ಅಂಗೀಕರಿಸಿ ನಡೆಸಿದ ಚಟುವಟಿಕೆಗಳ ವಿರುದ್ಧ ಬಂಡಾಯವೇಳುವ ಮೂಲಕ ಚಾವೆಝ್ ತನ್ನ ಜನಪರ ರಾಜಕೀಯದ ಮೊದಲ ಬಹಿರಂಗ ನಡೆಯನ್ನು ಮುಂದಿಟ್ಟರು. ಕಾರ್ಲೋಸ್ ಆಂಡರ್ಸ್ ಪೆರೆಸ್ ಕೈಗೊಂಡ ನವ ಉದಾರವಾದಿ (Neo Liberal) ನೀತಿಯಿಂದಾಗಿ ಅಪಾರ ತೈಲ ಮತ್ತು ನೈಸರ್ಗಿಕ ಅನಿಲದ ಭಂಡಾರವಾಗಿದ್ದ ವೆನೆಝುವೆಲಾದಲ್ಲೇ ತೈಲ ಬೆಲೆ ಗಗನಕ್ಕೇರಿತು. ಸಹಜವಾಗಿಯೇ ಜನ ಕೆರಳಿ ಪ್ರತಿಭಟನೆಗಿಳಿದಾಗ ಪ್ರಭುತ್ವವು ಜನರನ್ನು ಕೊಂದು ಅವರ ಸಮಾಧಿಯ ಮೇಲೆಯೇ ತನ್ನ ನವ ಉದಾರವಾದಿ ನೀತಿಯ ಸೌಧ ಕಟ್ಟಲು ಹವಣಿಸಿತು. ಜನ ಬಗ್ಗಲಿಲ್ಲ. 400 ಜನ ಚಳವಳಿಗಾರರು ಪ್ರಭುತ್ವದ ಬಂದೂಕಿಗೆ ಎದೆಯೊಡ್ಡಿದರು. 400 ಮಂದಿ ಹೋರಾಟಗಾರರ ಬಲಿದಾನವು ಜನರಲ್ಲಿ ರೋಷದ ಕಿಚ್ಚನ್ನು ಇಮ್ಮಡಿಗೊಳಿಸಿತೇ ಹೊರತು ಜನರ ನ್ಯಾಯಯುತ ಧ್ವನಿಯನ್ನು ಅಡಗಿಸಲು ಪ್ರಭುತ್ವಕ್ಕೆ ಸಾಧ್ಯವಾಗಲಿಲ್ಲ.

ದಿನೇದಿನೇ ಹೆಚ್ಚಿದ ಪ್ರಭುತ್ವದ ವಿರುದ್ಧದ ಜನರ ಆಕ್ರೋಶವನ್ನು ಚೆನ್ನಾಗಿಯೇ ಬಳಸಿಕೊಂಡ ಚಾವೆಝ್ 1992ರ ಫೆಬ್ರವರಿ ನಾಲ್ಕರಂದು ಸೇನಾ ಬಂಡಾಯದ ಯತ್ನಕ್ಕೆ ಕೈ ಹಾಕಿದರು. ಪ್ರಭುತ್ವ ಹದಿನೆಂಟು ಮಂದಿ ಬಂಡಾಯಗಾರರ ಎದೆಗೆ ಬಂದೂಕಿಟ್ಟಿತು. ಹದಿನೆಂಟು ಬಂಡಾಯಗಾರರ ಬಲಿದಾನ ವ್ಯರ್ಥವಾಗಲಿಲ್ಲ. ಚಾವೆಝ್‌ರನ್ನು ಜೈಲಿಗೆ ತಳ್ಳಲಾಯಿತು. ತನ್ನ ಬೆಂಬಲಿಗರನ್ನು ಶರಣಾಗುವಂತೆ ಒತ್ತಾಯಿಸಲು ಚಾವೆಝ್‌ರ ಮೇಲೆ ಪ್ರಭುತ್ವ ಒತ್ತಡ ಹೇರಿತು. ಹಠಮಾರಿ, ಮಹಾಮೊಂಡ ಚಾವೆಝ್ ಪ್ರಭುತ್ವದ ಒತ್ತಡಕ್ಕೆ ಮಣಿಯಲಿಲ್ಲ. 1992ರ ನವೆಂಬರ್‌ನಲ್ಲಿ ಚಾವೆಝ್ ಕಂಬಿಯೊಳಗಿದ್ದಾಗ್ಯೂ ಹೋರಾಟಗಾರರು ದಾಳಿ ಮಾಡಿ ಟಿ.ವಿ. ಕೇಂದ್ರವನ್ನು ವಶಪಡಿಸಿಕೊಂಡರು. ಚಾವೆಝ್ ಜೈಲಿನ ಕತ್ತಲೆ ಕೋಣೆಯೊಳಗೆ ಬಂಧಿಯಾಗಿದ್ದರೂ ಅವರು ಹೊತ್ತಿಸಿದ ಬಂಡಾಯದ ಕಿಡಿ ವೆನೆಝುವೆಲಾದಾದ್ಯಂತ ಜ್ವಾಲಾಮುಖಿಯಂತೆ ಹಬ್ಬಿತು. ಮುಂದಿನ ಚುನಾವಣೆಯಲ್ಲಿ ತನ್ನ ಜನವಿರೋಧಿ, ಬಂಡವಾಳಶಾಹಿಗಳ ಪರವಾದ ನೀತಿ ಮತ್ತು ಜನಪರ ಹೋರಾಟಗಾರ ಚಾವೆಝ್‌ರ ಬಂಧನ ಇವೆಲ್ಲವೂ ಒಟ್ಟು ಸೇರಿ ಕಾರ್ಲೋಸ್ ಆಂಡರ್ಸ್ ಪೆರೆಸ್‌ಗೆ ಮನೆಯ ದಾರಿ ತೋರಿಸಿತು. ನೂತನ ಅಧ್ಯಕ್ಷರಾಗಿ ಚುನಾಯಿತರಾದ ರಫಾಯಿಲ್ ಕ್ಯಾಡ್ರಿಯಾ ಚಾವೆಝ್‌ರನ್ನು ಬಿಡುಗಡೆಗೊಳಿಸಿದರು. ಜೈಲಿನಿಂದ ಹೊರಬಂದದ್ದೇ ತಡ ಚಾವೆಝ್ ತನ್ನ ಜನಪರವಾದ ಧ್ವನಿಯನ್ನು ವೆನೆಝುವೆಲಾದ ಮೂಲೆಮೂಲೆಗೂ ಹಬ್ಬಿಸಿದರು. 1998ರ ಹೊತ್ತಿಗೆಲ್ಲಾ ಚಾವೆಝ್ ಲ್ಯಾಟಿನ್ ಅಮೆರಿಕದಾದ್ಯಂತ ಮನೆಮಾತಾಗಿದ್ದರು. 1998ರ ಚುನಾವಣೆಯಲ್ಲಿ ಚಾವೆಝ್ ಪ್ರಚಂಡ ಬಹುಮತದೊಂದಿಗೆ ವೆನೆಝುವೆಲಾದ ಅಧ್ಯಕ್ಷರಾಗಿ ಆಯ್ಕೆಯಾಗುತ್ತಲೇ ಇತ್ತ ಬಂಡವಾಳಶಾಹಿಗಳ, ಭೂಮಾಲೀಕರ ಎದೆಯಲ್ಲಿ ಅವಲಕ್ಕಿ ಕುಟ್ಟಿದ ಅನುಭವವಾಗತೊಡಗಿತು. ವೆನೆಝುವೆಲಾದಲ್ಲಿ ಒಂದೆಡೆ ಉಳ್ಳಿಗಮಾನ್ಯ ಶಕ್ತಿಗಳ ಕೈಯಲ್ಲಿ ಸಾವಿರಾರು ಎಕರೆ ಜಮೀನುಗಳಿದ್ದರೆ, ಇನ್ನೊಂದೆಡೆ ಜನ ತುತ್ತು ಕೂಳಿಗೂ ಪರದಾಡುತ್ತಿದ್ದರು. ಇಂತಹ ಅಸಮಾನತೆಯನ್ನು ನೀಗಿಸಲೆಂದೇ ಅಧಿಕಾರಕ್ಕೇರಿದ ಚಾವೆಝ್ ತಡಮಾಡದೆ ದುಡಿವ ಜನಕ್ಕೆ ಭೂಮಿ ಹಂಚಿದರು. ತನ್ಮೂಲಕ ಜನರ ಜೀವನಮಟ್ಟ ಸುಧಾರಿಸುವಲ್ಲಿ ಕೆಲವೇ ವರ್ಷಗಳಲ್ಲಿ ಚಾವೆಝ್ ಯಶಸ್ಸು ಕಂಡರು. ಚಾವೆಝ್ ಅಧಿಕಾರಕ್ಕೇರುವ ಸಂದರ್ಭದಲ್ಲಿ ವಿನಾಶದಂಚಿಗೆ ತಲುಪಿದ್ದ ಕೃಷಿಕ್ಷೇತ್ರದಲ್ಲಿ ವ್ಯಾಪಕ ಸುಧಾರಣೆ ತಂದು ವೆನೆಝುವೆಲಾದ ನೆಲವು ಹಸಿರಿನಿಂದ ಜೀವಕಳೆ ಪಡೆಯುವಂತೆ ಮಾಡಿದರು. ದೇಶ ಶೇಕಡಾ 70ರಷ್ಟು ಆಹಾರ ಧಾನ್ಯಗಳ ಬೇಡಿಕೆಗೆ ಆಮದನ್ನೇ ಅವಲಂಬಿಸಿತ್ತು, ಚಾವೆಝ್ ಅಧಿಕಾರಕ್ಕೇರಿದ ಕೆಲವೇ ವರ್ಷಗಳಲ್ಲಿ ವೆನೆಝುವೆಲವೇ ಇತರ ರಾಷ್ಟ್ರಗಳಿಗೆ ರಫ್ತು ಮಾಡುವ ಮಟ್ಟಕ್ಕೆ ಬೆಳೆಯಿತು.

ಬಿ.ಟಿ. ಬಿ.ಟಿ. ಎಂದು ಅರಚುತ್ತಾ ಜನರನ್ನು ವಂಚಿಸುತ್ತಿದ್ದ ಅಂತಾರಾಷ್ಟ್ರೀಯ ಬೀಜ ಕಂಪೆನಿಗಳು ವೆನೆಝುವೆಲಾದ ಮಣ್ಣನ್ನು ಬಂಜೆಯಾಗಿಸುತ್ತಾ ತನ್ನ ತಿಜೋರಿ ತುಂಬಿಸುತ್ತಿರುವ ಸತ್ಯವನ್ನರಿತ ಚಾವೆಝ್ ಅವುಗಳನ್ನು ಒದ್ದೋಡಿಸಿದರು.

ಬಡವರಿಗೆ ಗಗನಕುಸುಮವಾಗಿದ್ದ ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ಜನರ ಮನೆಬಾಗಿಲಿಗೆ ಕೊಂಡೊಯ್ದರು. ಕೆಲವೇ ವರ್ಷಗಳಲ್ಲಿ ಸಾಕ್ಷರತೆಯ ಪ್ರಮಾಣ ಸಮರೋಪಾದಿಯಲ್ಲಿ ಏರಿತು. ತನ್ನ ಗುರು ಫಿದೆಲ್ ಕ್ಯಾಸ್ಟ್ರೋರ ಹಾದಿಯನ್ನೇ ಅನುಸರಿಸಿ ಚಾವೆಝ್ ಆರೋಗ್ಯ ಸೇವೆಯಲ್ಲಿ ವ್ಯಾಪಕವಾದ ಸುಧಾರಣೆ ತಂದರು.

ಲ್ಯಾಟಿನ್ ಅಮೆರಿಕಾದಾದ್ಯಂತ ಚಾವೆಝ್ ಎಷ್ಟು ಪ್ರಭಾವಶಾಲಿ ನಾಯಕನೆಂದರೆ ಲ್ಯಾಟಿನ್ ಅಮೆರಿಕದಲ್ಲಿ (ಕ್ಯೂಬಾ ಮತ್ತು ಬೊಲಿವಿಯಾ ಹೊರತುಪಡಿಸಿ) ಅಮೆರಿಕನ್ ಡಾಲರ್‌ನ ವಿರುದ್ಧ ಜನಜಾಗೃತಿ ಮೂಡಿಸುವಲ್ಲಿ ಚಾವೆಝ್ ಪಾತ್ರ ಹಿರಿದು. "ಡಾಲರ್ ಬಳಕೆ ಎಂದರೆ ನಮ್ಮ ಕರೆನ್ಸಿಯನ್ನು ಹಿಂದಕ್ಕೆ ತಳ್ಳಿದಂತೆ" ಎಂದು ಅಮೆರಿಕನ್ ಡಾಲರ್ ಬಳಕೆಯ ವಿರುದ್ಧ ಕಟುವಾಗಿ ಧ್ವನಿಯೆತ್ತಿ ಅಮೆರಿಕದ ಬುಡಕ್ಕೆ ಕೈಹಾಕಿದರು.

"ಲ್ಯಾಟಿನ್ ಅಮೆರಿಕದ ದೇಶಗಳು ಅಂತಾರಾಷ್ಟ್ರೀಯ ಹಣಕಾಸು ನಿಧಿಗೆ ದಾಸರಾಗುವುದು ನಮ್ಮ ರಾಷ್ಟ್ರದ ಸ್ವಾಭಿಮಾನವನ್ನು ಅಮೆರಿಕಕ್ಕೆ ಅಡವಿಟ್ಟಂತೆ. ನಾವು ನಮ್ಮದೇ ಲ್ಯಾಟಿನ್ ಅಮೆರಿಕನ್ ಬ್ಯಾಂಕ್ ಸ್ಥಾಪಿಸೋಣ" ಎಂದು ಲ್ಯಾಟಿನ್ ಅಮೆರಿಕದ ಸ್ವಾಭಿಮಾನದ ಮಹಾಪ್ರತೀಕವೆನಿಸಿದರು. ತೃತೀಯ ಜಗತ್ತಿನ ರಾಷ್ಟ್ರಗಳು ಹಾಗೂ ಬಡ ದೇಶಗಳು ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಗುಲಾಮರಾಗಿ ತಮ್ಮ ಆತ್ಮಗೌರವಕ್ಕೆ ಧಕ್ಕೆ ತರಬಾರದೆಂದು ಜಗತ್ತಿಗೆ ಕರೆ ನೀಡಿದರು.

ಈ ಚಾವೆಝ್ ಎಂಬ ಎಡಪಂಥೀಯ ದೈತ್ಯ ಅಧಿಕಾರಕ್ಕೇರಿದಂದಿನಿಂದ ಲ್ಯಾಟಿನ್ ಅಮೆರಿಕದಲ್ಲಿ ತನ್ನ ವಿರೋಧೀ ಪಾಳಯಕ್ಕೆ ಮತ್ತಷ್ಟು ಬಲಬಂದಿದ್ದು ಅಮೆರಿಕಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿತು. ಲೂಟಿ ಮಾಡುವುದು ತನ್ನ ಪರಮ ಹಕ್ಕೆಂದೇ ಬಗೆದಿದ್ದ ಅಮೆರಿಕಕ್ಕೆ ತೈಲಸಂಪತ್ತು ತನ್ನ ಕೈ ತಪ್ಪುತ್ತಿರುವುದನ್ನು ಅರಗಿಸಿಕೊಳ್ಳಲಾಗಲಿಲ್ಲ. ಎಷ್ಟೇ ಬೆಲೆ ತೆತ್ತಾದರೂ




ಚಾವೆಝ್‌ರನ್ನು ಅಧಿಕಾರದಿಂದ ಕಿತ್ತೊಗೆಯಬೇಕೆಂದು ಅ... ತಹತಹಿಸತೊಡಗಿತು. 2002ರ ಎಪ್ರಿಲ್‌ನಲ್ಲಿ ಸ್ಥಳೀಯ ತೈಲ ಕಂ... ಅಮೆರಿಕಾದ ಕುತಂತ್ರದಿಂದ ಬಂಡಾಯವೆದ್ದವು. ಚಾವೆಝ್ ... ವೆನೆಝುವೆಲಾದ ಜನತೆ ಬಂಡೆಯಂತೆ ನಿಂತರು. ಈ ಸಂದರ್ಭದಲ್ಲಿ ... ಗುಂಡಿನ ಚಕಮಕಿಯಲ್ಲಿ ಹದಿನೆಂಟು ಮಂದಿ ಪ್ರಾಣ ತೆತ್ತರು. ಅವ... ಕುತಂತ್ರದಿಂದುಂಟಾದ ಸಂಘರ್ಷವು ತಾರಕಕ್ಕೇರುತ್ತಿದ್ದಂತೆ ರಕ್ಷಣೆಯ ... ಚಾವೆಝ್‌ರನ್ನು ಅಜ್ಞಾತ ಸ್ಥಳದಲ್ಲಿಟ್ಟಾಗ ವೆನೆಝುವೆಲಾದ ಜನತೆ ... "ನಮ್ಮ ಚಾವೆಝ್" ಹೊರತಾದ ಇನ್ನೊಬ್ಬ ಅಧ್ಯಕ್ಷ ಬೇಡವೇ ಬೇಡ ... ಸ್ಪಷ್ಟ ಸಂದೇಶವನ್ನು ಅಮೆರಿಕ ಎಂಬ ಲೂಟಿಕೋರ, ಸ್ವೇಚ್ಛಾ... ರವಾನಿಸಿದರು. ಚಾವೆಝ್ ಪರವಾಗಿ ಜನರ ಅಭೇದ್ಯ ಧ್ವನಿ ಮತ್ತು ... ಅಮೆರಿಕಾದ ಬೊಲಿವಿಯಾ, ಕ್ಯೂಬಾ, ಬ್ರೆಜಿಲ್ ಮುಂತಾದ ರ... ಚಾವೆಝ್‌ರ ಬೆನ್ನಿಗೆ ಗಟ್ಟಿಯಾಗಿ ನಿಂತಿರುವುದು ಅಮೆರಿಕ ಪತರಗು... ಮಾಡಿತು. ಅಮೆರಿಕಾದ ಕುತಂತ್ರ ವಿಫಲವಾಯಿತು. ಅಮೆರಿಕಾದ ... ಚಾವೆಝ್ ಓರ್ವ ಜಾಗತಿಕ ಪುಂಡ. ಸಾಮ್ರಾಜ್ಯಶಾಹಿಗಳ ಪುಂಗಿ ... ಮಾಧ್ಯಮಗಳು ಚಾವೆಝ್‌ರನ್ನು 'ವಿವಾದಾತ್ಮಕ ಹೇಳಿಕೆಗಳ ದಂತಕತೆ' ಬಣ್ಣಿಸುತ್ತವೆ. ಅವರ ಪಾಲಿಗೆ ವಿವಾದಾತ್ಮಕವಾದರೂ ನ್ಯಾಯ ನಿ... ಪಾಲಿಗೆ ಚಾವೆಝ್‌ರ ಹೇಳಿಕೆಗಳು ಅತ್ಯಂತ ಪ್ರಿಯವಾದುದು.

ಚಾವೆಝ್‌ರ ಕೆಲವು ನಿರ್ಭೀತ ಹೇಳಿಕೆಗಳ...

- ಅಮೆರಿಕಾದ ದುಷ್ಟಾತಿದುಷ್ಟ ಅಧ್ಯಕ್ಷ ಜಾರ್ಜ್ ಬುಷ್ ಅಫ... ಬಡಪಾಯಿಗಳ ಮೇಲೆ ಯುದ್ಧ ಸಾರಿದಾಗ ಚಾವೆಝ್ ಬುಷ್‌ನನ... ಎಂದು ಬೈದರು. ಇದಕ್ಕೆ ಬುಷ್ ಪರ ಮಾಧ್ಯಮಗಳಲ್ಲಿ ವ್ಯಾಪ... ವ್ಯಕ್ತವಾಯಿತು. ಇಷ್ಟಕ್ಕೂ ಸುಮ್ಮನಾಗದ ಚಾವೆಝ್ "ಭಯೋತ್ಪಾದ... ಭಯೋತ್ಪಾದಕ ಯುದ್ಧ' ಎಂದು ಕಟುವಾಗಿ ಟೀಕಿಸಿದರು.

- 2007ರ ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಚಾವೆಝ್ ...



ಭಾಷಣದುದ್ದಕ್ಕೂ ಬುಷ್‌ನನ್ನು ಬಾರಿಬಾರಿಗೂ ಭಯೋತ್ಪಾದಕ ಎಂದು ಜಾಗತಿಕ ಸ್ವೇಚ್ಛಾಧಿಪತಿಯೆಂಬ ಪದವನ್ನೂ ಅನೇಕ ಬಾರಿ ಬುಷ್... ಪ್ರಯೋಗಿಸಿದರು.

- ಚಾವೆಝ್ ಭಾಷಣ ಮಾಡುವ ಹಿಂದಿನ ದಿನ ಅಲ್ಲಿ ಜಾರ್ಜ್... ಭಾಷಣ ಮಾಡಿದ್ದ. "ನಿನ್ನೆ ಇಲ್ಲಿಗೆ ಪಿಶಾಚಿ ಬಂದಿತ್ತು, ಅದರ ವಾಸನೆ ಇನ್ನೂ ಇಲ್ಲೇ ಇದೆ" ಎಂದು ಬುಷ್‌ನ ನೆಲದಲ್ಲೇ ಹಿಗ್ಗಾಮುಗ್ಗಾ ಬೈದರು. ಆ ಭಾಷಣದಲ್ಲಿ ಮತ್ತೂ ಮುಂದುವರಿದು, ಪಿಶಾಚಿಯೆಂದು ವರ್ಣಿಸುತ್ತಿರುವ ಅಮೆರಿಕದ ಅಧ್ಯಕ್ಷರು ನಿನ್ನೆ ಈ ವೇ... ಮಾಡಿದ ಭಾಷಣವನ್ನು ಮನಶಾಸ್ತ್ರಜ್ಞರ ವಿಶ್ಲೇಷಣೆಗೆ ಒಪ್ಪಿಸಬೇಕು" ಬುಷ್‌ನ ಮಾನಸಿಕ ಸ್ವಾಸ್ಥ್ಯದ ಕುರಿತಂತೆ ಚಾವೆಝ್ ಸಂಶಯ ವ್ಯಕ್ತಪ...

ಇಂತಹ ನಿರ್ಭೀತ ಮಾತುಗಳ ಸರದಾರ ತನ್ನ ದೇಹವನ್ನು ... ಕ್ಯಾನ್ಸರ್ ಖಾಯಿಲೆಯನ್ನು (ಕ್ಯೂಬಾದ ಆಸ್ಪತ್ರೆಯೊಂದರಲ್ಲಿ) ಮತ್ತು ತ... ಪ್ರೀತಿ, ವಿಶ್ವಾಸವನ್ನು ಗೆದ್ದು ಪುನಃ ವೆನೆಝುವೆಲಾದ ಅಧ್ಯಕ್ಷರಾಗಿ ಆಯ್ಕೆಯಾ... ಚಾವೆಝ್ ಸತತ ನಾಲ್ಕನೇ ಬಾರಿ ವೆನೆಝುವೆಲಾದ ಅ... ಚುನಾಯಿತರಾಗುತ್ತಿರುವುದು, ಕ್ಯೂಬಾದಲ್ಲಿ ಕ್ರಾಂತಿಯ ಬಳಿಕ ಸಮ... ಪ್ರಜಾತಂತ್ರಕ್ಕೆ ಸೋಲೆಂಬುದು ಮರೆತೇ ಹೋಗಿರುವುದು, ಬೊಲಿವಿ... ಆದಿವಾಸಿಗಳ ನಾಯಕ ಇವೋಮೋರೆಲ್ಸ್ ಕಳೆದೊಂದು ದಶಕದಿ... ಜನಮೆಚ್ಚುಗೆಯ ಆಡಳಿತ ನೀಡುತ್ತಿರುವುದು ಇವೆಲ್ಲವೂ ಲ್ಯಾಟಿನ್ ಅಮೆ... ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ಶಕ್ತಿಗಳಿಗೆ ಶಾಶ್ವತವಾಗಿ ಬಾಗಿಲು ಮು... ಲಕ್ಷಣ ಎಂದು ಬೇರೆ ಹೇಳಬೇಕಾಗಿಲ್ಲ. ಸಿಲ್ವಿಯೋ ರಾಡ್ರಿಗಸ್‌ರ ... ಲ್ಯಾಟಿನ್ ಅಮೆರಿಕದಲ್ಲಂತೂ ನಿಜವಾಗುತ್ತಿದೆ.

■ ಇಸ್ಮತ್ ಫ...


ರಾಮರಾಜ್ಯ ಮತ್ತು ಗ್ರಾಮ ಸ್ವರಾಜ್ಯ

...ರ್ನಾಟಕದಲ್ಲೀಗ ರಾಮರಾಜ್ಯ ತರುವವರು ಅಧಿಕಾರಕ್ಕೆ ...ಐದನೇ ವರ್ಷ. ರಾಮರಾಜ್ಯದವರ ಆಳ್ವಿಕೆಯಲ್ಲಿ ...ರಾಜ್ಯ ಎಲ್ಲಿಗೆ ತಲುಪಿದೆ ಎಂಬುದಕ್ಕೆ ನಮ್ಮೂರೊಂದು ...ಉದಾಹರಣೆ. ಹಾಸನ ಜಿಲ್ಲೆಯ ಸಕಲೇಶಪುರ ...ಕಿನ ಕ್ಯಾಮನಹಳ್ಳಿ ಪಂಚಾಯತ್ ಏಳು ಗ್ರಾಮಗಳು ...ರುವ ಒಂದು ಗ್ರೂಪ್ ಪಂಚಾಯತ್. ಮೂರು ...ಗಳ ಹಿಂದೆ ಗ್ರಾಮ ಪಂಚಾಯತ್ ಚುನಾವಣೆ ...ಾಗ ಹದಿಮೂರು ಜನ ಸದಸ್ಯರಿರುವ ಈ ...ಯತಿಗೆ ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿಯಿಂದ ...ರಾಗಿ ಸಮಾನ ಸಂಖ್ಯೆಯ ಸದಸ್ಯರು ಆರಿಸಿಬಂದಿದ್ದರು. ...ಹಿಂದೆಲ್ಲಾ ಪಂಚಾಯತ್ ಚುನಾವಣೆಯೆಂದರೆ ...ಗಟ್ಟಲೆ ಕಾಲ ಹಳ್ಳಿಗಳು ಬಿಗುವಿನಲ್ಲಿರುತ್ತಿದ್ದರಿಂದ ...ವಾರಿ ನಮ್ಮೂರಿನ ಮಟ್ಟಿಗಾದರೂ ಜಗಳ ಬೇಡವೆಂದು ...ನ ಹಿರಿಯರು ಹಾಗೂ ರಾಜಕೀಯ ಕಾರ್ಯಕರ್ತರು ...ಒಮ್ಮತದಿಂದ ಅಧ್ಯಕ್ಷ-ಉಪಾಧ್ಯಕ್ಷರನ್ನು ...ದೆವು. ಉನ್ನತ ಶಿಕ್ಷಣ ಪಡೆದ ನಿವೃತ್ತ ...ರೊಬ್ಬರು ಪಂಚಾಯತ್ ಅಭಿವೃದ್ಧಿ ...ತರಿಯಾಗಿ ಬಂದಾಗ ನಾವೆಲ್ಲ ನಮ್ಮ ...ರಾಜ್ಯ ರಾಮರಾಜ್ಯವಾಗುವ ದಿನವನ್ನು ...ತ್ತ ಕುಳಿತೆವು.

...ಮ್ಮ ತಾಲ್ಲೂಕಿನಲ್ಲಿ - ಅದರಲ್ಲೂ ನಮ್ಮ ...ಯತ್‌ನ ಗಡಿಯಲ್ಲೇ - ಹೇಮಾವತಿ ...ಹರಿಯುವುದರಿಂದ ಅನೇಕ ಪಂಚಾಯತ್ ...ನದಿ ಮರಳಿನ ಟೆಂಡರ್ ಹಣ ಬರುತ್ತದೆ. ...ಟೆಂಡರ್ ನಿಂತಿದ್ದರೂ ಎರಡು ವರ್ಷದ ...ನಮ್ಮ ಪಂಚಾಯತಿಗೆ ಬಂದ ಮರಳಿನ ...ಹಾನವೇ ಸುಮಾರು ಮೂವತ್ತೇಳು ಲಕ್ಷ ...ಾಯಿಗಳು! ಇನ್ನು ರಾಜ್ಯ-ಕೇಂದ್ರ ಸರ್ಕಾರಗಳ ಬೇರೆ ...ಯೋಜನೆಗಳ ಮೊತ್ತ ಸೇರಿದರೆ ಕೋಟಿಯನ್ನು ...ತ್ತಿತ್ತು.

...ಷಧಾದನಂತರ ಎಲ್ಲರೂ ರಾಜ್ಯ ರಾಜಕೀಯದ ನಿತ್ಯ ...ನಗಳನ್ನು ಮತ್ತು ಕೇಂದ್ರದ ರಾಮಲೀಲಾಗಳನ್ನೂ ...ಯಲ್ಲಿ ರೋಚಕವಾಗಿ ನೋಡುತ್ತಾ ಮೈಮರೆತದ್ದರಿಂದ ...ಪಂಚಾಯತಿಯನ್ನು ಮರೆತುಬಿಟ್ಟರು. ಒಂದು ...ಕಳೆಯುವಷ್ಟರಲ್ಲಿ ಪಂಚಾಯತಿಯಲ್ಲಿ ಬಡವರಿಗೆ ...ಸಿಗುತ್ತಿಲ್ಲ, ಕುಡಿಯಲು ನೀರೂ ಇಲ್ಲ, ಪಂಚಾಯತ್ ...ಜ್ಞಾ ಖಾಲಿಯಾಗಿದೆ ಎಂಬ ದೂರು ಪ್ರಾರಂಭ ...ಯಿತು. ನಮ್ಮೂರಿನ ಅತ್ಯುತ್ಸಾಹಿ ಯುವಕರೊಬ್ಬರು ...ಲ್ಲಿ ಕೊನೆ ಹಾಡುತ್ತೇನೆ' ಎಂದು ಮಾಹಿತಿ ಹಕ್ಕು ...ದೆ ಪ್ರಕಾರ ದಾಖಲೆಗಳನ್ನು ತೆಗೆದರು. ದಾಖಲೆಗಳ ...ವ ಪಂಚಾಯತಿಯ ಎಲ್ಲ ಯೋಜನೆಗಳಲ್ಲೂ ...ಚಾರ ನಡೆದಿರುವುದು ಮೇಲ್ನೋಟಕ್ಕೇ ಕಾಣುತ್ತಿತ್ತು. ...ಗ ಖಾತ್ರಿ ಯೋಜನೆಯಂತೂ 'ಅವ್ಯವಹಾರ ಖಾತ್ರಿ ಯೋಜನೆ'ಯಾಗಿತ್ತು, ಮರಳಿನ ಹಣ ನೀರಿನಂತೆ ಇಂಗಿ ಹೋಗಿತ್ತು.

ಅವ್ಯವಹಾರಗಳ ಬಗ್ಗೆ ಒಂದು ಪತ್ರಿಕಾಗೋಷ್ಠಿಯೂ ನಡೆಯಿತು. ಎಂಟು ದಿನಗಳಕಾಲ ನಿರಂತರ ಸುದ್ದಿ ಮಾಡುತ್ತೇನೆಂದು ಹೊರಟ ಸುದ್ದಿವೀರರು ಎರಡನೇ ದಿನಕ್ಕೆ ತೆಪ್ಪಗಾದರು. ತೆರೆಮರೆಯಲ್ಲಿ ರಾಜೀ ಸಂಧಾನಗಳು ನಡೆದವು. ಪತ್ರಕರ್ತರ ಪೆನ್ನಿನಲ್ಲಿ ಇಂಕು ಖಾಲಿಯಾಯಿತು. ಜಿಲ್ಲಾ ಪಂಚಾಯತಿಗೆ ನೀಡಿದ ದೂರು ಕಡತ ವಿಲೇವಾರಿ ಯಾಯಿತು. ಲೋಕಾಯುಕ್ತಕ್ಕೆ ಹೋಗುತ್ತೇನೆಂದು ಹೊರಟ ಕೆಲವರು ತಣ್ಣಗೆ ಕುಳಿತರು.



ಅರ್ಧಕ್ಕೇ ನಿಂತಿರುವ ಹೊಸ ಕಟ್ಟಡ (ಕಳಪೆ ಕಾಮಗಾರಿ)



ಹಾಳು ಬಿದ್ದಂತಿರುವ ಪಂಚಾಯತ್ ಕಚೇರಿ

ಅಷ್ಟರಲ್ಲಿ ರಾಜ್ಯದಲ್ಲಿ ಯಡಿಯೂರಪ್ಪನವರು ಹೋಗಿ ಸದಾನಂದ ಗೌಡರ ಸರ್ಕಾರ ಬಂತು. ಸಕಲೇಶಪುರದಲ್ಲಿ ಸದಾನಂದ ಗೌಡರ ಕಾರ್ಯಕ್ರಮವಿತ್ತು. ಆ ದಿನ ಹೇಗೋ ಮುಖ್ಯಮಂತ್ರಿಗಳ ಭೇಟಿಯ ಅವಕಾಶ ಪಡೆದ ಗ್ರಾಮಸ್ಥರು, ಪಂಚಾಯತಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ದೂರು ನೀಡಿ ಎಲ್ಲ ಮಾಹಿತಿಗಳ ಕಡತವನ್ನು ಒಪ್ಪಿಸಿದರು. ಮುಖ್ಯಮಂತ್ರಿಗಳು ವೀರಾವೇಶದಿಂದ 'ಇಂತಹ ಅನ್ಯಾಯವನ್ನು ಸಹಿಸಲು ಸಾಧ್ಯವಿಲ್ಲ, ಕೂಡಲೇ ಕಠಿಣ ಕ್ರಮ ಕೈಗೊಳ್ಳಿ' ಎಂದು ಆದೇಶ ನೀಡಿ ಹೋದರು. ಅಲ್ಲಿಂದ ಮುಂದೆ, ದೂರು ನೀಡಿದವರು ಗೇಲಿಗೊಳಗಾಗಿ ನಮ್ಮ ಪಂಚಾಯತ್‌ನಲ್ಲಿ ಓಡಾಡುವುದೇ ಕಠಿಣವಾಗಿಬಿಟ್ಟಿತು. ಕಡತ ಎಲ್ಲಿಗೆ ಹೋಯಿತೋ ತಿಳಿಯದು.

ಈಗ ಕೆಲವು ದಿನಗಳ ಹಿಂದೆ ಮನೆ ಸಿಕ್ಕದಿರುವ ಬಡವನೊಬ್ಬ ಪಂಚಾಯತ್ ಸದಸ್ಯನೊಬ್ಬನಿಗೆ ವಾಚಾಮಗೋಚರವಾಗಿ ಬೈದದ್ದರಿಂದ ಅವನಿಗೆ ಅಸಾಧ್ಯ ಸಿಟ್ಟು ಬಂದು ಟಿವಿಯಲ್ಲಿ ಬರುತ್ತಿದ್ದ ರೋಚಕ ಸುದ್ದಿಗಳನ್ನೆಲ್ಲ ಬದಿಗಿಟ್ಟು, ಪಂಚಾಯತಿ ಕಚೇರಿಗೆ ಹೋಗಿ ತನಗೆ ತಿಳಿದಷ್ಟು ಮಾಹಿತಿ ಕಲೆಹಾಕಿದ. ಆನಂತರ ಅದು ಹೇಗೂ ಕೆಲವು ಸದಸ್ಯರುಗಳನ್ನು ಹಿಡಿದುತಂದ, ಎಲ್ಲರೂ ಸೇರಿ ಪಂಚಾಯತ್ ಅವ್ಯವಹಾರಗಳ ತನಿಖೆಯಾಗಬೇಕೆಂದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಿಗೆ ದೂರು ಕೊಟ್ಟರು.

"ಗ್ರಾಮ ಪಂಚಾಯತಿಯ ಸದಸ್ಯರು ಹೇಳಿದಾಕ್ಷಣ ತನಿಖೆ ನಡೆಸಲು ಬರುವುದಿಲ್ಲ, ನೀವು ನಿರ್ದಿಷ್ಟವಾದ ಪ್ರಕರಣಗಳಿದ್ದರೆ ತಿಳಿಸಿ" ಎಂದು ತಾಲ್ಲೂಕು ಪಂಚಾಯತಿಯ ಖಾವಂದರು ಅಪ್ಪಣೆ ಕೊಡಿಸಿದರು. ನಂತರ ಗ್ರಾಮದ ಹಲವರು ಹಿರಿಯರೂ ಸೇರಿ ಒತ್ತಡ ತಂದದ್ದರಿಂದ ಇಡೀ ಪಂಚಾಯತ್‌ನ ತನಿಖೆ ಅವಸರದಲ್ಲಿ ಸಾಧ್ಯವಿಲ್ಲ, ಕೆಲವು ನಿರ್ದಿಷ್ಟ ಪ್ರಕರಣಗಳ ಬಗ್ಗೆ ಮಾತ್ರ ತನಿಖೆ ನಡೆಸುವುದೆಂದು ತೀರ್ಮಾನವಾಗಿ ಒಬ್ಬ ತನಿಖಾಧಿಕಾರಿಯನ್ನು ನೇಮಿಸಿದರು.

ನಮ್ಮ ಗ್ರಾಮ ಪಂಚಾಯತ್ ದಟ್ಟ ಮಲೆನಾಡಿನ ಪ್ರದೇಶದಲ್ಲಿರುವುದರಿಂದ ಇಲ್ಲಿ ಮನೆಗಳನ್ನೂ, ಮನುಷ್ಯರನ್ನೂ ಹುಡುಕಿಯೇ ಗುರುತಿಸಬೇಕಾಗುತ್ತದೆ. ಆದ್ದರಿಂದ ಕೊನೆಗೆ ಪಂಚಾಯತ್‌ನ ಒಂದು ಗ್ರಾಮದ, ಒಂದು ವಾರ್ಡಿನ ಹತ್ತು ಆಶ್ರಯ ಯೋಜನೆ ಮನೆಗಳ ಬಗ್ಗೆ ಹಾಗೂ ನಿರ್ಮಲಗ್ರಾಮ ಯೋಜನೆಯ ಐವತ್ತೊಂದು ಶೌಚಾಲಯಗಳ ಬಗ್ಗೆ ಮಾತ್ರ ತನಿಖೆ ನಡೆಯಿತು. ಇವೆಲ್ಲ ಕಾಮಗಾರಿ ಪೂರ್ಣಗೊಂಡು ಬಿಲ್ ಪಾವತಿಯಾದಂತಹವುಗಳು (ಈ ಬಗ್ಗೆ ಅಧಿಕೃತ ದಾಖಲೆ ಇದೆ).

ತನಿಖೆ ನಡೆದಾಗ ಐವತ್ತೊಂದು ಶೌಚಾಲಯಗಳ ಪೈಕಿ ಎರಡು ಮಾತ್ರ ಅಸ್ತಿತ್ವದಲ್ಲಿ ಇದ್ದವು! ಉಳಿದ ನಲವತ್ತೊಂಬತ್ತು ಶೌಚಾಲಯಗಳು ದಾಖಲೆಗಳಲ್ಲಿ ಮಾತ್ರ ಇದ್ದವು!! ಆದರೆ ಅಷ್ಟಕ್ಕೂ ಕೃತಕ ದಾಖಲೆಗಳನ್ನು ಸೃಷ್ಟಿಸಲಾಗಿತ್ತು, ಕಾಫಿ ಪ್ಲಾಂಟರುಗಳ ಹೆಸರಿನಲ್ಲೂ ಶೌಚಾಲಯ ಮಂಜೂರಾಗಿ, ನಕಲಿ ಸಹಿ ಬಳಸಿ ಹಣ ಪಡೆಯಲಾಗಿತ್ತು, ಹತ್ತು ವರ್ಷಗಳ ಹಿಂದೆ ಸತ್ತುಹೋಗಿರುವ ಮಹಿಳೆಯೊಬ್ಬರು ಕೆಲವು ದಿನಗಳ ಹಿಂದೆ ಸಹಿ ಮಾಡಿದ್ದರು!

ಇನ್ನು ಆಶ್ರಯ ಯೋಜನೆಯ ಮನೆಗಳ ಪೈಕಿ ಹತ್ತನ್ನು ಮಾತ್ರ ಪರಿಶೀಲಿಸಿದರೆ ಹತ್ತೂ ಮನೆಗಳು ಇಲ್ಲವೇ ಇಲ್ಲ, ಒಂದೆರಡು ತಳಕಟ್ಟು ಮಾತ್ರ ಮಾಡಲಾಗಿದೆ. ಆದರೆ ದಾಖಲೆಯಲ್ಲಿ ಎಲ್ಲವೂ ಪೂರ್ಣಗೊಂಡು ಹಣ ಪಡೆಯಲಾಗಿದೆ. ಮನೆ 'ಸಿಕ್ಕಿದ್ದ' ಒಂದಿಬ್ಬರು ಫಲಾನುಭವಿಗಳ ಸಹಿಯನ್ನೂ ನಕಲಿ ಮಾಡಲಾಗಿತ್ತು.

ಕೆಲವು ದಿನಗಳಿಂದ ಸರಿಯಾಗಿ ಕುಡಿಯಲು ನೀರಿಲ್ಲ, ನಲ್ಲಿ ಪೈಪುಗಳು ಕಿತ್ತು ಹೋಗಿವೆ. ಪಂಚಾಯತ್ ಕಚೇರಿ ತಿಪ್ಪೆಗುಂಡಿಯಾಗಿದೆ. ಮೋಟಾರುಗಳು ಸುಟ್ಟು ಕುಳಿತಿವೆ. ಲಕ್ಷಾಂತರ ರೂ. ರಿಪೇರಿ ಬಿಲ್ ಮಾತ್ರ ಪಾವತಿಯಾಗಿದೆ. ಮನೆ ಇಲ್ಲದವರು ಪ್ಲಾಸ್ಟಿಕ್ ಗುಡಿಸಲಿನಲ್ಲೇ ಇದ್ದಾರೆ.

ಹಿಂದೆ ಗ್ರಾಮ ಪಂಚಾಯತಿಗೆ ಬರುತ್ತಿದ್ದ ಹಣ ಕಡಿಮೆಯಿತ್ತು. ಆದರೂ ಕೆಲವು ವರ್ಷಗಳಿಂದ ನಮ್ಮ ಪಂಚಾಯತ್ (ಅನೇಕ ಜಗಳಗಳಿದ್ದರೂ) ಒಳ್ಳೆಯ ಗ್ರಾಮ ಪಂಚಾಯತ್ ಎಂದು ಹೆಸರು ಗಳಿಸಿತ್ತು. ಈಗ ಜಗಳ ಕಡಿಮೆಯಾಗಿದೆ. ಹಣ ಹರಿದುಬಂದಿದೆ. ಬಂದ ಹಾಗೇ ಹರಿದುಹೋಗಿದೆ. ಹಿರಿಯರ ಗಾದೆ ಮಾತು ನೆನಪಾಗುತ್ತಿದೆ: "ಅಕ್ಕಿ ತಿನ್ನೋನ ಓಡ್ಸುದ್ರೆ ಭತ್ತ ತಿನ್ನೋನ ತಗಲಾಕ್ಕಂಡ."

ಈ ತನಿಖೆಯ ಫಲಶ್ರುತಿಯ ಬಗ್ಗೆ ಯಾರಿಗೂ ಅಂತಹ ಭರವಸೆಯೇನೂ ಇಲ್ಲ, ಈ ಹಿಂದೆ ಬಾವಿ ಕಾಣೆಯಾದ ಕತೆ ಕೇಳಿದ್ದೆವು. ಇನ್ನು ಮುಂದೆ ಊರೇ ಕಾಣೆಯಾಗಬಹುದು. ಜನ ಟಿ.ವಿ ಮುಂದೆ ಕುಳಿತು ಅಣ್ಣಾ ಹಜಾರೆ-ಕೇಜ್ರಿವಾಲರ ಹೋರಾಟವನ್ನು ನೋಡಿ ಆನಂದಿಸುತ್ತಿದ್ದಾರೆ.

ಇಂದು ಒಂದು ಗ್ರಾಮ ಪಂಚಾಯತಿಯ ಕತೆಯಲ್ಲ-ನಿಜಸಂಗತಿ, ಎಲ್ಲ ಗ್ರಾಮ ಪಂಚಾಯತಿಗಳೂ ಹೆಚ್ಚೂ ಕಡಿಮೆ ಹೀಗೇ ಇವೆ.

■ ಪ್ರಸಾದ್ ರಕ್ಷಿದಿ

...ಸೂ ಬೇವಿನಗಿಡದ ಅವರ 'ಬಾಳೆಯ ಕಂಬ'

ಪುಸ್ತಕ ವಿಮರ್ಶೆ

■ ಡಾ. ವಿನಯಾ



...ಷ್ಟಕ್ಕೂ ಕತೆ ಯಾಕೆ ಹುಟ್ಟುತ್ತದೆ? ...ವದೊಂದು ಆದಿಮ ಕುತೂಹಲವೇ. ... ವಿದ್ಯಮಾನಗಳು ಮೀಟುಗೋಲಿನ ... ನಿನ್ನೆಗಳನ್ನು ಎಬ್ಬುತ್ತ ಇಂದಿನ ...ಗಳಿಗೆ ರೂಪವನ್ನು ನಿರ್ಮಿಸಿಕೊಳ್ಳುವ ... ಕ್ರಿಯೆಯಲ್ಲಿ ಬಹುತೇಕ ಕತೆಗಳು ...ವಿಸುತ್ತಿವೆ. ಇಂದಿನ ರೂಹುಗಳನ್ನು ...ಿ ಕ್ಯಾನವಾಸಿನಲ್ಲಿ ಕಾಣಿಸುವ ವಿಧಾನದಲ್ಲಿ ...ಯ ಕಂಬ' ಸಂಕಲನದ ಕತೆಗಳಿವೆ. ...ವರ ಕಥಾಸಂಕಲನ 'ತಾಯವ್ವ'ದಿಂದಲೇ ಉತ್ತರ ...ಟಕದ ಗ್ರಾಮೀಣ ಬದುಕನ್ನು, ಆ ಮೂಲಕ ತನ್ನ ...ದಾಯ ಸ್ಮೃತಿಕೋಶವನ್ನು ಉಜ್ಜಿನೋಡುವ ಕ್ರಮವನ್ನು ...ಗಿಡದ ಅವರು ಬಳಸಿಕೊಂಡರು. ಗ್ರಾಮ, ನಗರ ... ವರ್ಗೀಕೃತ ಜೀವನ ಇಲ್ಲವಾಗುತ್ತಿರುವ ಸಂಕೀರ್ಣ ...ದಲ್ಲಿ ಗ್ರಾಮೀಣ ಎಂಬ ಪರಿಕಲ್ಪನೆ ವೈಭವೀಕರಣದ ...ಗೆ ಒತ್ತರಿಸುವ ಅಪಾಯ ಉಂಟಾಯಿತು. ಇಂತಹ ...ಕಲ್ಪಿತಗಳನ್ನು ನಾಜೂಕಾಗಿ ಮೀರುವುದು ಇಲ್ಲಿಯ ... ಮುಖ್ಯ ಕಾಳಜಿಗಳಲ್ಲೊಂದು. ತಳಸಮುದಾಯಗಳು ... ಮೇಲ್ ಸಮುದಾಯಗಳು ಗ್ರಾಮೀಣ ಬದುಕನ್ನು ...ವ ಮುಖ್ಯ ವ್ಯತ್ಯಾಸವೇ, ಇದು. ತಳಸಮುದಾಯದ ...ನೆಯು ತನ್ನ ಅನುಭವಲೋಕಕ್ಕೆ ಪ್ರಾಮಾಣಿಕವಾಗುತ್ತ ... ಮೇಲೆ ಆಕ್ರಮಿತವಾಗುವ ರೋಮ್ಯಾಂಟಿಕ್ ...ಗಳನ್ನು ನಿರಾಕರಿಸುತ್ತದೆ. ಹಳ್ಳಿ ಅನ್ನೋದು ...ಶೀಳಿಕ ಗುರುತು ಮಾತ್ರವಾಗುತ್ತ ಅಲ್ಲಿ ...ಲವಾಗಿರುವ ಚಿಂತನೆಗಳು ನಗರಪ್ರಜ್ಞೆಯಿಂದ ...ಾದುದಲ್ಲ ಅಲ್ಲವೇ? ಎಂಬ ಪ್ರಶ್ನೆಯನ್ನು ಇಲ್ಲಿಯ ... ಮುನ್ನೆಲೆಗೆ ತರುತ್ತವೆ. ನಗರದ ಕೊಳ್ಳುಬಾಕತನ, ...ರ ಪ್ರಜ್ಞೆ, ಭ್ರಷ್ಟತೆಗಳ ಪ್ರಭಾವ ಹಳ್ಳಿಗಳ ...ಯಿತೇ? ಅಥವಾ ಅತಿಭೋಗದ ರೋಗದ ...ಗಳು ಹಳ್ಳಿಯ ಜಮೀನ್ದಾರೀ ವ್ಯವಸ್ಥೆಯೊಳಗಿಂದಲೇ ...ಾ? ಎಂಬ ತಾತ್ವಿಕ ಪ್ರಶ್ನೆಯನ್ನಿವು ಮುಖ್ಯವಾಗಿಸುತ್ತವೆ. ...ಗಿನ್ನ ಮಧ್ಯಮವರ್ಗದ ವ್ಯಕ್ತಿಗಳು ಹಳ್ಳಿಯ ...ಗಳನ್ನು ಉಳಿಸಿಕೊಳ್ಳಲಾಗದೆ, ನಗರಗಳಲ್ಲಿ ...ರಲಾಗದೆ ಅನುಭವಿಸುವ ಅತಂತ್ರ ಸ್ಥಿತಿಯ ಚಿತ್ರಣಗಳಿವೆ. ನವ್ಯದ ಕತೆಗಳು ಇಂಥ ಅತಂತ್ರತೆಯ ಕಾರಣಗಳನ್ನು ನಗರ ಬದುಕಿನಲ್ಲಿ ಶೋಧಿಸಿದವು. ಆದರೆ ಇಲ್ಲಿಯ ಕತೆಗಳು ಹಳ್ಳಿಯಲ್ಲಿ ಹರಡಿರುವ ಸ್ವಾರ್ಥವಂಚನೆಯ ಮತ್ತೊಂದು ನೆಲೆಯೆಡೆಗೆ ಆಸಕ್ತವಾಗಿವೆ. ಸಮುದ್ರ ಕಸವನ್ನು ಹೊರದೂಡುವಂತೆ ಹಳ್ಳಿ ಉದ್ಯೋಗಸ್ಥನನ್ನು ಅಂಚಿಗೆ ದೂಡುವ ನಿರಾಕರಿಸುವ ಅಮಾನವೀಯತೆ ಮತ್ತು ಇಂತಹ ವಾಸ್ತವಗಳಿಂದ ಹೊರಗುಳಿಯಲಾಗದ ಅಸಹಾಯಕತೆಗಳನ್ನು ಇಲ್ಲಿಯ ಕತೆಗಳು ಹೇಳುತ್ತವೆ. 90ರ ದಶಕದಿಂದೀಚಿನ ಕತೆಗಳು ನಗರಗಳನ್ನು ಸಮುದಾಯ ಬದುಕಿನ ಸಹನಶೀಲ ಪ್ರವೃತ್ತಿಗಳಾಗಿ ತನ್ನೆಲ್ಲ ಕುರೂಪಗಳಾಚೆಯೂ ತರಹೇವಾರಿ ಜೀವಗಳನ್ನು ತೆಕ್ಕೆಯಲ್ಲಿಟ್ಟುಕೊಂಡು ಜೋಪಾನ ಮಾಡುವ ಮಡಿಲುಗಳಾಗಿ ನಿರ್ವಚನಗೊಳಿಸುತ್ತಿವೆ.

ಮತ್ತೆ ಮತ್ತೆ ನಮ್ಮ ಸಂದರ್ಭದ ಕತೆಗಳು ಹಳ್ಳಿಯನ್ನು ಹೊಕ್ಕಾಡುವುದಕ್ಕೆ ಇನ್ನೊಂದು ಕಾರಣವೂ ಇದ್ದಂತಿದೆ. ಜಾಗತೀಕರಣ ಮತ್ತು ಅದರ ಸಹೋತ್ಪನ್ನಗಳ ದಮನ ತಂತ್ರವು ಹೆಚ್ಚು ಛಿದ್ರಗೊಳಿಸುತ್ತಿದ್ದುದು ಹಳ್ಳಿಯ ದುರ್ಬಲ ಸಮೂಹವನ್ನು. ಅವರ ಬದುಕುಗಳ ಛಿದ್ರತೆಯ ಮೂಲಕವೇ ಗ್ಲೋಬಲ್ ಏಕಾನವಿ ಉಂಟುಮಾಡುತ್ತಿರುವ ಅವಾಂತರಗಳನ್ನು ಕಾಣಿಸುವುದು ಸಾಧ್ಯ. ಬಾಳೆಯ ಕಂಬ ಕತೆಯ ಕಮಲವ್ವ ಮತ್ತು ಅವಳ ಬದುಕಿಗೆ ಕಿರಿಕಿರಿಯಾಗಿರುವ ಅತ್ತೆ ಇಬ್ಬರ ದೃಷ್ಟಿಕೋನಗಳು ಒಂದೇ ಆಗಿರುವುದು; ಇಬ್ಬರೂ ಸೇರಿಯೇ ಎಲ್ಲವನ್ನೂ ಮಾರಿಕೊಳ್ಳಲು ಸಿದ್ಧವಾಗಿ ನಿಂತ ಮನೆಯ ಯಜಮಾನನನ್ನು, ಅವನ ಶೋಕಿದಾರಿಕೆಯು ತಮ್ಮ ಬದುಕಿನ ಕಡೆಯ ಆಧಾರವನ್ನೂ ಕಸಿದುಕೊಳ್ಳುವುದನ್ನು ಎದುರಿಸುವ ಪರಿಯೇ ಕೊಳ್ಳುಬಾಕತನಕ್ಕೆ ಹೆಣ್ಣಿನ ಸಂಗೋಪನಾ ಶಕ್ತಿಯು ಎದುರಾಗಬೇಕಾದ ಆಶಾವಾದವನ್ನು ಹೇಳುತ್ತದೆ.



ಬಾಳೆಯ ಕಂಬ ಸಂಕಲನ ಇನ್ನೊಂದು ಕಾರಣಕ್ಕಾಗಿಯೂ ಮುಖ್ಯವಾಗುತ್ತದೆ. ಇಪ್ಪತ್ತೊಂದನೇ ಶತಮಾನದ ಈ ಮೊದಲ ದಶಕ ಚಳವಳಿಗಳಿಲ್ಲದ ಕಾಲ ಎಂಬ ಐಡೆಂಟಿಟಿಗೆ ಒಳಗಾಗಿದೆ. ಸ್ತ್ರೀವಾದವನ್ನು ಕ್ಲೀಷೆ ಎಂದು ಕೇಳಿಸಲಾಗುತ್ತಿದೆ. ಆರೋಪವಿದೆ. ತಾತ್ವಿಕ ಬದ್ಧತೆಯಿಂದ ಲೇಖಕ ಹೊರಗುಳಿಯುವುದೇ ನಿಜವಾದ ಸಂವೇದನಾಶೀಲತೆ ಎಂಬ ಸುಳ್ಳು ಮತ್ತೆ ಮತ್ತೆ ಪ್ರಸ್ತಾಪಗೊಳ್ಳುತ್ತ ಸತ್ಯದ ಪೋಷಾಕನ್ನು ತೊಡಿಸಲಾಗುತ್ತಿದೆ. ಸ್ತ್ರೀವಾದವನ್ನು ಕನ್ನಡದ ಪ್ರಧಾನಕಥನ ಪರಂಪರೆ ಆರಂಭದಲ್ಲಿ ಕರುಣೆಯಿಂದ, ಸಹನೆಯಿಂದ, ಗುಮಾನಿಯಿಂದ ನೋಡುತ್ತ ಬಂದಿತ್ತು. 'ಕವಲು' ಎಂಬ ಗದ್ಯ ಸ್ತ್ರೀವಾದವನ್ನು ಭವ್ಯ ಭಾರತೀಯ ಸಂಸ್ಕೃತಿಗೆ ಎಸಗುತ್ತಿರೋ ವಿದ್ರೋಹ ಎಂದು ವ್ಯಾಖ್ಯಾನಿಸುವುದಕ್ಕೂ, ಬಂಡವಾಳವಾದ ಹೆಣ್ಣನ್ನು ಭೋಗದ ಸರಕು ಎಂದು ವಿವರಿಸಿಕೊಳ್ಳುವುದಕ್ಕೂ ಗಾಢವಾದ ಸಂಬಂಧವಿದೆ. ಹೆಣ್ಣನ್ನು ವಸ್ತುಮೌಲ್ಯಕ್ಕೆ ಹೊರಳಿಸುತ್ತಿರುವ ಈ ಕಾಲದಲ್ಲಿ, ಕನ್ನಡ ಕಥನ ಸಾಹಿತ್ಯ ಹೆಣ್ಣನ್ನು ಹೆಣ್ಣಾಗಿ ವ್ಯಕ್ತಿಪ್ರಜ್ಞೆಯಿಂದ ನೋಡುವ ವಿವೇಕವನ್ನು ದರ್ಶಿಸಿದೆ. 'ಬಾಳೆಯ ಕಂಬ' ಸಂಕಲನ ಅಂತಹ ಮುಖ್ಯ ಗುರುತಾಗಿದೆ. ಇಲ್ಲಿ ಹೆಣ್ಣು ಬದುಕನ್ನು ಕಾಣಿಸುವ ನೋಟವಾಗುತ್ತಾಳೆ.

ಲೂಟಿಕೋರ ಜಗತ್ತಿನ ಬಿಕನೇಸಿ ಬಾಳಿನಲ್ಲಿ 'ಬೆಳಕಿನ ಚಿಗುರ ಚಿವುಟಿ' ಕತೆಯ ಮುದುಕಿ ಬಸಮ್ಮನ ಉಪವಾಸ- ಮುಷ್ಕರಗಳು ಆರಂಭವಾಗುತ್ತವೆ. ಈ ದೈನೇಸಿ ಜೀವಗಳು ಬಡಿದಾಡಬೇಕಾಗಿದ್ದು ತಮ್ಮದೇ ಗಂಡ, ಮಗ ಮತ್ತು ಅವರು ಅದಾಗಲೇ ಸೇರಿ ಹೋಗಿರುವ ಹರಾಮಿ ವ್ಯವಸ್ಥೆಯ ವಿರುದ್ಧ. ನವಪುರುಷಶಾಹಿ ನಿಲುವುಗಳು ಹೆಣ್ಣಿನ ಮೇಲೆಸಗುವ ಹಿಂಸಾರತಿಯನ್ನು ವಿಸ್ತರಿಸಿಕೊಳ್ಳುತ್ತ ಸಾಗಿದಂತೆ ಹೆಣ್ಣಿನ ಹೋರಾಟದ ಸಂಕಥನಗಳೂ ಬೆಳೆಯಲೇಬೇಕಾದ ಅನಿವಾರ್ಯತೆಯನ್ನಿವು ಸೂಚಿಸುತ್ತಿವೆ. ಹೆಣ್ಣನ್ನು ಕುರಿತ ಪೂರ್ವಕಲ್ಪಿತಗಳನ್ನು, ಸ್ತ್ರೀವಾದ ಕುರಿತ ಪೂರ್ವಗ್ರಹಗಳನ್ನು ಮುತುವರ್ಜಿಯಿಂದ ಮೀರುವಲ್ಲಿ ಇಲ್ಲಿಯ ಕತೆಗಳು ಆಸಕ್ತವಾಗಿವೆ. ಆ ಕಾರಣಕ್ಕಾಗಿಯೇ ಅವು ಸ್ತ್ರೀ ಸಂವೇದನೆಯ ಅನುಭೂತಿಯಾಗುತ್ತವೆ. 'ನುಡಿಯಲಾರದ ಗಿಲಗಂಚಿ' ಕತೆಯ ಯಮುನವ್ವ ಅಕಾರಣವಾಗಿ ಹರಲಿಯನ್ನು ಹೊರಬೇಕಾಗುವುದು ಮತ್ತು ತಾಯಿ, ಗಂಡ ಎರಡೂ ಹತ್ತಿರದ ಜೀವಗಳು ಅವಳ ಸಂಕಟವನ್ನು ಅರ್ಥೈಸಿಕೊಳ್ಳದಿರುವುದು ಅವಳು ಯಾರನ್ನೂ ಗುರುತು ಹಿಡಿಯದಂತೆ ಮಾಡಿಬಿಡುತ್ತದೆ. ಇಂತಹ ಭಾವನಾತ್ಮಕ ಹಲ್ಲೆಯಿಂದ ಕಲ್ಲಾಗುವ ಯಮುನವ್ವಳಿಗೆ ಮಾಸ್ತರರು ಮತ್ತು ಮಠದ ಸ್ವಾಮಿಗಳು ಅವಳ ಜೀವನದ ಕಂದೀಲು ಆರದಂತೆ ಕಾಪಿಡುತ್ತಾರೆ.

ಈ ಕತೆ ನನ್ನ ಬಾಲ್ಯದಲ್ಲಿ ಕೇಳಿ ಅರಗಿಸಿಕೊಂಡಿದ್ದ ಪುಟ್ಟ ಕತೆಯೊಂದನ್ನು ತಟ್ಟನೆ ಮೇಲಕ್ಕೆತ್ತಿದ್ದು ಅಚ್ಚರಿಯೆನಿಸಿತ್ತು, ಒಂದಾನೊಂದು ಊರಲ್ಲಿ ಒಬ್ಬ ಹೆಂಗುಸು ಹೊಳೆಗೆ ನೆಗಸು ಬಂದಾಗ ತನ್ನ ಮಗನನ್ನು, ತಮ್ಮನನ್ನು ಕರೆದುಕೊಂಡು ಹೊಳೆದಾಟೋ ಪ್ರಸಂಗ ಬರುತ್ತದೆ. ಪಾತಿದೋಣಿ ಹೊಳೆಯ ನಡೂ ಬಂದಾಗ ಯಾರಾದರೊಬ್ಬರನ್ನ ಹೊಳೆಗೆ ಒಗೆಯದಿದ್ದರೆ ಗತ್ಯಂತರವಿರೋದಿಲ್ಲ. ಅವಳು ಮಗನನ್ನು ಒಗೀತಾಳೆ. ತಮ್ಮನನ್ನು ಉಳಿಸಿಕೊಳ್ಳುತ್ತಾಳೆ. ಈ ಕತೆಯನ್ನು ತಮ್ಮನಿಗೆ ಅಕ್ಕನಾಗಿದ್ದ ನನಗೆ ಕೇಳಿಸಿದ್ದ ವ್ಯವಸ್ಥೆಯ ಜಾಣ್ಮೆಯ ಬಗ್ಗೆ ಈಗಲೂ ಭಯವಾಗುತ್ತದೆ. ಕಥೆಯೊಂದು ನಮ್ಮದೇ ಅನುಭವಗಳೊಂದಿಗೆ ಸಂವೇದನೆಗಳೊಂದಿಗೆ ಮುಖಾಮುಖಿಯಾಗುವುದು ಅದರ ಆತ್ಯಾತ್ಮಕ ಗುಣ ಎಂದೇ ನಾನು ಭಾವಿಸುತ್ತೇನೆ. ಹೆಣ್ಣಿನ ಸಂವೇದನೆಯ ಸಹನೆಯಾದಂಥ ಇಲ್ಲಿಯ ಕತೆಗಳು ಅಪ್ಪವೆನಿಸುತ್ತವೆ.

'ಕಥೆಯ ಒಂದು ಟುಂಗು ಇಡೀ ಕಾಲದ ಸತ್ಯವನ್ನು ಆಕಮಿತ ಸ್ವರೂಪದಲ್ಲಿ ಹಿಡಿದಿಟ್ಟೀತೇ'? ಎಂಬ ನಮ್ಮ ತಲೆಮಾರಿನ ಎಲ್ಲ ಕಥೆಗಾರರೂ ಎದುರಿಸಬೇಕಾದ ಪ್ರಶ್ನೆಗೆ ಇಲ್ಲಿಯ ಕಥೆಗಳೂ ಹೊರತಾಗಿಲ್ಲ. ●

ದೇವ್ರು ದರ್ಶನ



ಕತೆ

ಥೂ, ಬೋಳಿಮಕ್ಳು. ಇಲ್ಲಿ ಯಾದನಿಗ್ಗೀ ಇದೆ ಮಾನಮರ್ಯಾದೆ ಅನ್ನೋದು. ಥೂ ಇವನಯ್ಯನ್ ಹುಲ್ಲಾ ನನ್ಮಕ್ಳನ್ ತಂದು. ದೇವ್ರ ವಿಚಾರದಲ್ಲೂ ರಾಜಕೀಯ ಮಾಡ್ತಾರಲ್ಲ, ಉರಿಯಲ್ವಾ ಮತ್ತೆ ಇವ್ರ ಯಾವ್ ಸೀಮೆ ಜನಗಳೊ. ಇವ್ರಿಗೆ ಅವ್ನು ಯಾವ್ ಥರದ ದೇವ್ರೋ, ಇವ್ರಿಗೆಲ್ಲಾ ಅದೇನಂತಾ ಬುದ್ಧಿ ಕೊಟ್ಟಿದಾನೋ, ಆ ದೇವ್ರು?! ಅನ್ನಿಸ್ಕೊಂಡೋಗ್ಗೇ ಗೊತ್ತು, ಮೊದ್ಲೇ ನಂಗೆ ಈ ದೇವ್ರು ಗೀವ್ರಲ್ಲೆಲ್ಲ ನಂಬಿಕೆ ಅಷ್ಟಕಷ್ಟೆ. ಅದ್ರ ಮೇಲೆ ನಂಗೆ ಈ ಜನ ಜಂಗುಳಿ ಅಂದ್ರೆ ಆಗಲ್ಲ, ಅಂಥಾದ್ರಲ್ಲಿ ನನ್ನ ಇಲ್ಲಿಗೆ ಇವ್ರು ಕರ್ಕೊಂಡು ಹೋದ್ರಲ್ಲ ಅದಕ್ಕೆ ಹೇಳ್ಬೇಕು! ಧೈರ್ಯ ಅಂದ್ರೆ ಇವರ್ದು.

ಇವತ್ತೆಲ್ಲ ಬರೀ ಇಂಥಾ ಕೆಲ್ಸಗಳೆ. ನಿನ್ನೆ ಮಂಗಳ್ವಾರ ರಾತ್ರಿ ಅವ್ಳು ಬಂದು ಹಣ ಕೇಳ್ದಾಗ್ಲೇ ಅನ್ಕೊಂಡೆ, ಇಂಥಾ ಯಡ ಹೊತ್ತಲ್ಲಿ ಸಾಲ ಕೊಡ್ತಾರ್ದು ಬೆಳ್ಗೆ ಬಾ ಅಂತ ಹೇಳ್ಬೇಕೂ ಅಂತ. ಆದ್ರೇನ್ಮಾಡೋದೂ! ಕಷ್ಟ ಅಂತ ಬಂದು ಕೇಳ್ದಾಗ ಕೊಡ್ದೆ ಇರೋಕೆ ಆಗ್ಲಿಲ್ಲ, ಆದ್ರೆ ಬೆಳ್ಗಾಗುತ್ಲೂ ಬಂತಲ್ಲ ಫೋನು! "ಸರ್ ಹದಿನೈದು ದಿನದ ಹಿಂದೇನೆ ಚೆಕ್ ಕಳಿಸ್ತೇನೆ ಅಂತ ಅಂದಿದ್ರಿ, ಇನ್ನೂ ಕಳಿಸಿಲ್ಲ, ನಿಮ್ದು ಗಾಡಿ ಇನ್ಸೂರೆನ್ಸ್ ಮುಗ್ದು ಒಂದು ವಾರ ಆಗಿದೆ. ದಯವಿಟ್ಟು ಇವತ್ತು ಹಣ ಕಳಿಸಿಬಿಡಿ ಸರ್, ಇಲ್ಲಾಂದ್ರೆ ಮತ್ತೆ ರಿನಿವ್ ಮಾಡಿಸ್ ಬೇಕೂ ಅಂದ್ರೆ ಸುಮ್ನೆ ಪ್ರಾಬ್ಲಂ ಆಗುತ್ತೆ" ಅಂದ್ಳು ಅದ್ಯಾವಳೋ ಲಲನಾಮಣಿ. ಸರಿ ನಿನ್ನೆ ರಾತ್ರಿ ಮಂಗಳವಾರದ ದಿನ ಹಣ ಕೊಟ್ಟಿದ್ದಕ್ಕೆ ಈಗ ಬೋಳಿಸ್ಕೋತಾ ಇದೀನಿ ಬಿಡು, ಯಾರ್ದೇನೂ ತಪ್ಪಿಲ್ಲ ಎಲ್ಲಾ ನಂದೆ ತಪ್ಪು, ಅಲ್ಲ, ಗಾಡಿ ತಗೊಂಡು ಇಷ್ಟು ವರ್ಷ ಆಯ್ತಲ್ಲ ಯಾವತ್ತಾದ್ರೂ ನಾನು ಆಕ್ಸಿಡೆಂಟ್ ಮಾಡಿದ್ದುಂಟಾ! ಅಂತಾದ್ರಲ್ಲಿ ಇವತ್ತು ಆಗೋಯ್ತು, ಸರ್ಯಾಗೇ ಆಯ್ತು ಬಡ್ಡೀಮಗನ್ ಆಕ್ಸಿಡೆಂಟು. ಅಷ್ಟು ಸ್ಪೀಡಾಗಿ ಹೋದ್ರೂ ನಿಗವಾಗಿ ಹೊಯ್ತಾ ಇದ್ದೋನು ಅವ್ಯಾರೋ ಸುಂದ್ರಿ ಫೋನ್ ಮಾಡಿದ್ಲೂ ಅಂತ ಒಂದು ಸೆಕೆಂಡು, ಒಂದೇ ಒಂದು ಸೆಕೆಂಡು, ಹಿಂಗೆ ನೋಡಿ ಹಂಗೆ ತಿರ್ಗೋ ಅಷ್ಟ್ರಲ್ಲಿ ಅದೆಲ್ಲಿದ್ನೋ ಬಡ್ಡೀಮಗ, ಧಂಗಂತ ಪ್ರತ್ಯಕ್ಷ ಆಗ್ಬಿಟ್ಟ. ನಾನೂ ಹೋಗಿ ಗುದ್ದೇ ಬುಟ್ಟೆ. ಇನ್ಸೂರೆನ್ಸ್ ಹಣ ಇವತ್ತಲ್ಲ ನಾಳೆ ಕಟ್ಟೋದೆ ಅಲ್ವ ಅಂದ್ಕೊಳ್ತಾ ಇದ್ರೆ, ಮಗನೆ ಅದಲ್ಲ ಕಣೋ ಬೋಳ್ಕೋದು ಅಂದ್ರೆ ಇದು ನೋಡು ಅಂತ ನನ್ನ ಗ್ರಹಚಾರ ನಂಗೆ ಹೇಳ್ತು ನೋಡಿ, ಸರ್ಯಾಗಿ ಹೇಳ್ತು...

ನೋಡೋದೇನು! ಅವ್ನ ಗಾಡಿ ತಿಕ ಹೋಗಿತ್ತು, ನನ್ ಗಾಡಿ ಮಕ ಹೋಗಿತ್ತು, ಪೊಲೀಸ್ ಕಂಪ್ಲೇಂಟ್ ಕೊಟ್ಟೋ ಹೋಗಯ್ಯ ನೋಡ್ಕೊಳ್ಳೋಣ ಅಂತ ಅನ್ನೋಣ ಅಂದ್ರೆ, ಬೆಳಿಗ್ಗೆ ತಾನೆ ಸುಂದ್ರಿ ಫೋನ್ ಮಾಡಿ ಹೇಳಿದ್ಲು ಇನ್ಸೂರೆನ್ಸ್ ಮುಗುದೋಗದೆ ಅಂತ. ಸರಿ, ಗಾಡಿ ಪಕ್ಕಕ್ಕೆ ಹಾಕಿ, ಆ ಗುದ್ದುಸ್ಕೊಂಡ್ ನನ್ ಮಗನ್ನ ಕರ್ದು ಜಗಳ ಮಾಡಿ, ಚೌಕಾಸಿ ಮಾಡಿ ಇಪ್ಪತ್ತು ಸಾವ್ರ ಕೇಳ್ದ ಹತ್ತು ಸಾವ್ರ ಕೊಟ್ಟೆ ಕಳಿಸ್ದೆ. ನನ್ ಗಾಡಿ ತಗಂಡು ಹೋಗಿ ತೋರ್ಸೂಂಗೆ ಬಿಟ್ರೆ, ಇಪ್ಪತ್ತೈದು ಮುವ್ವತ್ತು ಸಾವ್ರ ಆಗುತ್ತೆ, ಒಂದು ವಾರ ಆಗುತ್ತೆ ಅಂದ. ಗಾಡಿ ರಿಪೇರಿಗೆ ಬಿಟ್ಟು, ಆಫೀಸಿಗೆ ಫೋನ್ ಮಾಡಿ ರಜ ಹಾಕಿ, ಆಟೊ ಹತ್ತಿ ಮನೇಗೆ ಬಂದ್ರೆ ಕಟ್ಕೊಂಡೋಳು ಬಂದು "ರೀ ಮನೇಗೆ ಬಂದ್ರಾ, ನಾನೇ ಫೋನ್ ಮಾಡ್ಬೇಕೂ ಅಂತ ಇದ್ದೆ, ಗ್ಯಾಸ್ ಮುಗಿದ್ ಹೋಗಿದೆ, ಬುಕ್ ಮಾಡ್ಬೇಕು: ಮಾಡಿದ್ರೆ ಒಂದು ವಾರ ಆಗುತ್ತೆ ಬರೋದು. ಅಲ್ಲೀವರ್ಗೂ ಎಲ್ಲಾದ್ರೂ ಅರೇಂಜ್ ಮಾಡ್ರೀ" ಅಂದ್ಳು.

ತಲೆ ಕೆಟ್ಟು ರೋಸಿಹೋಗಿತ್ತು, "ಅಯ್ಯೋ ನಿಮ್ಮಯ್ಯನ್, ಏನ್ ನಿನ್ ಮಿಂಡ್‌ಗಾರ್ರಿಗೆಲ್ಲ ಬೇಯ್ಸಿ ಹಾಕ್ತೀಯ? ಮೊನ್ನೆ ಮೊನ್ನೆ ಗ್ಯಾಸ್ ಹಾಕಿದ್ರೆ ಆಗ್ಲೆ ಮುಗ್ದು ಹೋಯ್ತು ಅಂತೀಯ?" ಅಂತ ಕೋಪ್ದಲ್ಲಿ ಬಾಯಿಗೆ ಬಂದಂಗೆಲ್ಲ ಬಯ್ದೆ. ಅವ್ಳು ಮುನಿಸ್ಕಂಡು ಹೋಗಿ ಮಲಕ್ಕೊಂಡ್ಳು. ಸರಿ ತಪ್ಪು ನಂದಲ್ವ ಅಂತ ಅಂದ್ಬಿಟ್ಟು ನಾನೆ ಹೋಗಿ ಸ್ವಲ್ಪ ನೈಸ್ ಹೊಡ್ದೆ. ನಿಧಾನಕ್ಕೆ ಕರಗಿದ್ಳು, ಸಂಜೆ ದೇವಸ್ಥಾನಕ್ಕೆ ಕರ್ಕೊಂಡು ಹೋಗಿ ಅಂದ್ಳು, ಆಯ್ತು ಅಂದೆ. ಇನ್ನೇನ್ ಮಾಡೋದು, ಕೋಪದಲ್ಲಿ ಏನೇನೋ ತಪ್ಪು ಮಾತಾಡಿಬಿಟ್ಟಿದ್ನಲ್ಲ, ಅದಕ್ಕಾಗಿ ಅವ್ಳ ತಮ್ಮ ಅನ್ನೊ ಕ್ರಿಮೀನೂ, ಅವ್ನ ಹೆಂಡ್ತಿ ಅನ್ನೋ ಹುಳಾನೂ, ಅವ್ರ ಮಕ್ಳು ಅನ್ನೋ ಪಿಶಾಚಿಗಳನ್ನೂ ಸಹಿಸ್ಕೋಬೇಕು ಅಷ್ಟೆ. ಒಟ್ನಲ್ಲಿ ಒಲ್ಲದ ಮನಸ್ಸಿಂದ ಇವ್ರ ದರಿದ್ರಗಳ್ನೆಲ್ಲ ಸಹಿಸ್ಕೊಂಡು ಇಲ್ಲಿಗೆ ಬಂದ್ರೆ. . .

ಅದೇನೋ ಅಮಾವಾಸ್ಯೆ ಅಂತ ಊರಿನ್ ಜನ ಎಲ್ಲ ಈ ದೇವಸ್ಥಾನಕ್ಕೆ ವಕ್ಕರಿಸ್ಕೊಂಡಿದ್ರು. ಸಿಕ್ಕಾಬಟ್ಟೆ ರಷ್ಷು. ನಂಗೆ ಈ ಜನ ಜಂಗ್ಳಿ ಅಂದ್ರೆ ತಲೆ ಕೆಡುತ್ತೆ, ಮೊದ್ಲೇ ತಲೆ ಕೆಟ್ಟ ಮನುಷ್ಯನ್ನ ಇಲ್ಲಿಗೆ ಕರ್ಕೊಂಡ್ಬಂದು ಇನ್ನೂ ತಲೆ ಕೆಡ್ಸಿದ್ರು. ಇಲ್ಲಿಗೆ ಬರೋಬದ್ಲು ಎಲ್ಲಾದ್ರೂ ಪಾರ್ಕಲ್ಲೋ ಇನ್ನೆಲ್ಲೋ ಕೂತಿದ್ ಬಂದಿದ್ರೆ ಆಗ್ತಿರ್ಲಿಲ್ವ ಅಂತ ಮೈ ಉರ್ಕೊಂಡು ಸಿಡಿಸಿಡಿ ಮಾಡ್ತ ಆಂಜನೇಯನ ಬಾಲದ ಥರ ಇದ್ದ ಕ್ಯೂನಲ್ಲಿ ಆಂಜನೇಯನ ದೇವಸ್ಥಾನದಲ್ಲಿ ನಿಂತ್ಕೊಂಡೆ. ಆ ರಷ್ಷಿಗೂ, ಆ ಶೆಖೆಗೂ ಮಕ್ಳು ಸಣ್ಣವು ಚೀರೆ ಕಿರುಚೋಕೆ ಶುರು ಮಾಡಿದ್ವು. ಇಷ್ಟ ಇಲ್ಲದ ಕೆಲ್ಸ ಮಾಡೋವಾಗ ಇಂಥಾ ಸಣ್ಣ ಪುಟ್ಟವೆಲ್ಲ ದೆಯ್ಯನ ಥರ ಅನ್ನೋಕೆ ಶುರು ಆಗ್ಬಿಡತ್ತೆ. ನಂಗೂ ಹಂಗೇ ಆಯ್ತು. ಹೆಂಗೋ ಸಹಿಸ್ಕೊಂಡು ಒಂದು ಗಂಟೆ ಕಾಲ ಆದ್ಮೇಲೆ ಗರ್ಭಗುಡಿ ಹತ್ರಕ್ಕೆ ಬಂದ್ವಿ. ಆಗ ಸರ್ಯಾಗಿ ಗರ್ಭಗುಡಿಗೆ ಕರ್ಟನ್ ಎಳೆದ್ಬಿಟ್ಟು ಮಹಾಮಂಗಳಾರತಿ ಅಂದ್ರು. ಅಯ್ಯೋ ಇವ್ನಯ್ಯನ್ ಈಗ್ಲೆ ಮಾಡ್ಬೇಕಿತ್ತ ಮಂಗಳಾರತೀನ ಅಂತ ನಾನು ಗೊಣಗ್ಕೊಂಡು ನಿಂತ್ಕೊಂಡ್ನ.

ಕಾಲುಗಂಟೆ ಘಂಟೆ ಹೊಡ್ಕೊಂಡು ಅದೇನ್ ಮಂಗಳಾರತಿ ಮಾಡಿದ್ರೋ ಅದೇನು ಮಾಡಿಸ್ಕೊಂಡ್ನೋ ಆ ಆಂಜನೇಯಂಗೇ ಗೊತ್ತು. ಆ ಕಾಲುಗಂಟೆ ನಂಗೆ ಒಂದು ಯುಗ ಕಳೆದಂಗೆ ಆಯ್ತು. ಕೊನೇಗೂ ಕರ್ಟನ್ ಸರಿಸಿ ಬಾಗಿಲು ತೆರೆದು ದರ್ಶನ ಕೊಟ್ರು ಅಂದ್ಕೊಳ್ಳೋ ಅಷ್ಟ್ರಲ್ಲಿ ಅದ್ಯಾರೋ ವಿಐಪಿ ಬಂದ್ರೂ ಅಂತ ನಮ್ಮನ್ನೆಲ್ಲ ಹಂಗೇ ನಿಲ್ಸಿ ದಾರಿಬಿಡಿ ದಾರಿಬಿಡಿ ಅಂತ ಅವ್ರ ಯಾರನ್ನೋ ಒಳ್ಗೆ ಕರ್ಕೊಂಡು ಹೋಟ್ರೋದ್ರು. ನಂಗೆ ಇನ್ನು ತಡ್ಕೊಳೋಕೆ ಆಗ್ಲಿಲ್ಲ, "ಯಾರ್ರೀ ಅದು ಮಧ್ಯ ಕರ್ಕೊಂಡು ಹೋಗ್ತಿದೀರಾ? ಇಲ್ಲಿ ಕಾಯ್ತಾ ಇರೋರು ನಾವೇನು ಮನುಷ್ಯರ ಥರ ಕಾಣ್ಸೋಲ್ವ? ಬರ್ರಿ ಈಚೆಗೆ. ಕ್ಯೂನಲ್ಲಿ ನಿಂತ್ಕೊಳ್ರಿ" ಅಂತ ಕೂಗ್ಬಿಟ್ಟೆ. ಅವನ್ಯಾರೋ ಒಬ್ಬ ಕಿಂಕರ ಬಂದು "ಅವ್ರು ಯಾರು ಅಂದ್ಕೊಂಡಿದೀರಾ ಮಾಜಿ ಕಾರ್ಪೊರೇಟರು, ಫ್ಯೂಚರ್ ಎಮ್ಮೆಲ್ಲೆ ಕ್ಯಾಂಡಿಡೇಟು" ಅಂದ.

ನಂಗೆ ಬೆಳಗ್ಗೆಯಿಂದ ತಡೆದೂ ತಡೆದೂ ಸಾಕಾಗಿತ್ತಲ್ಲ! "ಮಾಜಿ ಆದ್ರೇನು ಹಾಲಿ ಆದ್ರೇನು. ಎಮ್ಮೆಲ್ಲೆ ಆದ್ರೇನು ಮಿನಿಸ್ಟ್ರೆ ಆದ್ರೇನು ಎಲ್ಲಾ ಒಂದೇ. ಬರ್ರೀ ಆಚೆಗೆ. ನಿಮ್ಮಂಗೇ ನಾವೂ ಮನುಷ್ಯರೇ ಗೊತ್ತಾ, ನಮ್ಗೇನು ಮಾಡೋಕೆ ಬೇರೆ ಕೆಲ್ಸ ಇಲ್ವ. ನಿಮ್ಮಂಗೇ ನಮ್ಗೂ ನೂರೆಂಟು ಕೆಲ್ಸ ಇರ್ತವೆ. ಬರ್ರಿ ಬರ್ರಿ" ಅಂದೆ. ಕಿಂಕರ ಇನ್ನೂ ಏನೋ ಅನ್ನಬೇಕು ಅಂತ ಇದ್ದ, ಅಷ್ಟರಲ್ಲಿ ಕ್ಯಾಂಡಿಡೇಟು "ಆಯ್ತು ಬಿಡಿ ಸಾರ್, ಅದಕ್ಯಾಕೆ ಅಷ್ಟು ಕೋಪ ಮಾಡ್ಕೋತೀರ. ಬನ್ನಿ, ನೀವೇ ಮೊದ್ಲು ಪೂಜೆ ಮುಗಿಸ್ಕಂಡು ಹೋಗಿವ್ರಂತೆ ಬನ್ನಿ" ಅಂದ.

ನಂಗೆ ಅಲ್ಲಿ ಕೈ ಮುಗಿಯೋ ಆಸೆ ಆಗ್ಲೀ ಪೂಜೆ ಮಾಡೋ ಆಸೆ ಮೊದ್ಲೆ ಇರ್ಲಿಲ್ಲ, ಈಗ ಇನ್ನೆಂತಾ ಪೂಜೆ ಹೇಳಿ. ಯಾರೋ ವಿಐಪಿ ಬ[...] ಅಂತ ಮಂಗಳಾರ್ತಿ ತಟ್ಟೆ ವಾಪಸ್ ತಗೊಂಡು ಹೋಗಿದ್ದ ಪೂಜಾರಪ್ಪ ಹಿಡ್ಕೊಂಡು ಪುನಃ ನಮ್ ಹತ್ರಕ್ಕೆ ಬಂದ. ಮಂಗಳಾರತಿ ಮೇಲೆ ಕೈ ಸುತ್ತಿಸ್ಬಿಟ್ಟು ಕಣ್ಣಿಗೆ ಹಣೆಗೆ ಮುಟ್ಟಿಸ್ಕೊಂಡ ಶಾಸ್ತ್ರ ಮಾಡಿದೆ. ನನ್ನ ನಿಂತಿದ್ದ ನಮ್ಮ ಮನೆಯವರ್ಗೆಲ್ಲ ಮಂಗಳಾರ್ತಿ ಕೊಟ್ರು. ಇನ್ನೊಬ್ಬ ಪೂಜಾ[...] ತೀರ್ಥ ತಂದು ಕೈ ಮೇಲೆ ಹಿಂಗೆ ಚೆಲ್ಲಿದ ಶಾಸ್ತ್ರ ಮಾಡಿದ. ನನ್ನ [...] ಇನ್ನೂ ಆರಿರಲಿಲ್ಲವಲ್ಲ! "ಸರ್ಯಾಗಿ ಕೊಡ್ರಿ ತೀರ್ಥಾನ. ಏನ್ ಒಳ್ಳೆ [...] ಉಚ್ಚೆ ಹೂದಂಗೆ ಹಾಕ್ತೀರಾ" ಅಂದೆ. "ರೀ ಸ್ವಾಮೀ, ಇದು ದೇವ[...] ನೆಟ್ಟಗೆ ಮಾತಾಡಿ" ಅಂದ. "ನೀವ್ ನೆಟ್ಟಗೆ ಮಾಡಿದ್ರೆ ನಾವೂ [...] ನೆಟ್ಟಗೆ ಮಾತಾಡ್ತೀವಿ ಕಣ್ರಿ" ಅಂದೆ. "ಏನ್ರೀ ನೆಟ್ಟಗೆ ಮಾಡೋದು? ನೀವ್ ಹೇ[...] ತೀರ್ಥ ಕೊಡ್ತಾ ಹೋದ್ರೆ ಇವತ್ತೆಲ್ಲ ಮುಗ್ಯೋದಿಲ್ಲ ನಮ್ಮ ಕೆಲ್ಸ ಗ[...] ದೇವಸ್ಥಾನಕ್ಕೆ ಬಂದು ಅದೇನ್ರೀ ಹೊಲಸು ಮಾತಾಡ್ತೀರಾ" ಅಂದ. "[...] ಮಾಡಿದ್ದಕ್ಕೆ ಅಂದೆ. ನಮ್ಮನ್ನೇನು ಮನುಷ್ಯರು ಅನ್ಕೊಂಡ್ರಾ ಇಲ್ಲಾ ನಾಯಿ[...] ಅನ್ಕೊಂಡ್ರಾ ಹೇಳಿ ಹಂಗೆ ತೀರ್ಥ ಚೆಲ್ಲಿಕೊಂಡು ಹೋಗೋಕೆ" [...] ಅವ್ನಿಗೂ ಕೋಪ ಏರ್ತು. "ಏನಯ್ಯ ನಿಂದು ಗಾಂಚಾಲಿ. ಒಳ್ಳೆ ಹೊ[...] ಮಾತಾಡ್ದಂಗೆ ಮಾತಾಡ್ತೀಯಲ್ಲ, ಬಂದಿದೀಯ ಮುಚ್ಕೊಂಡು ಪೂಜೆ ಮುಗಿ[...] ಹೋಗ್ಬೇಕು ಅಷ್ಟೆ. ಇಲ್ಲದ್ದೆಲ್ಲ ಉಸಾಬರಿ ನಿಂಗ್ಯಾಕೆ" ಅಂದ. "ಬೋಳಿ[...] ಹೊಲೇರು ಮಾತಾಡ್ದಂಗಾದ್ರೂ ಮಾತಾಡ್ತೀನಿ. ಮಾದಿಗ್ರು ಮಾತಾಡ್ದಂಗ[...] ಮಾತಾಡ್ತೀನಿ. ನಿಂಗೇನೋ? ನಿನ್ ಕೆಲ್ಸ ಎಷ್ಟೋ ಅಷ್ಟು ನೋಡು. ಬಂದೆ[...] ತೀರ್ಥ ಹಾಕಕ್ಕೆ ನಿಲ್ಸಿದಾರೆ, ತೀರ್ಥ ಹಾಕಿ ಕಳ್ಸು. ನನ್ ಏನಂದ್ಕೊಂಡಿದಿ[...] ಅಟ್ರಾಸಿಟಿ ಕೇಸ್ ಹಾಕಿ ಒಳಗೆ ಕೂರಿಸ್ಬಿಡ್ತೀನಿ ಮಗ್ನೆ, ಹುಷಾರ್" ಅ[...]

ಅಷ್ಟೊತ್ತಿಗೆ ಕ್ಯಾಂಡಿಡೇಟು "ಸಾರ್ ಸಾರ್ ಯಾಕ್ ಸಾರ್ ಅಷ್ಟೊ[...] ಕೋಪ ಮಾಡ್ಕೊತೀರ. ಆಯ್ತಲ್ಲ ನಿಮ್ ಪೂಜೆ ಮುಗಿಸ್ಕಂಡು ಹೊರಡಿ ಸಾರ್. ಇಲ್ಲದ್ ಜಗಳ ಯಾಕೆ ಸುಮ್ನೆ" ಅಂದ. "ಅಲ್ರೀ, ಅವ್ನೇ[...] ಹೇಳದು: ಅವ್ನ ಕೆಲ್ಸ ಎಷ್ಟೋ ಅಷ್ಟು ನೋಡ್ಬೇಕು. ಅದು ಬಿಟ್ಟು [...] ಯಾಕೆ ಇಲ್ಲದ್ದೆಲ್ಲ ಮಾತು. ಅವ್ನು ಬ್ರಾಮಣ. ಅವ್ನ ಕೆಲ್ಸ ಅವ್ನು ನಿಯ[...] ಮಾಡ್ಲಿ, ಈ ಬ್ರಾಮಣ ಸೂ..ಮಕ್ಳಿಂದ್ಲೇ ದೇಶ ಹಿಂಗೆ ಎಕ್ಕುಟ್ಟಿ ಹೋಗಿರೋ[...] ಅಂದೆ. ಅಷ್ಟೊತ್ತಿಗೆ ಹಿಂದೆ ಗುಂಪಿಂದ ಯಾರೊ ಕೂಗಿದ್ರು "ಯಾರ್ರೀ [...] ಸುಮ್ನೆ ಪೂಜೆ ಮಾಡ್ಕೊಂಡು ಹೋಗೋದ್ ಬಿಟ್ಟು ಗಲಾಟೆ ಮಾಡೋ[...] ಅಂದ್ರು. ನನ್ನ ಕೋಪ ಯಾವ ಮಟ್ಟಕ್ಕೆ ಹೋಗಿತ್ತು ಅಂದ್ರೆ ಇಡೀ ದೇವ[...] ಭಕ್ತ ಸಮೂಹಾನೆ ಎದುರಾದ್ರೂ ಹೆದ್ರೋ ಹಂಗಿರ್ಲಿಲ್ಲ, "ನೀವ್ [...] ಬಗ್ಗಿಸಿ ನಿಂತ್ಕೊಳೋದ್ಕೇ ಮತ್ತೆ ಅವ್ರು ನಿಮ್ ಎದೆ ಮೇಲೆ ನಿಂತ್ಕೊ[...] ಸವಾರಿ ಮಾಡೋದು. ನನ್ಗೆ ಅನ್ಯಾಯ ಆದ್ರೆ ನಿಮ್ಗೂ ಅನ್ಯಾಯ ಆ[...] ತಿಳ್ಕೊಳಿ. ನೀವ್ಯಾವತ್ತು ಎದ್ರು ನಿಂತ್ಕೊಂಡು ಎದೆ ಉಬ್ಸಿ ಮಾತಾಡ್ತೀರ [...] ಉದ್ಧಾರ ಆಯ್ತೀರ. ಅಲ್ಲೀವರ್ಗೂ ಹಿಂಗೆ ಸಾಯ್ತೀರ. ಅವ್ರು ಹಿಂಗೇ [...] ಮೇಲೆ ಸವಾರಿ ಮಾಡ್ತಾನೇ ಇರ್ತಾರೆ" ಅಂದೆ. ಗುಂಪು ಒಡೆದುಹೋ[...] ಒಸಿ ಭಕ್ತರು ಬ್ರಾಮ್ಮಣರ ಕಡೆಗೆ, ಒಸಿ ಜನ ನನ್ ಕಡೆಗೆ ಮಾತಾ[...] ಶುರು ಮಾಡ್ಬಿಟ್ರು. ಯಾರೂ ಯಾರ್ ಮಾತ್ನೂ ಕೇಳಿಸ್ಕೊಳ್ಳೋ ತಾ[...] ಇರ್ಲಿಲ್ಲ.

"ನೀವ್ ನಡೀರಿ ಸಾರ್, ನೀವ್ ನಡೀರಿ, ನಿಮ್ದ್ ಆಯ್ತಲ್ಲ ನಡಿ[...]" ಅಂತ ನನ್ನ ಒಂದಷ್ಟು ಜನ ತಳ್ಳಿಕೊಂಡೇ ಆಚೆಗೆ ಕರ್ಕೊಂಬಂದ್ರು. ಗು[...] ಯಾವನೋ, ಕ್ಯಾಂಡಿಡೇಟು ಕಡೆಯವನಿರಬೇಕು, "ನೀನೇನು ದಾದಾನೆ[...] ಬಾ, ಈಚೆಗೆ ಬಾ. ನಿನ್ನ ನೋಡ್ಕೋತೀನಿ" ಅಂದ. "ಲೇ ಗಂಡ್ಸೇ, ಈಚೆಗೆ[...] ಬರೋದು? ಎಲ್ಲಿಗೆ ಬರ್ಬೇಕು ಯಾವಾಗ ಬರ್ಬೇಕು ಹೇಳೋ [...] ಅಷ್ಟು ಹೊತ್ತಿಗೇ ಬರ್ತೀನಿ. ಅದ್ಯಾರ್ನ್ ಕರ್ಕೊಂಡು ಬರ್ತೀಯ ಆ[...] ಜನ ಕರ್ಕೊಂಡು ಬರ್ತೀಯ ಬಾ. ನಾನೂ ಒಂದು ಕೈ ನೋಡೇ ಬಿ[...]" ಅಂದೆ. "ಬಿಡಿ ಸಾರ್, ಬಿಡಿ ಸಾರ್ ನೀವು, ಯಾವ್ನೋ ಪೋಲಿ ಮುಂ[...] ನೀವು ನಡೀರಿ ಸಾರ್" ಅಂತ ಯಾರೋ ದಬ್ಬಕೊಂಡು ಬಂದ್ರು. ನಮ್ಮ ಮನೆಯವರು ಹೆಂಗೋ ನನ್ನ ಹಿಂದೇನೆ ಬಂದ್ರು. ಆಟೋ ಹತ್ತಿಕೊಂ[...] ಮನೆಗೆ ಮುಟ್ಟಿದ್ವಿ.

ನನ್ ಹೆಂಡ್ತೀಗಾಗ್ಲಿ ನನ್ನ ಭಾವಮೈದುನಂಗಾಗ್ಲಿ ನನ್ನ ಮಾತಾ[...] ಧೈರ್ಯ ಇರ್ಲಿಲ್ಲ, ಮನೆಗೆ ಬಂವನೆ ನನ್ ರೂಮ್ನಲ್ಲಿ ಬಾಗಿಲಿಕ್ಕಿಕೊಂ[...] ಮ್ಯಾನ್ಷನ್ ಹೌಸ್ ಬ್ರಾಂಡಿ ಸುರ್ಕೊಂಡು ಒಂದು ಗ್ಲಾಸ್ ಇಳಿಸ್ದೆ. ನಿ[...] ದೇವ್ರು ಕಾಣ್ಸಕ್ಕೆ ಶುರು ಆಯ್ತು.

■ ಚಂದ[...]



ಎನ್‌ಕೌಂಟರ್

ಗೊತ್ತು ನನಗೆ,
ಮುಂದೊಂದು ದಿನ ಅಥವಾ ರಾತ್ರಿ
ತುಂಬಾ ಹತ್ತಿರದಿಂದ ನೀವು ಬಿಟ್ಟ
ಬಂದೂಕಿನ ಬುಲೆಟ್ಟು
ನನ್ನ ತಲೆ ಚಿಪ್ಪನ್ನು ಸೀಳಿ
ಮೆದುಳನ್ನು ಹೊಕ್ಕುತ್ತದೆ,
ಘಾಸಿ ಮಾಡುತ್ತದೆ!

ಮನಸ್ಸಿನಲ್ಲಿ ಒಮ್ಮಿಂದೊಮ್ಮೆಲೆ
ಹೊತ್ತಿ ಉರಿದ ವಿಚಾರದಂತೆ
ಆ ಬುಲೆಟ್ಟು
ಮೆದುಳಿಗೆ ಬೆಂಕಿಯಿಡುತ್ತದೆ.
ಮತ್ತೆ ನಾನು
ನನ್ನ ವಿಚಾರಕ್ಕೆ ಜೀವ ಕೊಡುತ್ತೇನೆ.
ಕ್ಷಮಿಸಿ...
ಆ ವಿಚಾರಕ್ಕಾಗಿ ಪ್ರಾಣ ಬಿಡುತ್ತೇನೆ!
ಅದಕ್ಕಾಗಿಯೆ... ನಾನು ಸತ್ತರೂ
ನನ್ನ ವಿಚಾರ ಬದುಕಿರುತ್ತದೆ!

ಮತ್ತೆ ನೀವು ಕೊಲೆಗಡುಕರ,
ನನ್ನ ನಿರ್ಜೀವ ದೇಹವನ್ನು
ತಮ್ಮ ಹೆಗಲ ಮೇಲೆ ಹೊತ್ತುಕೊಂಡು
ಅಂಬುಲೆನ್ಸಿನವರೆಗೆ ನಡೆಯುವ ದಾರಿಯಲ್ಲಿ–
ಒಂದೆರಡು ಕ್ಷಣಗಳಾದರೂ..
ನಿಮ್ಮ ಸಜೀವ ದೇಹಗಳಿಗಿಂತ
ನನ್ನ ಹೆಣ
ಒಂದು ಗೇಣಿನಷ್ಟಾದರೂ ಎತ್ತರದಲ್ಲಿರುತ್ತದೆ!
ನಿಮ್ಮ ಸುಸ್ತಾದ ಉಸಿರು
ನನ್ನ ಹೆಣದ ಭಾರಕ್ಕೆ
ಅಡಿಯಾಳಾಗಿರುತ್ತದೆ!

ಆಮೇಲೆ, ಆ ಆಂಬುಲೆನ್ಸ್
ತನ್ನ ಗರ್ಭದಲ್ಲಿ
ನನ್ನ ಹೆಣವನ್ನು ಹೊತ್ತು
ವಿಚಿತ್ರವಾಗಿ ಅಳುತ್ತಾ, ಬೊಬ್ಬಿಡುತ್ತಾ
ನಗರದ ಕಡೆಗೆ ಧಾವಿಸುತ್ತದೆ!

ಕಾರು, ಬೈಕುಗಳೊಂದಿಗೆ ಹೆದ್ದಾರಿಯಲ್ಲಿ
ಆಧುನಿಕ ಜಗತ್ತಿನ ವೇಗ ಪಡೆದುಕೊಂಡ ಮನುಷ್ಯರು
ದಾರಿ ಬಿಟ್ಟು ನಿಲ್ಲುವರು–
ಕಾಲುದಾರಿಯಲ್ಲಿ ಕಾದಾಟ ಮಾಡಿದ
ಕ್ರಾಂತಿಕಾರಿಯ ಹೆಣ ಹೋಗಲು!

ಮಾಧ್ಯಮದವರ ಕ್ಯಾಮೆರಾಗಳ ಮಿಂಚಿಗೆ
ನನ್ನ ರೆಪ್ಪೆಯಡಿಯ
ಕರಾಳ ಕತ್ತಲು ಕಾಣದು!
ಅವರ ಸುಂದರ ಲೇಖನಿಯಲ್ಲಿ
ನನ್ನ ತಲೆಗೆ ಸುತ್ತಿದ ಬ್ಯಾಂಡೇಜಿನ ಸಂಧಿಯಲ್ಲಿ
ಒಸರುವ ನೆತ್ತರು ಜೀರ್ಣವಾಗದು!
ನನ್ನ ಹೆಣವನ್ನು ನೋಡಲು
ಹೆತ್ತವರೂ ನಿರಾಕರಿಸಿದ ಆ ಹೊತ್ತು...
ದಮನಿಸುವ ವ್ಯವಸ್ಥೆಯ ಬಂದೂಕುಧಾರಿಗಳ
ಕೊರಳಿಗೆ
ಚಿನ್ನದ ಪದಕ ಜೋತು ಬೀಳುತ್ತದೆ!
ರಕ್ತವಂಟಿದ ಬುಲೆಟ್ಟು ಕೂಡಾ
ವಿಪರೀತ ಪ್ರಚಾರ ಗಿಟ್ಟಿಸುತ್ತದೆ!

ಆದರೆ ಅದೇ ಹೊತ್ತು...
ಇನ್ನಾರದ್ದೋ ಮನಸ್ಸಲ್ಲಿ ಗೌಪ್ಯವಾಗಿ
ನನ್ನ ವಿಚಾರ ಮೊಟ್ಟೆಯೊಡೆದು
ಮರಿ ಹಾಕುತ್ತಿರುತ್ತದೆ!

ಹೌದು, ಗೊತ್ತು ನನಗೆ,
ಮುಂದೊಂದು ದಿನ ಅಥವಾ ರಾತ್ರಿ
ತುಂಬಾ ಹತ್ತಿರದಿಂದ ನೀವು ಬಿಟ್ಟ
ಬಂದೂಕಿನ ಬುಲೆಟ್ಟು...

■ ವಿಲ್ಸನ್, ಕಟೀ[...]

ಪುಟ್ಟೇಗೌಡ, ವಿಶ್ವನಾಥ್ ದಳದ ಮನೆ ಬುಟ್ರಂತೆ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಪುಟ್ಟೇಗೌಡ್ರು ದಳ ಬುಡ್ತರಂತೆ ಕಣಾಮಾವ" ಎಂದ ಗ್ರಿ.

"ಅದ್ಯಾಕ್ ಬುಟ್ಟಿನ್ನಾ?"

"ಅವುನು ಇಷ್ಟು ದಿನ ಇದ್ದಿದ್ದೇ ಹೆಚ್ಚು ದೊಡಪ್ಪ" ದ ವಾಟಿಸ್ಸೆ.

"ಅಂಗಂತಿಯಾ?"

"ಊ ಮತ್ತೆ ಕುಷ್ಟ ಸ್ವಾಭಿಮಾನ ಇದ್ದೋನು ದ್ಯಾವೇಗೌಡ್ರ ವಲ್ಲಿ ಇರದು ಬಾಳ ಕಷ್ಟ. ಯಾಕಪ್ಪ ಅಂದ್ರೆ ರಣ್ಣನಂಥೋನಿಗೆ ಅಡಿಯಾಳಾಗಿರಬೇಕಾಯ್ತದೆ. ಗಿರಬೇಕಾದ್ರೆ ಸ್ವಾಭಿಮಾನವೇ ಇರಬಾರ್ದು. ಅಂತದ್ರಲ್ಲಿ ು ಮೆಚ್ಚಿದ ರಾಜಕಾರಣಿ ಪುಟ್ಟೇಗೌಡ ಇಷ್ಟು ದಿನ ದ್ದೇ ಹೆಚ್ಚು."

"ಪುಟ್ಟೇಗೌಡುನ್ನ ನಾನು ನೋಡಿದ್ದಿನಿ ಕಂಡ್ಯ. ಆ ರೇಗೌಡನುಡುಗ ಗಂಗಾಧರನ ಮದಿವಿಗೆ ಬಂದಿದ್ದ. ದ ಅವುನ್ನ ನೋಡಿದ್ರೆ ಯಮ್ಮೆಲ್ಲೆಯಂಗೆ ಕಾಣದಿಲ್ಲ ಗವುನೆ" ಎಂದಳು ಜುಮ್ಮಿ.

"ನಿನ್ನ ಪ್ರಕಾರ ಯಮ್ಮೆಲ್ಲೆ ಅಂದೆ ಯಂಗಿರಬೇಕಕ್ಕಾ?"

"ಚಲುವರಾಯಸ್ವಾಮಿ, ಶಿವರಾಮೇಗೌಡ, ಶೀಗೌಡನಂಗಿರಬೇಕು."

"ಚಲುವರಾಯಸ್ವಾಮಿ ಅಂಗೆ ಕಾಣೊವತ್ತಿಗೆ ಒಬ್ಬ ಮಧೇಯ ಸುರೇಶ್ ಗೌಡನೆದ್ರಿಗೆ ಐದು ಸಾವುರ ಲ್ಲಿ ಸೋತ. ಪುಟ್ಟೇಗೌಡ ಇವತ್ತಿಗೂ ಎಮ್ಮೆಲ್ಲೆಯಂಗೆ ದೆಯಿರದ್ರಿಂದ ಯೆಂತ್ಯಂಥಾ ಘಟಗಳ ಸೋಲಿಸಿಬುಟ್ಟಾ ೕ. ಪಾಪ ಅಂತ ಮನುಸುನಿಗೆ ದ್ಯಾವೇಗೌಡ್ರು ಅನ್ಯಾಯ ದಿದ್ರೆ ಅವುರಿಗೆ ವಳ್ಳೆದಾಗದಿಲ್ಲ ಕಣಕ್ಕ."

"ದ್ಯಾವೇಗೌಡ ಏನನ್ಯಾಯ ಮಾಡಿದ್ದನ್ಲ?"

"ಏನು ಮಾಡ್ಯವುನೆ ಅಂದ್ರೆ ದೊಡಪ್ಪಾ, ದೇಗೌಡ ಅಂಡ್ ಸನ್ಸ್ ಪ್ರತಿದಿನ ಮೀಟಿಂಗ್ ವರೆ. ಆ ಮೀಟಿಂಗಲಿ ಇನ್ನು ಮ್ಯಾಲೆ ಯಾರನ್ನ ದ ಇಡಬೇಕು, ಯಾರನ್ನ ಹತ್ರಕೆ ಸೇರಿಸಿಗಬೇಕು ಕ ಚರ್ಚೆ ಆಯ್ತದೆ. ಚರ್ಚೆ ನಂತರ ಒಂದು ವು ಪಾಸಾಯ್ತದೆ. ಆ ಠರಾವಿನಂಗೆ ಮುಂದೆ ಯಲ್ಲ ಕಂಡೋಯ್ತದೆ."

"ಏನಪ್ಪ ಠರಾವು?"

"ಏನಂದ್ರೆ, ಈಗ ಪುಟ್ಟೇಗೌಡ ನಮ್ಮ ಪಾರ್ಟಿಗೆ ಬೇಕಿಲ್ಲ ದಾಗ ಇನ್ನು ಮುಂದೆ ದಳದೊರ್ಯಾರು ಪುಟ್ಟೇಗೌಡ್ರ ಕೋಗಂಗಿಲ್ಲ, ಅವುರ ಮಾತಾಡಸಂಗಿಲ್ಲ, ಅವುರ ರ್ಯಕ್ರಮಕ್ಕೆ ಹೋಗಂಗಿಲ್ಲ ಅನ್ನೊ ಸಂದೇಶ ರವಾನೆ ಯ್ತದೆ. ನಂತರ ಎಚ್.ಡಿ. ರೇವಣ್ಣ ವ್ಯಂಗ್ಯವಾಗಿ ಮಾತಾಡಕ್ಕೆ ಮಾಡ್ತನೆ."

"ಅವನಿಗೂ ವ್ಯಂಗ್ಯ ಬಂದತ್ತೆ?"

"ಇಸಿಸಿ, ಅವುನು ಹುಟ್ಟಿದ್ದೇ ವ್ಯಂಗ್ಯವಾಗಿ ಮಾತಾಡೋನ ಟೈಲಲ್ಲವೆ?"

"ಅದೇನೊ ನಿಜ."


"ಮತ್ತೆ ಈಗ್ಲೆ ನೋಡು 'ಪುಟ್ಟೇಗೌಡ್ರು, ಸಕಲೇಶ್‌ಪುರದ ನಾಥ ದಳ ಬಿಟ್ಟು ಹೋಯ್ತರಂತೆ, ಅಂದ್ರೆ ದೇವ್ರು ಅವುರಿಗೆ ಒಳ್ಳೆದು ಮಾಡ್ಲಿ' ಅಂತ ಅಂದವುನೆ. ಇದು ಯಂತ ಮಾತು ದೊಡಪ್ಪ."

"ಅಂಗನ್ನಬಾರ್ದು."

"ಅವುನಿಗೆ ಪುಟ್ಟೇಗೌಡನ ವಜಕಟ್ಟು ಗೊತ್ತೆ? ವಿಶ್ವನಾಥನ ಹೋರಾಟ ಏನು ಗೊತ್ತು? ವಿಶ್ವನಾಥ ನಂಜುಂಡಸ್ವಾಮಿ ಜೊತೆ ಹೋರಾಡಿದವುನು. ಯಾವತ್ತು ನಂಜುಂಡಸ್ವಾಮಿಗಳು ಸರ್ವಾಧಿಕಾರಿ ತರ ಮಾತಾಡಿದ್ರೋ ಅವತ್ತೆ ರೈತಸಂಘ ಬುಟ್ಟು ದಳ ಸೇರಿಕಂಡರು. ರೇವಣ್ಣನಂಥೋನು ಸರ್ವಾಧಿಕಾರಿ ತರ ಮಾತಾಡಿದ್ರೆ ಸುಮ್ಮನಿರಕ್ಕಾಯ್ತದಾ, ಅವುನೂ ಪಾರ್ಟಿ ಬುಡ್ತಾ ಅವುನೆ."

"ಪುಟ್ಟೇಗೌಡನಂಥ ರಾಜಕಾರಣಿ ಇಡೀ ರಾಜ್ಯದಲ್ಲೇ ಇಲ್ಲ ಕಣೊ."

"ನಿಜ ಕಣೊ ಉಗ್ರಿ. ಪಾಪ ದ್ಯಾವೇಗೌಡ್ರು ಮನೆ ಜೀತ ಮಾಡಿ ಬರಿಗೈಲಿ ಬತ್ತಾ ಅವುನೆ. ಇದೇ ಚೆಂದ್ರಾಪಟ್ನದಲ್ಲಿ ರಸ್ತೆಗೆ ಮಣ್ಣಾಕಿ ಬಿಲ್ಲೂ ತಗತಿದ್ದ ಸಣ್ಣ ಕಂತ್ರಾಟು ಚಲುವರಾಯಸ್ವಾಮಿಯ ಮಂತ್ರಿ ಮಾಡಿದ್ರು.



ಆದ್ರೆ ಪುಟ್ಟೇಗೌಡನ್ನ ಮಾಡಲಿಲ್ಲ."

"ಅವುನು ಆಗಬೇಕು ಅಂತ ಕುಣೆತಿರಲಿಲ್ಲ ಕಣೊ. ಆದ್ರು ಗೌರವಾಗಿ ನ್ಯಡಿಸಿಕೊಬೇಕಾಗಿತ್ತು. ವಳ್ಳೆ ಜನಗಳಿಗೆ ಅವುಮಾನ ಮಾಡಬಾರ್ದು."

"ಅಂಥಾ ಶ್ರೀಕಂಠಯ್ಯನ್ನೇ ಸೋಲುಸ್ತಿದ್ದ ಅಂದ್ರೆ ಅವುನೇನು ಸದರವಾನಿಕುಳವೇನ್ನ?" ಎಂದ ಸೀರ.

"ಓಹೊಹೊ, ಶ್ರೀಕಂಠಯ್ಯನಿಗಿಂತ್ಲೂ ಶ್ರೀಮಂತ ಅಂತ ತಿಳಿಕಂಡಿದ್ದಿ ನೀನು. ಅಂಗಲ್ಲ ಚಿಗಪ್ಪ, ಶ್ರೀಕಂಠಯ್ಯ ಮಹಾಭ್ರಷ್ಟ, ವ್ಯಭಿಚಾರಿ, ಕುಡುಕಾಗಿದ್ದ, ಇಂತ ಯಾವುದೂ ಇಲ್ಲದ, ಅಡ್ಡಪಂಚೆ ಉಟ್ಟಗಂಡು, ಅವಾಯ್ ಚಪ್ಪಲಿ ಹಾಯ್ಕಂಡು, ಕುರುಚಲು ಗಡ್ಡ ಬುಟಗಂಡು, ಸಾಲ ಸೂಲ ಮಾಡಿಕಂಡು, ಲಾಚರ್ರಾಗಿರೋ ರೈತನಂಗೆ ಕಾಣತಿದ್ದ ಚಿಗಪ್ಪ ಪುಟ್ಟೇಗೌಡ. ಅದ್ಕೆ ಗೆಲ್ಲದವುನು."

"ಪುಟ್ಟೇಗೌಡುನ್ನ ದ್ಯಾವೇಗೌಡ ಉಳಿಸಿಗತ್ತನೆ ಕಂಡ್ಯ."

"ದ್ವಡಪ್ಪ ನಿನ್ನ ಮಾತು ನಿಜ ಆದ್ರೆ ಉಚ್ಚೆ ಊದು ಮೀಸೆ ಬೋಳಿಸಿಗತ್ತೀನಿ. ಪುಟ್ಟೇಗೌಡನ್ನ ನೆಗ್ಲೆಟ್ ಮಾಡಿ, ದೂರ ಮಾಡಿ, ನಂತರ ನಮ್ಮ ಸಂಬಂಧಿಗೇ ಟಿಕೆಟ್ ಕೊಡಿ ಅನ್ನೊ ಹುಕುಂ ಬಂದಿರದು ದ್ಯಾವೇಗೌಡ ರಿಂದ್ಲೆಯಾ. ಇದು ಜಾರಿಯಾಗಿ ವರುಸಾಕೊರ್ಸಾಯ್ತು. ಆಗಿನಿಂದ ಬಾಲಕೃಷ್ಣೇಗೌಡ ಅನ್ನೊನು ಚನ್ನರಾಯಪಟ್ನದ ಪ್ರತಿ ಊರಿಗೆ ಹೋಗಿ, ಮದುವೆ, ತಿಥಿ, ಗಣೇಶನಬ್ಬ ಆರ್ಕೆಷ್ಟ್ರಾಕ್ಕೆ ಹಣ ಕೊಟ್ಟು, ಕನಿಷ್ಠ ಹದಿನೈದು ಸಾವುರ ಲೀಡಲ್ಲಿ ಗೆಲ್ತಿನಿ ಅಂತ ಹೇಳಿಕಂಡು ತಿರುಗ್ತಾ ಅವುನೆ. ಸಿಚುಯೇಷನ್ ಹಿಂಗಿರುವಾಗ ದ್ಯಾವೇಗೌಡ ಉಳಿಸಿಗತ್ತನೆ ಅಂತ ನೀನು ಸುಳ್ಳೇಳತಿ."

"ಬರ್ಲಿಬುಡು ಇನ್ನೊಬ್ಬ ಯಮ್ಮೆಲ್ಲೆ ವಚ್ಚೆ ಇರಬೇಕು ಅನ್ನದೇನು."

"ಇದಪ್ಪ ದೇವೇಗೌಡ್ರ ವಾಯ್ಸು. ಹೊಸಹೊಸ ಎಮ್ಮೆಲ್ಲೆ ಬರಕ್ಕೆ ನಮ್ಮ ತಕರಾರು ಏನು ಇಲ್ಲ ದೊಡಪ್ಪ, ಆದ್ರೆ ಎಷ್ಟು ಜನ ಅಂತ ನಿನ್ನ ಕಳ್ಳುಬಳ್ಳಿ ತಂದು ತುಂಬತಿ? ಅದೂ ಡೆಮಾಕ್ರಸಿಲಿ?"

"ಡೆಮಾಕ್ರಸಿಲಿ ಜನ ಆರಿಸಿಗಂಡ್ರೆ ನಾನೇನು ಮಾಡನ ಅಂತನೆ ಕಣೊ."

"ಆರಿಸಿ ಬರ್ಲಿ ಕಣೊ ಉಗ್ರಿ. ಆದ್ರೆ ವಳ್ಳೆ ಜನಗಳ ತುಣಿಯದ್ಯಾಕೆ? ಅಲ್ಲಿಗೇನಾಯ್ತು, ವಳ್ಳೆ ಕಮ್ಯುನಿಟಿ ಲೀಡ್ರ ಬಲಿತಗಳದ ಇನ್ನು ನಿಲ್ಲಿಸಿಲ್ಲ ನೀನು ಅಂದಂಗಾಯ್ತು. ಆಗೇನೊ ನೀನು ಒಬ್ಬನೇ ಬಲಿ ತಗತಿದ್ದೆ. ಈಗ ಮಕ್ಳು ಸೇರಿಕಂಡು ಮುಗುಸ್ತಾ ಅವುರೆ."

"ಕುಮಾರಸ್ವಾಮಿ ಏನಂತನೇ?"

"ಅವುನೇನಂದನೂ? ನಮ್ಮಣ್ಣನಿಗೆ ನಾನು ಬುದ್ಧಿ ಹೇಳಕ್ಯಾಗಲ್ಲಾ ಅಂದವುನೆ."

"ಅವುನೇನೊ ಪಾರಿನ್ನ ಬ್ಯಾಂಕಲ್ಲಿ ದುಡ್ಡು ಮಡಿಗ್ಯವುನೆ ಅಂತರಲ್ಲಾ ನಿಜವೆ?"

"ಹದುನಾಲ್ಕುವರೆ ಸಾವುರ ಕೋಟಿ ಮಡಗ್ಯವುನೆ ಗೊತ್ತೆ."

"ಆಟೊಂತರ ದುಡ್ಡು ಮಡಗಿದ್ದನೇನ್ಲಾ? ಅದೆಲ್ಲಿಂದ ತಂದಾ?" ಎಂದ ಸೀರ.

"ಎಲ್ಲಿಂದ್ಲೊ ತಂದಿಲ್ಲ ಚಿಗಪ್ಪ, ಈ ಕರ್ನಾಟಕದಲ್ಲೇ ಸಂಗ್ರಯಿಸಿರೊ ದುಡ್ಡದು. ಕೇವಲ ಇಪ್ಪತ್ತು ತಿಂಗಳು ಅಧಿಕಾರದಲ್ಲಿದ್ದು ಸಾವುರಾರು ಕೋಟಿ ಬಾಚಿಕಂಡು ಪಾರಿನ್ ಬ್ಯಾಂಕಲ್ಲಿ ಮಡಗತನೆ ಅಂದ್ರೆ ಏನೇಳನ ಚಿಗಪ್ಪ."

"ನಿಜವಾದ ಗಂಡು ಬುಡವುನು!"

"ನಿಜ ಚಿಗಪ್ಪ, ದ್ಯಾವೇಗೌಡನಂಥ ರಾಜಕಾರಣಿ ವಟ್ಟೆಲುಟ್ಟಿ ಕೇವಲ ಟ್ವಂಟಿ ಮಂತಲ್ಲಿ ಹಾದುನಾಕುವರಸಾವುರ ಕೋಟಿ ಬಾಚಗಂಡಿದ್ದೂ ಅಲ್ಲದೆ, ರಾಧಕ್ಕನ್ನ ಗಾಂಧರ್ವ ವಿವಾಹ ಆಗಿ, ಅವುಳಿಗೂ ಬಂಗ್ಲೆ ತಕ್ಕೊಟ್ಟು, ಫಿಲಂ ಪ್ರೊಡ್ಯೂಸ್ ಮಾಡ್ತನೆ ಅಂದ್ರೆ ನಿನ್ನ ಭಾಗಕ್ಕೆ ಅವುನು ಗಂಡಸೆಯಾ. ಆದ್ರೆ ಇಂತಹ ಹಿಸ್ಟರಿ ಇಟಗಂಡಿರೊ ಮನುಸುನ್ನ ಮುಂದಿಟಗಂಡು ಅದ್ಯಂಗೆ ಯಲಕ್ಷನ್ನಿಗೋಯ್ತಿರಿ ಅಂತ ದ್ಯಾವೇಗೌಡ್ರ ಕೇಳಬೇಕಾಗ್ಯದೆ."

"ಅದ್ಕೆ ಅಂತೆ ಕಣೊ ಗೌಡ್ರು ರೇವಣ್ಣ ಭವಾನಿಯ ಪುಸಲಾಯಿಸ್ತಾಯಿದ್ದನಂತೆ."

"ರೇವಣ್ಣ ಆಗ್ಲೆ ಯರಡು ಬಲಿ ತಗಂಡನಲ್ಲೊ, ನಂದೊಂದು ಸಜೇಶನ್, ಏನಪ್ಪಾ ಅಂದ್ರೆ, ಪುಟ್ಟೇಗೌಡನಂಥೋರು ರೇವಣ್ಣ ಕುಮಾರಸ್ವಾಮಿ ತರದ ಲೀಡರ್‌ಶಿಪ್ ಬುಟ್ಟು ಮನಿಗೋಗದು ಒಳ್ಳೆದು."

"ಅವುನು ಮನಿಗೋಗಕ್ಕೆ ಚಂದ್ರಾಪಟ್ನದ ಜನ ಬುಡಬೇಕಲ್ಲೊ. ಹಿಂದೊಂದು ಸರಿಯಾ ದ್ಯಾವೇಗೌಡ ರಾಮಕೃಷ್ಣ ಹೆಗಡೆ ಎದುರಿಗೆ ಹೋರಾಡತಿದ್ದಾಗ, ತಾಲೂಕಿನ ಜನ ಮರಿ ಕೊಂದು ಕಾಯಿಕೊಟ್ಟು ದ್ಯಾವೇಗೌಡನ ಕೈಹಿಡುದ್ರು. ಈಗ್ಲೂ ರೇವಣ್ಣನ ವಿರುದ್ಧ ಆದ್ರೆ ಪುಟ್ಟೇಗೌಡನ ಕೈ ಹಿಡದೇ ಹಿಡಿತರೆ."

"ಕಾಲ ಬದ್ಲಾಗ್ಯದೆ ಕಣೊ ಉಗ್ರಿ. ಕುಮಾರಣ್ಣ ಯಲಕ್ಷನ್ನಿಗೆ ಪಾರಿನ್ ದುಡ್ಡು ತಂದು ಹಂಚಿದ ಅಂದ್ರೆ ಪುಟ್ಟೇಗೌಡ ಪುರ್ರಂತ ಹಾರ್‍ಯೊಯ್ತನೆ."

"ನೋಡನಿರೊ, ಚಂದ್ರಾಪಟ್ನದಲ್ಲೂ ಬ್ಯಾರೇ ಪಾರ್ಟಿಗಳಿವೆ. ಪುಟ್ಟೇಗೌಡ್ರಿಗೆ ಬರೋ ವೋಟು ಬಂದ್ರು ಸಾಕು."

"ಪುಟ್ಟೇಗೌಡ ದಳ ಬುಟ್ರೆ ಎಲ್ಲಗೋದನ್ನ?"

"ಇವತ್ತೇನಕ್ಕ, ಸೇರದೆ ಆದ್ರೆ ಬೇಕಾದಷ್ಟು ಪಾರ್ಟಿ ಅವೆ. ರಾಮುಲು ಪಾರ್ಟಿ, ಪುಟ್ಟಣ್ಣಯ್ಯನ ಪಾರ್ಟಿ, ಎಡೂರಪ್ಪನ ಪಾರ್ಟಿ, ಕಾಂಗ್ರೆಸ್ಸು, ಬಿಜೆಪಿ ಈ ತರ ಅವೆ. ಆದ್ರೆ ಪುಟ್ಟೇಗೌಡ್ರಿಗೆ ಕಾಂಗ್ರೆಸ್ಸು ಚೆನ್ನಾಗಿತ್ತು. ಆದ್ರೆ ಅಲ್ಲಿರೊ ಯಗ್ಗಣಗಳಾಗ್ಲೆ ಪ್ರಚಾರ ಮೆಟ್ಟಿ ಪುಟ್ಟೇಗೌಡ ಇಲ್ಲಿ ಬರದು ಬ್ಯಾಡ ಅಂತ ಕೂಗ್ತ ಅವಂತೆ."

"ಅಂಗರೆ ಎಡೂರಪ್ಪ ಯಳಕಂಡು ಬುಡ್ತನೆ ಕಂಡ್ಲ" ಎಂದ ಸೀರ.

"ಎಡೂರಪ್ಪನ ಪಾರ್ಟಿಗೋಗೊ ತರ ಇಲ್ಲ ಚಿಗಪ್ಪ ಪುಟ್ಟೇಗೌಡ. ಅವುನು ದೇವೇಗೌಡ್ರ ಮನೆ ಅಂಗಳಕೆ ಭಾಳ ಸೂಟಾಗಿದ್ದ ರಾಜಕಾರಣಿ. ಅವುನು ಮನೆ ವರಗಡೆ ನಿಂತಿದ್ರೆ ದ್ಯಾವೇಗೌಡ್ರಿಗೆ ಏನೊ ಸಮಾಧಾನ. ಆದ್ರೆ ಈಗ ಗೌಡ್ರು ಕಿಟಕಿ ಬಾಗಲು ಮುಚಗಂಡು ಕೂಗಿದ್ರು ಮಾತಾಡದಂಗಾಗ್ಯವುರೆ. ಮುಂದೆ ಅದ್ಯಾವ ಮನೆ ಬಾಗಲ ತಟ್ಟತರೊ ನೋಡನಿರು." ■

ಹೋರಾಟದ ಆಯಾಮ



ಈ ಚಿಕ್ಕ ಸಂಗತಿಗಳನ್ನು ಇಲ್ಲಿ ಹೇಳುತ್ತಿರುವುದಕ್ಕೆ ನಿಮ್ಮ ಸಹನೆ ಕೇಳುತ್ತಿದ್ದೇನೆ. ಮೊನ್ನೆ ಚೆಯಲ್ಲಿ ವಿಷಯ ಬೆಳೆದು 'ಯಾವ ರೀತಿಯ ಪ್ರತಿಭಟನೆ ಒಳ್ಳೆಯದು?' ಎಂಬ ಪ್ರಶ್ನೆ ಬಂತು. ಭಟನೆಗಳಲ್ಲಿ ಅನೇಕ ರೀತಿ ಇವೆಯೆ? ಹೇಗೆ ಪ್ರತಿಭಟಿಸಬೇಕು? ನಾನು ಹೆಚ್ಚು ಯೋಚಿಸದೆ ತಿಭಟನೆ ಕೂಡ ಸಂಪನ್ನವಾಗಿರಬೇಕು, ದ್ವೇಷದಿಂದ ಕೂಡಿರಬಾರದು' ಅಂದೆ. 'ಹಾಗಿದ್ದರೆ ಅದು ಭಟನೆಯಾಗುವುದಿಲ್ಲ' ಎಂದು ಜೊತೆಗಿದ್ದವರು ಹೇಳಿದರು. ಆದರೆ ಇದೆಲ್ಲ ಶುರುವಾದಾಗಲೇ ಮನಸ್ಸಿನಲ್ಲಿ ಒಂದು ಕಡೆ ಪೆರಿಯಾರ್, ಇನ್ನೊಂದು ಕಡೆ ಲೋಹಿಯಾ ಇದ್ದರು. ಪೆರಿಯಾರ್‌ಗೆ ರತದ ವೈದಿಕ ಸಂಸ್ಕೃತಿಯ ದಬ್ಬಾಳಿಕೆಯನ್ನು ಕಂಡರಾಗದು; ಅದನ್ನು ಜನಕ್ಕೆ ವಿವರಿಸಿ ಹೇಳಲು ಬ್ರಾಹ್ಮಣ, ಅವನಿಂದ ರೂಪಿತನಾದ ರಾಮನನ್ನು ಇಟ್ಟುಕೊಂಡು ವ್ಯಂಗ್ಯವಾಗಿ ಮಾತಾಡುತ್ತಿದ್ದರು. ೕಹಿಯಾ ಹೆಚ್ಚು ಸಂಕೀರ್ಣ ವ್ಯಕ್ತಿ; ಅವರಿಗೆ ವೈದಿಕ ಸಂಸ್ಕೃತಿಯ ವೈಶಿಷ್ಟ್ಯ, ಶೋಷಣೆ, ಪ್ರತಿಭೆ ಗೊತ್ತಿದ್ದವು. ಹಾಗೆಯೇ ಲೋಹಿಯಾ ಅವರಲ್ಲಿ ಪೆರಿಯಾರರ ಸಿಟ್ಟು ಕುತೂಹಲ ಕೆರಳಿಸುತ್ತಿತ್ತು. ತೀರಾ ಯಿಂದ ಮಾತಾಡುವ ವ್ಯಕ್ತಿ ತೀರಾ ಉಗ್ರವಾಗಿ ಪ್ರತಿಭಟಿಸುವ ವ್ಯಕ್ತಿ ಲೋಹಿಯಾ ತರಹದವರಿಗೆ ಹಾಸ್ಯಾಸ್ಪದರೂ, ಜನಕರೂ ಆಗಿ ಕಾಣುತ್ತಿದ್ದರು; ಎಲ್ಲ ಅಸಹಾಯಕರಂತೆಯೇ ಲೋಹಿಯಾ ಅವರಲ್ಲಿ ಅಂಥವರು ಪ್ರೀತಿಯನ್ನು ದ ಹುಟ್ಟಿಸುತ್ತಿದ್ದರು. ಪೆರಿಯಾರ್ ಪ್ರತಿಭಟಿಸಿದಾಗ ಪ್ರತಿಭಟನೆಗೊಳಗಾದವರಲ್ಲಿ ಭಯ, ಅಸ್ಥಿರತೆ ಮೂಡುತ್ತಿತ್ತು, ೕಹಿಯಾ ಪ್ರತಿಭಟಿಸಿದಾಗ ಆತ್ಮನಿರೀಕ್ಷೆ ಕೂಡ ಮೂಡುತ್ತಿತ್ತು, ಎಲ್ಲ ಚಳವಳಿ, ಆಕ್ಷೇಪಣೆ, ಖಂಡನೆಯ ಉದ್ದೇಶ ದ ಬದುಕನ್ನು ಅರ್ಥಪೂರ್ಣಗೊಳಿಸುವುದೇ ಆಗಿರುವುದರಿಂದ ಪ್ರತಿಭಟನೆ ಕೂಡ ವೈಯಕ್ತಿಕವೂ ಸ್ವಾರ್ಥಮಯವೂ ಕೂಡದು; ಹಾಗಾದೊಡನೆ ಪ್ರತಿಭಟನೆ ಸಿನಿಕವಾಗುತ್ತದೆ. ಯುದ್ಧವನ್ನು ಇಷ್ಟಪಡದವರಿಗೆ ಕೂಡ ಸದುದ್ದೇಶದ ದ್ಧ ಹೇಗೆ ಅನಿವಾರ್ಯವಾಗುತ್ತದೋ ಹಾಗೆಯೇ ಪ್ರತಿಭಟನೆ, ಸಜ್ಜನತನದಿಂದ ಹುಟ್ಟಿದೆ ಇದ್ದಾಗ ಪ್ರೀತಿಯ ಸ್ವರ ದಿರುತ್ತದೆ.

ಕೋಮಿನ್ ಚರ್ಚಿನ ವಿರುದ್ಧ ಹೋರಾಡಿದ ಲೂಥರ್ ಧರ್ಮದ ಬಗ್ಗೆಯೇ ಸಂದೇಹಪಡುವಷ್ಟು ಜ್ಞಾಗಿದ್ದುದರಿಂದ ಹೋರಾಟದ ಮಧ್ಯೆ ದಿಕ್ಕೆಟ್ಟು ಕೂರುತ್ತಿದ್ದ. ಅನೇಕ ಸಲ ಮನುಷ್ಯನಿಗೆ ಒಂದು ವಿಸ್ಮಯ, ಪ್ರೇಯಸಿಯ ಸ್ಪರ್ಶದ ಹರ್ಷವನ್ನು ಕೂಡ ಕೊಡಲಾಗದ ಧರ್ಮವನ್ನು ಜಪಿಸುತ್ತಾ ಕೂರುವುದು ನಿರರ್ಥಕ ಅನ್ನಿಸುತ್ತಿತ್ತು.

ಮನುಕುಲ ಕಟ್ಟಿಕೊಂಡ ಜಾತಿಪದ್ಧತಿ, ಧರ್ಮದ ಗೊಂಡಾರಣ್ಯ, ಭ್ರಮೆಯ ಕೊತ್ತಳಗಳನ್ನು ಅರಿಯುತ್ತಾ ಹೋದ ಸಿದ್ಧಾರ್ಥ ತನ್ನ ಪ್ರೀತಿಯ ಸರಳ ನುಡಿಗಳನ್ನು ಆಡುವುದರ ಮೂಲಕವೇ ಧರ್ಮದ ಪಟ್ಟಭದ್ರರಲ್ಲಿ ಭಯ ಹುಟ್ಟಿಸಿದ. ಧಾರ್ಮಿಕ ಗುರುಗಳು ಅನ್ನಿಸಿಕೊಂಡಿದ್ದ ಸಮಾಜದ್ರೋಹಿಗಳಿಗೆ ಧರ್ಮ ಲಾಭದ, ಜೀವನೋಪಾಯದ, ಅಧಿಕಾರದ ಮೂಲ; ಅದಿಲ್ಲದೆ ಅವರ ದುಷ್ಟ ಜೀವನವಿಲ್ಲ. ಹೀಗಾಗಿ ಒಂದು ರೀತಿಯಲ್ಲಿ ಪ್ರತಿಭಟನಾಕಾರನಂತೆ ಕಂಡ ಸಿದ್ಧಾರ್ಥ ಇನ್ನೊಂದು ರೀತಿಯಲ್ಲಿ ತನ್ನ ವೈಯಕ್ತಿಕ ಸಮಸ್ಯೆಗಳೊಂದಿಗೆ ಸೆಣಸುತ್ತಿರುವ ಮನುಷ್ಯನಾಗಿದ್ದ. ಇನ್ನೊಬ್ಬನ ನೀಚತನದ ಬಗ್ಗೆ ಮಾತಾಡುವ ಪ್ರತಿಯೊಬ್ಬನೂ ತನ್ನಲ್ಲಿನ ನೀಚತನದ ಸಾಧ್ಯತೆಗಳನ್ನು ಅರಿತಿರುತ್ತಾನೆ; ನಾನೊಮ್ಮೆ ಹೇಳಿದಂತೆ, ಕೊಲೆಗೆ ತಲೆದಂಡದ ಶಿಕ್ಷೆ ಕೊಡುವ ನ್ಯಾಯಾಧೀಶ ತನ್ನಲ್ಲಿಯ ಕೊಲೆಗಡುಕನಿಗೆ ಎಚ್ಚರಿಕೆ ನೀಡಿರುತ್ತಾನೆ.



ಆದ್ದರಿಂದಲೇ ಪ್ರತಿಭಟನೆ ಎಂದೂ ತನ್ನ ಹೊರಗಿನ ದುಷ್ಟ ವ್ಯಕ್ತಿ ಅಥವಾ ವ್ಯವಸ್ಥೆಯನ್ನು ಖಂಡಿಸುವ ಕ್ರಿಯೆ ಮಾತ್ರ ಆಗಿರುವುದಿಲ್ಲ; ಅದು ಒಂದು ಗೊತ್ತಾದ ಸಂದರ್ಭದಲ್ಲಿ ಮನುಕುಲದ ದೋಷಗಳನ್ನು ಖಂಡಿಸುವ ಕ್ರಮವಾಗಿರುತ್ತದೆ. ಗಾಂಧೀಜಿಗೆ ತಮ್ಮ ನಾಡಿನ ಬಗ್ಗೆ ಆಕ್ಷೇಪಣೆ ಮಾತ್ರ ಇರಲಿಲ್ಲ, ತಮ್ಮ ಬಗ್ಗೆ ಕೂಡ ಅಸಹನೆ ಇತ್ತು. ಆದ್ದರಿಂದಲೇ ಅವರು ತಮ್ಮನ್ನು ಸರಿಯಾಗಿಟ್ಟುಕೊಳ್ಳಲು ಯತ್ನಿಸುತ್ತಿದ್ದರು. ತಮ್ಮ ಪ್ರಯತ್ನ ಇತರರಿಗೂ ಮಾದರಿಯಾಗಬಹುದೆಂದು ಸ್ವಲ್ಪ ನಾಟಕೀಯವಾಗಿ ವರ್ತಿಸುತ್ತಿದ್ದರು.

ಈ ದೃಷ್ಟಿಯಿಂದಲೇ ಯಾವುದು ವೈಯಕ್ತಿಕ, ಯಾವುದು ಸಾರ್ವಜನಿಕ ಎಂದು ಪ್ರತಿಭಟನಾಕಾರ ಯೋಚಿಸಿರಬೇಕಾಗಿರುತ್ತದೆ. ವ್ಯಕ್ತಿಗೆ ಇರುವ ನಿಯಮಗಳು, ಸಾರ್ವಜನಿಕ ವಲಯಕ್ಕೆ ಇರುವ ನಿಯಮಗಳು ಸ್ವಲ್ಪ ಬೇರೆಯಾಗಿರುತ್ತವೆ. ಇದನ್ನು code of conduct- 'ನೀತಿ-ಸಂಹಿತೆ'- ಎಂದು ಕರೆದರೆ ಆ ಮಾತುಗಳ ಅರ್ಥವನ್ನು ಹುಡುಕಬಹುದು.

● ಮಾರ್ಚ್ 11, 1998

ರಾಮಮಂದಿರ ಅಲ್ಲ ನಾಯಿಮಂದಿರ!

ಯಾಗ ಮಾಡುವವರು ಒಂಟಿಯಾಗಿ ಆದರೂ ಮಾಡಬಹುದು. ಗಂಡನ ಜೊತೆ ಆದರೂ ಮಾಡಬಹುದು. ಬಂಧು ಬಾಂಧವರ ಜೊತೆಯಾದರೂ ಮಾಡಬಹುದು. ಆದರೆ ನಾಯಿಮರಿ ಜೊತೆ ಮಾಡಬಹುದೆ? ಈ ಪ್ರಶ್ನೆ ಆಸ್ತಿಕ ಮಹಾಶಯರ ತಲೆ ತಿನ್ನುತ್ತಿದೆಯಂತೆ. ಹಣ ಒಂದು ಬಿಸಾಕಿದರೆ ನಾಯಿನರಿಗಳ ಜೊತೆಯಾದರೂ ಯಾಗ ಮಾಡಿಸುವ ವೇದ ವಿದ್ಯಾಪಾರಂಗತರು ಸಿಗಬಹುದು. ಅದಲ್ಲ ಪ್ರಶ್ನೆ. ಮನೆಯಲ್ಲೋ ಗಿನೆಯಲ್ಲೊ ಮಾಡಿಕೊಂಡು ಹಾಳಾಗಲಿ. ದೇವಾಲಯದ ಒಳಗೆ ಹೀಗೆ ಮಾಡಬಹುದೆ? ನಾಯಿ ಒಳಗಡೆಗೆ ಬಂದರೇ ಮೈಲಿಗೆ ಆಗುತ್ತದೆ ಎಂದು ಭಾವಿಸಿರುವ ಪವಿತ್ರ ಸ್ಥಳದಲ್ಲಿ ಅದರ ಜೊತೆ ಯಾಗ ಮಾಡುವುದು ಸಾಧುವೆ? ಇದು ಧಾರ್ಮಿಕ ಸಂಪ್ರದಾಯದ ವಿರೋಧ ಅಲ್ಲವೆ? ಎಂಬಂತಹ ಪ್ರಶ್ನೆಗಳು ಕಾಡುತ್ತಿವೆಯಂತೆ. ಇವಕ್ಕೆಲ್ಲ ಮೂಲ ಆದದ್ದು ಸಿನಿಮಾ ನಟಿ ಪೂಜಾಗಾಂಧಿಯಂತೆ!

ಅದು ಏನಾಗಿತ್ತು ಅಂದರೆ ಈ ಸಿನಿಮಾ ನಟಿ ಹೊರೆಹೊತ್ತ ಮಹಿಳೆಯನ್ನು ಅಧಿಕಾರಕ್ಕೆ ತರಲೇಬೇಕು ಅಂತ ಹನೂರಿಗೆ ಬಂದಿದ್ದರಂತೆ. ಅದರ ಪಕ್ಕದಲ್ಲೇ ಕೊಳ್ಳೆಗಾಲ ಇತ್ತು, ಆ ಊರು ಅಂದರೆ ಮಾಟ, ಮಂತ್ರಗಳಿಗೆ ಹೆಸರು ಮಾಡಿದೆ ಅನ್ನುವ ಪ್ರತೀತಿ ಇದೆ. ಅಲ್ಲಿ ಯಾಗ ಮಾಡಿಸಿದರೆ ಉಜ್ವಲ ಭವಿಷ್ಯ ಖಾತರಿ ಎಂದು ಯಾರೋ ಆಕೆಯ ಕಿವಿ ಊದಿರಬೇಕು. ಸಿನಿಮಾ ಜನರಿಗೆ ಇಂತಹವುಗಳ ಮೇಲೆ ಅಪಾರ ನಂಬಿಕೆ ಅಲ್ಲವಾ. ಈ ಕಿವಿ ಊದಾಟ ನೊಚ್ಚಗೆ ಆಗಿರಬೇಕು. ಅಲ್ಲಿನ ರಾಮಮಂದಿರದಲ್ಲಿ ಅದಕ್ಕೆ ಏರ್ಪಾಡು ಮಾಡಿಕೊಂಡರಂತೆ.

ನಿಗದಿತ ದಿವಸ. ವೇಳೆಗೆ ಸರಿಯಾಗಿ ಪೂಜಾ ಕಾರು ರಾಮಮಂದಿರದ ಬಳಿಗೆ ಬಂದಿತಂತೆ. ಅಲ್ಲಿ ಜನರ ಜಾತ್ರೆಯೇ ನೆರೆದಿತ್ತಂತೆ. ಚೆಂದುಳ್ಳಿ ಚೆಲುವೆ ನೋಡಿ ಕಣ್ತುಂಬಿಸಿಕೊಳ್ಳೋಣ ಎಂದು ಬಂದವರಿರಬೇಕು. ರಾಮಮಂದಿರದ ಒಳಗೆ ಯಾಗ ಮಾಡಿಸಲು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡು ವೇದವಿದ್ಯಾ ಪಾರಂಗತರು ಆಕೆಯ ಆಗಮನದ ಸುಮೂಹೂರ್ತಕ್ಕಾಗಿ ಕಾಯುತ್ತಿದ್ದರಂತೆ. ಒಳಗೆ ಹೋಗಲು ಅವರಿಗೆ ಒಂದು ಸಮಸ್ಯೆ ಎದುರಾಯಿತಂತೆ. ಆಕೆಯ ಜೊತೆ ಎರಡು ಪುಟ್ಟ ನಾಯಿಮರಿಗಳಿದ್ದವಂತೆ. ಕಾರಿನಲ್ಲೇ ಬಿಟ್ಟುಹೋದರೆ ಅವು ಉಸಿರುಗಟ್ಟಿ ಸಾಯಬಹುದು ಎಂಬ ಆತಂಕ ಕಾಡಿತಂತೆ. ಕಾರು ಡ್ರೈವರ್‌ನ ನಾಯಿ ಡ್ರೈವರ್ ಮಾಡೋಣ ಎಂದರೆ ಆತನೂ ಯಾಗದಲ್ಲಿ ಭಾಗವಹಿಸುವ ಅನಿವಾರ್ಯತೆ ಇತ್ತಂತೆ. ಸಾಲದ್ದಕ್ಕೆ ಅಪಾರ ಜನ ಸಂದಣಿಗೆ ಬೆದರಿ ಪಾಪದ ನಾಯಿಮರಿಗಳು ಗಲಾಟೆ ಮಾಡುತ್ತಿದ್ದವಂತೆ. ಹೀಗಾಗಿ ರಾಮಮಂದಿರದ ಒಳಕ್ಕೆ ಪ್ರೀತಿಯ ನಾಯಿಮರಿಗಳನ್ನು ಕೊಂಡೊಯ್ಯುವುದು ಅನಿವಾರ್ಯ ಆಯಿತಂತೆ. ಒಳಗಡೆಗೇ ತಂದಮೇಲೆ ಇನ್ನು ಏನು ಎಂದು ಅವುಗಳನ್ನೂ ಯಾಗದಲ್ಲಿ ಭಾಗವಹಿಸುವಂತೆ ನೋಡಿಕೊಂಡರಂತೆ. ಅವು ಯಾವ ಜನ್ಮದಲ್ಲಿ ಮಾಡಿದ ಪುಣ್ಯವೋ ಈಗ ಫಲ ನೀಡಿತ್ತು!

ದೇವಸ್ಥಾನಗಳಲ್ಲಿ ನಡೆಯಬಾರದ್ದು ನಡೆಯುವುದಿಲ್ಲ ಅಂತಿಲ್ಲ, ಆದರೆ ಅವು ಪ್ರಚಾರಕ್ಕೆ ಬಾರದಂತೆ ಹಾಗೇ ಮುಚ್ಚಿ ಹಾಕುವುದು ಲಾಗಾಯ್ತಿನಿಂದಲೂ ನಡೆದು ಬಂದಿರುವ ಪದ್ಧತಿ. ಇದೂ ಹಾಗೇ ಆಗುತ್ತಿತ್ತೋ ಏನೋ. ಪೂಜಾಗಾಂಧಿಯಂತಹ ಪೂಜಾಗಾಂಧಿಯೇ ಬಂದು ರಾಮಮಂದಿರದಲ್ಲಿ ಯಾಗ ಮಾಡಿದರು ಅಂದರೆ ಪ್ರತಿಷ್ಠೆ ಹೆಚ್ಚುತ್ತೆ, 'ಉಜ್ವಲ ಭವಿಷ್ಯ ಇರುತ್ತೆ' ಎಂದು ಆಡಳಿತ ಮಂಡಳಿಯೇ ಯೋಚಿಸಿತ್ತೋ ಅಥವಾ ಮಾಧ್ಯಮದವರ ವರಾತವೋ ಗೊತ್ತಿಲ್ಲ. ಅಂತೂಇಂತೂ 'ಪೂಜಾಗಾಂಧಿ ನಾಯಿ ಯಾಗ' ಸುದ್ದಿ ಆಯಿತು!

ಮಾಧ್ಯಮಗಳಲ್ಲಿ ಇದು ಬಂತು ನೋಡಿ. ಪೂಜಾ ಗಾಂಧಿ ಜೊತೆಗೆ ನಾಯಿ ಮರಿಗಳೂ ಜನರ ಬಾಯಿಗೆ ಎಲೆಅಡಿಕೆ ಆದುವು. ಕೆಲವರು 'ತಾನು ದೊಡ್ಮನ್ಸೆ ಅಂತಾವ ಗುಡಿ ಒಳಕ್ಕೆ ನಾಯಿ ಕರ್‍ಕೊಂಡು ಹೋಗೋದುಂಟೇನಯ್ಯ'



ಅಂತ ಆಕ್ರೋಶ ವ್ಯಕ್ತಪಡಿಸಿದರೆ, 'ನಾಯಿ ಗಲೀಜಿನ ಮಧ್ಯೆಯೇ ಯಾಗ ಮಾಡಿದಳಂತಲ್ಲಾ ಅವಳು ಇನ್ನು ಎಂತಹ ಕೊಳಕು ಮುಂಡೆ ಇರಬೇಕು' ಅಂತ ಮಡಿ ಹೆಂಗಸರು ಮೂಗು ಮುರಿಯುತ್ತಿದ್ದಾರಂತೆ. ರಾಮಮಂದಿರಕ್ಕೆ ದಾನ ಮಾಡಿದ್ದವರು 'ಮದುವೆ ಮುಂಜಿ, ಯಾಗಯಜ್ಞ ಅಂತಹ ಶುಭಕಾರ್ಯಗಳಿಗೆ ಮಾತ್ರ ಇದನ್ನು ಬಳಸಬೇಕಿತ್ತು. ಅದನ್ನು ಬಿಟ್ಟು ಈ ರೀತಿ ಅಪವಿತ್ರಗೊಳಿಸಿದರಲ್ಲಾ' ಎಂದು ಅವಲತ್ತುಕೊಳ್ಳುತ್ತಿದ್ದಾರಂತೆ.

'ಏನ್ರೀ ಹಿಂಗಿಂಗೆ ಆಯಿತಂತಲ್ಲಾ, ನೀವು ಮಾಡಿದ್ದು ಸರಿಯೇನ್ರಿ' ಅಂತ ಯಾರೋ ಕೇಳಿದ್ದಕ್ಕೆ, 'ಪಡಸಾಲೆಯಲ್ಲಿದ್ದದ್ದು ನನ್ನ ನಾಯಿ ಮಾತ್ರ ಅಲ್ಲ, ಅದರ ಮೂಲೆಯಲ್ಲಿ ವೇದ ವಿದ್ಯಾ ಪಾರಂಗತರ ನಾಯಿಯೂ ಇತ್ತು' ಎಂದರಂತೆ ಪೂಜಾ ಗಾಂಧಿ!

ರಾಜಕೀಯದ ತರಬೇತಿ ಸರಿಯಾಗಿಯೇ ಆಗಿದೆ ಅಂದ ಹಾಗಾಯಿತು!

ಆಕೆಯ ಮಾತನ್ನು ಕೇಳಿದರೆ ಅದು ರಾಮಮಂದಿರ ಅಲ್ಲ, ನಾಯಿ ಮಂದಿರ ಅನ್ನೊ ಅನುಮಾನ ಬರುತ್ತೆ ಅಲ್ಲವಾ....

ಧರ್ಮ ರಕ್ಷಕರ ಸಂಕಟ

'ರಾಮ ಒಳ್ಳೆಯ ಗಂಡ ಅಲ್ಲ.'

ಯಾವ ರಾಮ?

ಹಾದಿಬೀದೀಲಿರೋ ಉಡಿಪಡಿ ರಾಮ ಅಲ್ಲ, ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ!

ಸೀತೆ ಬಿಟ್ಟು ರಾಮ ಇಲ್ಲ, ಸೀತಾರಾಮ ಅವನು. ಅಂತಹ ಮಹಾನುಭಾವನಿಗೆ ಇಂತಹ ಅವಹೇಳನಕಾರಿ ಮಾತೆ?

ಆಘಾತವಾಯಿತು ಆಸ್ತಿಕರ ಧಾರ್ಮಿಕ ಭಾವನೆಗಳಿಗೆ!

ಕೆಲವು ಪಾಪಂಡಿಗಳು ಇರುತ್ತಾರೆ. ಹಿಂದೂ ಧಾರ್ಮಿಕ ಭಾವನೆಗಳಿಗೆ ಘಾಸಿ ಮಾಡುವುದೇ ಅವರ ಪರಮ ಪವಿತ್ರ ಕರ್ತವ್ಯ ಆಗಿದೆ. ಹೀಗೆ ಆಗದಂತೆ ತಡೆಯಲು ಧರ್ಮರಕ್ಷಕ ಪಡೆಯೇ ಸದಾ ಸಿದ್ಧ ಇರುತ್ತದೆ ಎಂಬುದು ನಿಜ. ಒಂದುವೇಳೆ ಅವರ ಕೈಮೀರಿ ಹೀಗೆ ನಡೆದದ್ದೇ ಆದರೆ ಹಾಗೆ ಅವಹೇಳನ ಮಾಡಿದವನ ಸುತ್ತುವರಿದು ಕೇಳುತ್ತದೆ- 'ನಿನ್ನ ಹೆಸರೇನು?'

ಅವನು ಹೇಳಿದ್ದನ್ನು ಕೇಳಿಸಿಕೊಳ್ಳುತ್ತದೆ.

'ಹಾಗಾದರೆ ನೀನು ಹಿಂದೂ.'

'ಅಲ್ಲ ನಾನು ಹಿಂದೂ ಅಲ್ಲ.'

'ನಮ್ಮ ದೇವರ ಹೆಸರನ್ನು ಯಾಕೆ ಇಟ್ಟುಕೊಂಡಿದ್ದೀಯಾ?'

ಆತ ಈ ರೀತಿ ಹೇಳಬಹುದು.

'ರಾಮಲಕ್ಷ್ಮಣ ಅಣ್ಣತಮ್ಮಂದಿರು. ಅಂಗೈ ಅಗಲ ಭೂಮಿಗೆ ಬಡಿದಾಡಿಕೊಂಡು ಪೊಲೀಸರ ಪಾಲಾದರು.'

'ಹೊಲ ಇಲ್ಲ ಗದ್ದೆ ಇಲ್ಲ, ಹೆಸರು ಮಾತ್ರ ಗದ್ದೆಲಿಂಗಯ್ಯ.'

'ನೋಡೋಕೆ ಕಡ್ಡಿ ಪೈಲ್ವಾನ್. ಹೆಸರು ಮಾತ್ರ ಭೀಮಸೇನ.'

ಇಂತಹ ನೂರೆಂಟು ಹೇಳಬಹುದು 'ದುಡ್ಡಿಲ್ಲ ಕಾಸಿಲ್ಲ ಹೆಸರು ಮಾತ್ರ ಸಂಪತ್ತಯ್ಯಂಗಾರ್', 'ಹಾಲಿಲ್ಲ ಮೊಸರಿಲ್ಲ ಹೆಸರು ಮಾತ್ರ ಕ್ಷೀರಸಾಗರಭಟ್ಟ', 'ಮಕ್ಕಳಿಲ್ಲ ಮರಿ ಇಲ್ಲ ಹೆಸರು ಮಾತ್ರ ಸಂತಾನಲಕ್ಷ್ಮಿ' ಎಂದು ಪ್ರಚಲಿತದಲ್ಲಿರುವ ಗಾದೆ ಮಾತುಗಳನ್ನು ಉದ್ಧರಿಸಬಹುದು. ಹೆಸರು ಇರುವುದು ವ್ಯಕ್ತಿಯನ್ನು ಗುರುತಿಸಲು ಮಾತ್ರ ಎಂದೂ ಹೇಳಬಹುದು. ಆದರೆ....

ಇವೆಲ್ಲವೂ ಧರ್ಮರಕ್ಷಕರಿಗೆ ಅಪಥ್ಯ!

'ಮೊದಲು ಹೆಸರು ಬದಲಾಯಿಸಿಕೊ' ಎಂಬ ಫರ್ಮಾನು ನೀಡುತ್ತಾರೆ!

ಅಣಕ



• ಎಚ್.ಎಲ್.ಕೇಶವಮೂರ್ತಿ

ಪ್ರಭು ಶ್ರೀರಾಮಚಂದ್ರನಿಗೆ ಇಂತಹ ಅವಹೇಳನ... ಮಾತನ್ನು ಹೇಳಿದಾಗ ಸಿಡಿದೇಳಬೇಕಿತ್ತಲ್ಲ ಧರ್ಮರ... ಪಡೆ? ಆಗ ಬೇಕಿತ್ತಲ್ಲ ಭಾರತ ದಹನ?

ಇದು ಯಾವುದೂ ಆಗಲಿಲ್ಲ ಯಾಕೆ? ಯಾಕೆ?

ಹಾಗೆ ಹೇಳಿಕೆ ನೀಡಿದವರು 'ರಾಮ'ನನ್ನು ತ... ಹೆಸರಿನಲ್ಲಿಟ್ಟುಕೊಂಡವರು! ಸದಾ ರಾಮಜಪ ಮಾಡ... ಭಾಜಪದ ಹಿರಿಯ ಸದಸ್ಯ ರಾಂ ಜೇಠ್ಮಲಾನಿಯವರ...

ಬಿಸಿತುಪ್ಪ, ನುಂಗಲಾರರು. ಉಗುಳಲೂ ಆರ... ಧರ್ಮರಕ್ಷಕರಿಗೆ ಶಾನೆ ಕಷ್ಟಾನೆ ಆಗುತ್ತಿರಬೇಕು! ಅಯ್... ಪಾಪ!

ಕೋಣನ ಮುಂದೆ....

ಚಿಲ್ಲರೆ ವ್ಯಾಪಾರಕ್ಕೆ ವಿದೇಶಿ ಕಂಪನಿಗಳಿಗೆ ಅವಕ... ನೀಡಬಾರದು. ಅವು ಬಂತು ಅಂದ್ರೆ ಒಂಟೆ ಟೆಂ... ನುಗ್ಗಿದ ಹಾಗೆ ಆಗುತ್ತೆ, ಸರ್ವನಾಶ ಆಗುತ್ತೆ- ಎ... ಮುಂತಾಗಿ ಆಗುವ ಅನಾಹುತದ ಕುರಿತು ಎಳೆಎಳೆಯ... ಬಿಡಿಸಿಬಿಡಿಸಿ ಹೇಳಿಕೇಳಿ ಸುಸ್ತಾದರು ಸಂಸದರು. ಕಾಂ... ಸರ್ಕಾರಕ್ಕೆ ಅದೇನು ದರ್ದಿತ್ತೊ ಏನೊ. ನಿ... ಹರ್‍ಕೊಳ್ಳೋದು ಹರ್‍ಕೊಸ್ತಾ ಇರಿ; ನಾವು ಮಾಡದ ಮಾ... ಇರ್‍ತೀವಿ ಅಂತಾವ, ವಿದೇಶೀಯರು ಚಿಲ್ಲರೆ ವ್ಯಾಪಾ... ಬರುವುದರಿಂದ ದೇಶದಲ್ಲಿ ಹಣದ ಹೊಳೆಯೇ ಹರಿಯ... ಅನ್ನೊ ಪುಂಗಿ ಊದಿ ಅದಕ್ಕೆ ಅನುವು ಮಾಡಿಕೊ... ಬಿಟ್ಟರು. ಬ್ಯಾಡಬ್ಯಾಡ ಅಂತ ಬಡ್ಕೊತಿದ್ದೋವು... ಮುಂಡೆಮಕ್ಕಳಿಗೆ ಹೆಂಗಪ್ಪ ಬುದ್ಧಿ ಹೇಳೋದು ಅನ್ನ... ತಲೆ ಮೇಲೆ ಕೈ ಇಟ್ಟುಕೊಂಡು ಕೂತಿದ್ದಾಗ, ಮು... ಮನೋಹರ ಜೋಷಿಗೆ... ಅದೇ ಎನ್‌ಡಿಎ ಸರ್ಕಾರ... ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾಗಿದ್ದರಲ್ಲ ಅವ... ನಮ್ ವಾಟಾಳ್ ಸ್ಟೈಲೇ ಪಸಂದು ಅನ್ನಿಸಿತಂತೆ. ಅ... ವಾಟಾಳ್ ಪ್ರತಿಭಟನಾ ರೀತಿ ಗೊತ್ತಲ್ಲ. ಅ... ಸಂಬಂಧಿಸಿದವರ ಮೇಲೆ ಯಾವುದೇ ಪರಿಣಾ... ಬೀರದಿದ್ದರೂ ಜನರಿಗೆ ಮಸ್ತ್ ಮಸ್ತ್ ಮಜ ಕೊಡ... ಹಂಗೇ ಜೋಷಿ ಸಾಹೇಬರು ಕೋಣನಿಗೆ, ಕೊ... ಬಸವನಿಗೆ ಮಾಡ್ತಾರಲ್ಲ ಹಂಗೆ ಅಲಂಕಾರ ಮಾಡಿ ಅ... ಮುಂದೆ ಪುಂಗಿ ಉದುತ್ತಾ ನಿಂತರು!

ವಾಟಾಳ್ ಪ್ರತಿಭಟನೆಯಂತೆ ಇದೂ ... ಹಿಡಿಯೋದು ಖಾತರಿ. ಅದಲ್ಲ ವಿಷಯ. ಕೆಟ್ಟು ... ಹಿಡಿದಿರೋ ರಾಜಕಾರಣಿಗಳಿಗೆ ಬುದ್ಧಿ ಮಾತು ಹೇಳ್ತಾ... ಅದೂ ಕೋಣನ ಮುಂದೆ ಕಿಂದರಿ ಬಾರಿಸಿದ ಹಾಗೆ... ಅನ್ನೊ ಅನುಮಾನ ಅಷ್ಟೆ....

ಟಿವಿ ಶಾಪೇಶ್ವರರಿಗೆ ಒಂದು ಪ್ರಶ್ನೆ

ಪೆರಿಯಾರ್ ರಾಮಸ್ವಾಮಿ, ಪೋಲಂಕಿ ರಾಮಮೂರ್ತಿಯವರಂತೆ ರಾಮನ ಹೆಸರಿನ ಜೇಠ್ಮಲಾನಿಯವರೂ ಇತ್ತೀಚೆಗೆ ರಾಮನನ್ನು ಕುರಿತ ಹಳೆಯ ಸತ್ಯವೊಂದನ್ನು ಸಾಂದರ್ಭಿಕವಾಗಿ ಉಲ್ಲೇಖಿಸಹೊರಟು ಕೆಲವರಿಗೆ ಇರಿಸುಮುರುಸನ್ನುಂಟು ಮಾಡಿದ್ದಾರೆ. ಈ ಕುರಿತು ಟಿವಿ ನೈನ್‌ನಲ್ಲಿ 'ಹೇ ರಾಮ್' ಎಂಬ ಕಾರ್ಯಕ್ರಮವೊಂದು ನಡೆಯಿತು. ಈ ಕಾರ್ಯಕ್ರಮ ಯಾವ ಗಂಗಾಪತಿ ಪ್ರಾಣೇಶ್ವರ ಕಾರ್ಯಕ್ರಮಕ್ಕಿಂತಲೂ ಕಡಿಮೆ ಇರಲಿಲ್ಲ.

ವಿಶೇಷವೆಂದರೆ, ಯಾವುದೋ ನಾಸ್ತಿಕ ಎಡಪಂಥೀಯನ ಬದಲು ಪ್ರಸಿದ್ಧ ವಕೀಲರೂ, ಅತ್ಯಂತ ಹಿರಿಯರೂ ಮತ್ತು ಮುಖ್ಯವಾಗಿ ರಾಮನ ಹೆಸರಿಂದಲೇ 'ಮೇಲೆ ಬಂದ' ಬಿಜೆಪಿ ಮುಖಂಡರೂ ಆಗಿರುವ ರಾಮ್ ಜೇಠ್ಮಲಾನಿಯವರ ಈ ಹೇಳಿಕೆಯ ಕುರಿತು ರಾಮಾನುಯಾಯಿಗಳು ಅವತ್ತು ನಡೆಸಿದ ಗುದ್ದಾಟ ಬಹಳ ಮೋಜಿನದಾಗಿತ್ತು.

ಸಂವಾದದ ಮೊದಲಿಗೆ ಟಿವಿ ಚಾನೆಲ್‌ಗಳಿಂದಲೇ ಕುಪ್ರಸಿದ್ಧ ಪಡೆದಿರುವ ಅವೈಜ್ಞಾನಿಕ ಜ್ಯೋತಿಷಿಯೊಬ್ಬ ಚೆನ್ನಾಗಿ ಓದಿ ತಿಳಕೊಂಡ ವಿದ್ವಾಂಸರೂ ಆದ ಜೇಠ್ಮಲಾನಿಯವರ ಕುರಿತು 'ಇದು ಅವರ ಅಜ್ಞಾನವನ್ನು ತೋರಿಸುತ್ತದೆ. ಅವರು ರಾಮಾಯಣವನ್ನು ಓದಿಯೇ ಇಲ್ಲ, ಮೊದಲು ರಾಮಾಯಣವನ್ನು ಅವರು ಓದಿಕೊಳ್ಳಲಿ. ಯಾಕೆಂದರೆ ಮೂಲ ರಾಮಾಯಣದಲ್ಲಿ ಸೀತಾ ಪರಿತ್ಯಾಗದ ವಿಷಯವೇ ಇಲ್ಲ" ಎಂದು ಹೇಳಿದ. ಆದರೆ ಆತನ ಪಕ್ಕದಲ್ಲಿ ಕೂತಿದ್ದ ಪೂರ್ಣಪ್ರಜ್ಞ ಕಾಲೇಜಿನ ಪ್ರಾಂಶುಪಾಲರು ಆತನನ್ನು ತಡೆದು "ಮೂಲ ರಾಮಾಯಣದ ಇಲ್ಲಿಂದ ಇಲ್ಲಿಯವರೆಗೆ ಸೀತಾ ಪರಿತ್ಯಾಗದ ವಿಷಯವನ್ನು ಸವಿಸ್ತಾರವಾಗಿ ವಾಲ್ಮೀಕಿ ವಿವರಿಸಿದ್ದಾನೆ" ಎಂದು ತಮ್ಮದೇ ಆದ ವಿವರಣೆ ನೀಡುತ್ತಾ ಹೋದರು. ತಾನೇ ಎಲ್ಲವನ್ನೂ ತಿಳಿದಾತ, ಜೇಠ್ಮಲಾನಿಯೂ ಸೇರಿದಂತೆ ಉಳಿದೆಲ್ಲರೂ ಅಜ್ಞಾನಿಗಳು ಎಂದಿದ್ದ 'ಮಹಾಜ್ಞಾನಿ' ಜ್ಯೋತಿಷಿಯ ಬಂಡವಾಳ ಬಯಲಾಗಿ ಬಿಟ್ಟಿತು.




ಓರ್ವ ಸಂಸ್ಕೃತ ಪ್ರಾಂಶುಪಾಲರಂತೂ "ರಾಮ ಸೀತೆಯನ್ನು ಕಾಡಿಗಟ್ಟಲಿಲ್ಲ, ವಾಲ್ಮೀಕಿ ಆಶ್ರಮಕ್ಕೆ ಬಿಟ್ಟು ಬಂದ. ಅಷ್ಟೇ ಅಲ್ಲ, ಸೀತೆಯ ಬಯಕೆಯೂ ಅದೇ ಆಗಿತ್ತು" ಎಂಬರ್ಥದಲ್ಲಿ ತಿಪ್ಪೇ ಸಾರಿಸಲು ಯತ್ನಿಸಿದ. ಇದೇ ಹೌದಾದರೆ, ನಂತರ ಅನಿರೀಕ್ಷಿತವಾಗಿ ಲವಕುಶರ ಮೂಲಕ ರಾಮನ ಭೇಟಿ ಆದಾಗ ಸೀತೆ ಯಾಕೆ ಆತನನ್ನು ಪ್ರೀತಿಯಿಂದ ಸೇರದೇ ಆತ್ಮಾಹುತಿ (ಸಾಂಕೇತಿಕ ಕಥೆಯಂತೆ ಭೂಮಿ ಒಡಲು ಸೇರಿ) ಮಾಡಿಕೊಂಡಳು?

ಅಂದಿನ ಚರ್ಚೆಯಲ್ಲಿ ಬಿಜೆಪಿಯ ಅನಾಚಾರಗಳನ್ನೆಲ್ಲ ಹುಚ್ಚುಹುಚ್ಚಾಗಿ ಸಮರ್ಥಿಸಿಕೊಳ್ಳುವ, ಸ್ತ್ರೀಕುಲಕ್ಕೆ ಕಳಂಕವಾಗಿರುವ ಲಿಪ್‌ಸ್ಟಿಕ್ 'ಸುಂದರಿ' ಕೂಡ ಭಾಗವಹಿಸಿತ್ತು. ಈ 'ಸುಂದರಾಂಗಿ' ಪತಿವ್ರತಾ, ಧರ್ಮ ಮೊದಲಾದುವುಗಳ ಬಗ್ಗೆ ಮಾತಾಡಿ ರಾಮನನ್ನು ಸಮರ್ಥಿಸಲು ಬಹಳಷ್ಟು ಹೆಣಗಾಡಿತು.

ಬುರುಡೆ ಜ್ಯೋತಿಷಿಯಂತೂ "ರಾಮನನ್ನು ಹೀಯಾಳಿಸಿದ ಜೇಠ್ಮಲಾನಿಯವರು ಇದರ ಪರಿಣಾಮವನ್ನು ಖಂಡಿತ ಅನುಭವಿಸುತ್ತಾರೆ. ನೋಡಿ, ದುರ್ಗೆಯ ಚಿತ್ರವನ್ನು ಬಿಯರ್ ಬಾಟಲ್ ಮೇಲೆ ಹಾಕಿದ್ದಕ್ಕೆ ಅಮೆರಿಕಕ್ಕೆ ಸ್ಯಾಂಡಿ ಚಂಡಮಾರುತದ ಶಾಪ ತಟ್ಟಲಿಲ್ಲವೇ?" ಎಂದು ಅಪದ್ಧವಾಗಿ ಮಾತಾಡಿದ. ಜಯ ಶ್ರೀನಿವಾಸನ್ ಎಂಬ ನ್ಯೂಮರಾಲಜಿಸ್ಟ್ ಕೂಡ ಕೆಲದಿನಗಳ ಹಿಂದೆ 'ಸಮಯ' ಚಾನೆಲ್‌ನಲ್ಲಿ ತನ್ನ ಜ್ಯೋತಿಷ್ಯ=ಭವಿಷ್ಯ ಕಾರ್ಯಕ್ರಮದಲ್ಲಿ ಸ್ಯಾಂಡಿಯ ನೆಪದಲ್ಲಿ ಇಂತದ್ದೇ ಮಾತಾಡಿದ್ದ. "ಇವತ್ತು ಅಮೆರಿಕದಲ್ಲಿ ಒಳ್ಳೆಯದಾಗಿದ್ದರೆ ಅದು ಭಾರತೀಯರು ಅಲ್ಲಿ ಹೋಗಿ ದೇವಸ್ಥಾನ ಕಟ್ಟಿ ಪೂಜೆ ಪ್ರಾರ್ಥನೆ ನಡೆಸುತ್ತಿದ್ದಾರಲ್ಲ ಆ ಕಾರಣಕ್ಕೆ ಅವರು ಸ್ವಲ್ಪ ಬಚಾವಾಗಿದ್ದಾರೆ. ಇಲ್ಲವಾದಲ್ಲಿ ಅಮೆರಿಕವೆ ಇರುತ್ತಿರಲಿಲ್ಲ" ಎಂದೆಲ್ಲ ಈ ಮನುಷ್ಯ ಹೇಳಿದ್ದ. ಯಾವುದನ್ನು ಯಾವುದಕ್ಕೋ ಲಿಂಕ್ ಮಾಡಿ ಶಾಪ ಹಾಕುತ್ತಾ ಕೀಳಾಗಿ ಮಾತಾಡುವ ಇಂತಹ ಕಳ್ಳ ಜ್ಯೋತಿಷಿಗಳು ವರ್ಷಗಳ ಹಿಂದೆ ಮಂತ್ರಾಲಯವೇ ಕೊಚ್ಚೆಯಲ್ಲಿ ಕೊಚ್ಚಿ ಹೋಯಿತಲ್ಲ ಅದಕ್ಕೇನೆನ್ನುತ್ತಾರೊ?

-ಶಶಿ ಪುತ್ತೂರು, ದಕ



ಆರೆಸ್ಸೆಸ್ಸಿನ ಬ್ರಾಮಿನ್ ಮುಖ

ಆರೆಸ್ಸೆಸ್ಸಿನ ಒಂದು ಮುಖ್ಯ ಅಜೆಂಡಾ ಯಾವುದೆ... ಬರೀ ಬ್ರಾಹ್ಮಣರನ್ನು ಮಾತ್ರ ರಕ್ಷಿಸುವುದು, ಬೆಳೆಸುವು... ಪ್ರೋತ್ಸಾಹಿಸುವುದು. 'ಎಲ್ಲಾ ಹಿಂದೂಗಳು ಒಂದು' ಎ... ಸದಾ ಬೊಬ್ಬೆ ಇಡುವ ಸಂಘ ಪರಿವಾರ ಇತರೆ ಜಾ... ಜನರ ಏಳಿಗೆಯನ್ನು ಸಹಿಸುವುದಿಲ್ಲ.

ಉದಾಹರಣೆಗೆ ಬ್ರಾಹ್ಮಣ ವಾಜಪೇಯಿಯ... ಪ್ರಧಾನಿಯನ್ನಾಗಿಸಿದ ಸಂಘ ಪರಿವಾರವು ಕಮ್ಮಾರ ಜಾ... ಅಡ್ವಾನಿ ಪ್ರಧಾನಿ ಹುದ್ದೆಗೆ ಏರದಂತೆ ನೋಡಿಕೊಂ... ಹಾಗೆಯೇ ಈಗ ಬೆಸ್ತ ಜಾತಿಗೆ ಸೇರಿರುವ ನರೇ... ಮೋದಿ ಕೂಡ ಪ್ರಧಾನ ಮಂತ್ರಿ ಕುರ್ಚಿಯತ್ತ ಸುಳಿಯ... ನೋಡಿಕೊಳ್ಳುತ್ತಿದೆ.

ಹಾಗೆಯೇ ಲಿಂಗಾಯತ ಯಡಿಯೂರಪ್ಪ, ದ... ಬಂಗಾರು ಲಕ್ಷ್ಮಣ್, ಹಿಂದುಳಿದ ವರ್ಗದ ಉಮಾಭ... ಮತ್ತು ಕಲ್ಯಾಣ್ ಸಿಂಗ್ ತರಹದವರನ್ನು ಮೊದಲು ಚೆ... ಬಳಸಿಕೊಂಡ ಸಂಘಪರಿವಾರ ಅನಂತರ ಅವ... ಬಿಸಾಡಿತು. ಇದೆಲ್ಲದರ ಮಧ್ಯೆಯೂ ಭ್ರಷ್ಟಾಚಾ... ಆರೋಪಗಳನ್ನು ಎದುರಿಸುತ್ತಿರುವ ಗಡ್ಕರಿ, ಸು... ಕುಮಾರ್, ಅನಂತಕುಮಾರ್ ತರಹದ ಜನಿವಾರಿಗ... ರಕ್ಷಿಸುತ್ತಲೇ ಬಂದಿದೆ.

ಇದು ಆರೆಸ್ಸೆಸ್ಸಿನ ಅಸಲಿ ಮುಖ. ಇದನ್ನು ಜ... ಆದಷ್ಟು ಬೇಗ ಅರ್ಥಮಾಡಿಕೊಳ್ಳಬೇಕಿದೆ.

-ಪಾಲಾಕ್ಷ, ಎಸ್‌ಎಂಎಸ್ ಮೂ...

ಮಾಲಾಶ್ರೀ 'ಎಲೆಕ್ಷನ್' ರಾಜಕೀಯ

ಮಾಲಾಶ್ರೀ ದಿಢೀರನೆ 'ಎಲೆಕ್ಷನ್' ಎಂಬ ಚಿತ್ರದಲ್ಲಿ ನಟಿಸಲು ಹೊರಟಿದ್ದಾರೆ. ಈ ಚಿತ್ರವನ್ನು ಎಂದಿನಂತೆ ...ರ ಮುದ್ದಿನ ಗಂಡ ಕೋಟಿ ವೀರ ರಾಮು ಅವರೇ ನಿರ್ಮಿಸುತ್ತಿದ್ದಾರೆ ಎಂದು ವಿಶೇಷವಾಗಿ ಹೇಳಬೇಕಿಲ್ಲ ...? ರಾಮು ಬ್ಯಾನರ್‌ನಲ್ಲಿ ಈಗಾಗಲೇ ಅನೇಕ ದೊಡ್ಡ ದೊಡ್ಡ ಚಿತ್ರಗಳನ್ನು ಮಾಡಿರುವ ನಿರ್ದೇಶಕ ಓಂ ಪ್ರಕಾಶ್‌ರಾವ್ ಈ ಚಿತ್ರವನ್ನು ನಿರ್ದೇಶಿಸಲಿದ್ದಾರಂತೆ. ರಾಮು ಬ್ಯಾನರ್ ಅದಿ ಓಂ ಪ್ರಕಾಶ್ ನಿರ್ದೇಶಿಸುತ್ತಿರುವ ಆರನೇ ಚಿತ್ರ ಇದು.




ಚಿತ್ರದ ಟೈಟಲ್ ಸೂಚಿಸುವಂತೆ ಇದು ಚುನಾವಣೆಗೆ ಸಂಬಂಧಪಟ್ಟ ಕಥಾವಸ್ತುವಿನ ಚಿತ್ರ. ಅಂದರೆ ಈ ಚಿತ್ರದಲ್ಲಿ ನಾಯಕಿ ಭ್ರಷ್ಟರ ವಿರುದ್ಧ ಹೋರಾಡುವುದು, ಭ್ರಷ್ಟರನ್ನು ಚಚ್ಚಿ ಹಾಕುವುದು, ಇತ್ಯಾದಿ ಇತ್ಯಾದಿ ಇದ್ದೇ ಇರುತ್ತದೆ ಎಂದು ಸುಲಭವಾಗಿ ಊಹಿಸಬಹುದು.

...ಮುಂದಿನ ವರ್ಷ ಕರ್ನಾಟಕದಲ್ಲಿ ಅಸೆಂಬ್ಲಿ ಚುನಾವಣೆ ನಡೆಯುವುದರಿಂದ ಆ ಸಂದರ್ಭದಲ್ಲಿ ...ಲಾಶ್ರೀ ಅಭಿನಯದ ಈ ಚಿತ್ರ ಜನರಿಗೆ ಮಸಾಲೆ, ಮನರಂಜನೆ ಮತ್ತು ಬೋಧನೆ ...ುವ ಸಾಧ್ಯತೆ ಇದೆ. ಅಂದಹಾಗೆ ಮಾಲಾಶ್ರೀ ಯಾವುದಾದರೂ ರಾಜಕೀಯ ಪಕ್ಷಕ್ಕೆ ...ಬಹುದೇ ಎಂಬ ಮಾತು ಕೇಳಿಬರುತ್ತಿವೆ. ಇವರನ್ನು ಯಾವ ರಾಜಕೀಯ ಪಕ್ಷ ತನ್ನ ...ಕ್ಕಿಗೆ ಹಾಕಿಕೊಳ್ಳುತ್ತದೆ ಎಂಬ ಕುತೂಹಲ ಅವರ ಅಭಿಮಾನಿಗಳನ್ನು ಕಾಡುತ್ತಿದ್ದರೆ ...ದಿ ಇಲ್ಲ.



...ಾಯಾಗ್ರಾಹಕ ಕೃಷ್ಣ ಈಗ ನಿರ್ದೇಶಕ

'ಮುಂಗಾರು ಮಳೆ'ಯ ಛಾಯಾಗ್ರಾಹಕ ಕೃಷ್ಣ ನಿರ್ದೇಶಕರಾಗುತ್ತಿದ್ದಾರೆ. ಚಿತ್ರದ ಹೆಸರು 'ಗಜಪತಿ'. ...ಚಿತ್ರ 'ಮುಂಗಾರು ಮಳೆ'ಯ ನಿರ್ದೇಶಕ ಯೋಗರಾಜ್ ಭಟ್ ಅವರ ಮಾರ್ಗದರ್ಶನವಲ್ಲಿ ...ುತ್ತಿರುವುದು ವಿಶೇಷ. ಮತ್ತೊಂದು ವಿಶೇಷವೆಂದರೆ ಈ ಚಿತ್ರದ ಛಾಯಾಗ್ರಾಹಣವನ್ನು ಕೃಷ್ಣ ಮಾಡುತ್ತಿಲ್ಲವಂತೆ. ಅದರ ಬದಲಿಗೆ ಸತ್ಯ ಹೆಗಡೆ ಇದರ ಜವಾಬ್ದಾರಿಯುನ್ನು ನಿರ್ವಹಿಸಲಿದ್ದಾರೆ. ಅಂದಹಾಗೆ ಈ ಚಿತ್ರಕ್ಕೆ ನಾಯಕ ನಟನಾಗಿ ದುನಿಯಾ ವಿಜಯ್ ಆಯ್ಕೆಯಾಗಿದ್ದಾರೆ. ಈ ಚಿತ್ರವನ್ನು ಯೋಗರಾಜ್ ಭಟ್‌ರ ದೋಸ್ತ್ ಜಯಣ್ಣ ಅವರು ನಿರ್ಮಿಸಲಿದ್ದಾರೆ.



ಛಾಯಾಗ್ರಾಹಕ ಕೃಷ್ಣ ಅವರನ್ನು ಉದ್ಯಮದಲ್ಲಿ ಎಲ್ಲರೂ ಪ್ರೀತಿಯಿಂದ ಕಿಟ್ಟಪ್ಪ ಎಂದೇ ಕರೆಯುತ್ತಾರೆ. ಅನೇಕ ನಿರ್ದೇಶಕರ ...ಗಳು ಈ ಕಿಟ್ಟಪ್ಪನ ಕೈ ಚಳಕದಿಂದಲೇ ಗೆದ್ದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೂ ಕಿಟ್ಟಪ್ಪ ಅವರಿಗೆ ...ೇಶಕನಾಗುವ ಆಸೆ ಇರಲಿಲ್ಲ. ಇದು ದಿಢೀರನೇ ಬಯಸದೇ ಬಂದ ಭಾಗ್ಯ. ವಾಸ್ತವವಾಗಿ ಈ ಚಿತ್ರವನ್ನು ...ೂರಿ' ಚಿತ್ರದ ನಿರ್ದೇಶಕ ಅರ್ಜುನ್ ಅವರು ನಿರ್ದೇಶಿಸಬೇಕೆಂದು ಗ್ಯಾರಂಟಿಯಾಗಿತ್ತು. ಆದರೆ ಸಂಭಾವನೆ ...ಯದಲ್ಲಿ ಅರ್ಜುನ್ ನಿರ್ಮಾಪಕ ಜಯಣ್ಣ ಅವರ ಜೊತೆಗೆ ಸಿಕ್ಕಾಪಟ್ಟೆ ಮಾತಿನ ಚಕಮಕಿಯಲ್ಲಿ ತೊಡಗಿದ್ದರಿಂದ ...ರಗೊಂಡ ಜಯಣ್ಣ ಮತ್ತು ಯೋಗರಾಜ್ ಭಟ್ ಜಂಟಿಯಾಗಿ ಕಿಟ್ಟಪ್ಪ ಅವರನ್ನು ನಿರ್ದೇಶಕರ ಕುರ್ಚಿಯಲ್ಲಿ ...ರಿಸಿದ್ದಾರೆ.


ಇನ್ನು ಮುಂದೆ ಐಂದ್ರಿತಾ ಏನು ಮಾಡುತ್ತಾಳಂತೆ?

ಐಂದ್ರಿತಾ ರೈ ಇತ್ತೀಚೆಗೆ ಒಂದು ಶಪಥ ಮಾಡಿದ್ದಾರಂತೆ. ಅದೇನೆಂದರೆ ಇನ್ನು ಮುಂದೆ ಯಾರು ಎಷ್ಟೇ ಹಣ ನೀಡಿದರೂ ಅವರು ಐಟಂ ಸಾಂಗ್‌ಗಳಲ್ಲಿ ಕಾಣಿಸಿಕೊಳ್ಳುವುದಿಲ್ಲವಂತೆ. ಆದರೆ ಐಟಂ ಸಾಂಗ್‌ಗಳ ಬಗ್ಗೆ ಆಕೆಗೆ ಅಲರ್ಜಿ ಇಲ್ಲವಂತೆ. ಹಾಗೆಯೇ ಆಕೆ ಇಲ್ಲಿಯತನಕ ಮಾಡಿರುವ ಐಟಂ ಸಾಂಗ್‌ಗಳ ಬಗ್ಗೆ ಪಶ್ಚಾತ್ತಾಪವೂ ಇಲ್ಲವಂತೆ. ಬದಲಾಗಿ ಆಕೆಗೆ ಕೋಪ ಇರುವುದು ಮಾಧ್ಯಮದವರ ಮತ್ತು ಉದ್ಯಮದವರ ಮೇಲಂತೆ. 'ಕಡ್ಡಿಪುಡಿ' ಮತ್ತು 'ಪ್ರೇಮ್ ಅಡ್ಡ' ಚಿತ್ರಗಳಲ್ಲಿ ಆಕೆ ಐಟಂಸಾಂಗ್‌ಗಳಲ್ಲಿ ಕಾಣಿಸಿಕೊಂಡಿದ್ದೇ ತಡ ಆಕೆಗೆ ಈಗ ನಾಯಕಿಯಾಗಿ ಅವಕಾಶ ಇಲ್ಲ ಎಂದು ಮಾಧ್ಯಮದವರು ಹೇಳಿದ್ದು ಆಕೆಗೆ ತುಂಬಾ ಬೇಸರ ತಂದಿದೆಯಂತೆ. ಇದರ ಜೊತೆಗೆ ಈಗ ಉದ್ಯಮದವರೂ ಸಾಲುಸಾಲಾಗಿ ಆಕೆಗೆ ಐಟಂ ಸಾಂಗ್‌ಗಳನ್ನೇ ನೀಡುತ್ತಿರುವುದೂ ಆಕೆಗೆ ಸಿಕ್ಕಾಪಟ್ಟೆ ಬೇಸರ ತಂದಿದೆಯಂತೆ. ಈ ಕಾರಣಗಳಿಗಾಗಿ ಇನ್ನು ಮುಂದೆ ಐಟಂ ಸಾಂಗ್‌ಗಳಿಗೆ ನೋ ಹೇಳುವ ನಿರ್ಧಾರಕ್ಕೆ ಬಂದಿದ್ದಾಳಂತೆ.

ಈಕೆ ಐಟಂ ಸಾಂಗ್‌ಗಳನ್ನು ಮಾಡುವುದಿಲ್ಲ ಅಂದರೆ ಇನ್ನು ಮುಂದೆ ಆಕೆ ಏನು ಮಾಡುತ್ತಾಳಂತೆ ಎಂದು ಗಾಂಧಿನಗರದವರು ಕುಹಕವಾಡುತ್ತಿರುವುದು ಆಕೆಯ ಕಿವಿಗೆ ಇನ್ನೂ ಬಿದ್ದಿಲ್ಲ ಅನ್ನಿಸುತ್ತೆ!

ಸುದೀಪ್-ಭಟ್ ನಡುವೆ ತಾರಾ ಸಮರ

ನವೆಂಬರ್ 23 ರಂದು ಒಂದು ಮಿನಿ ತಾರಾಸಮರ ಗಾಂಧಿನಗರದಲ್ಲಿ ನಡೆಯುವ ಸಾಧ್ಯತೆ ಕೇಳಿಬರುತ್ತಿರುವುದು ಬೇಸರದ ವಿಷಯ. ಅದೇನೆಂದರೆ ಅಂದು ಯಶ್ ನಾಯಕನಾಗಿ ನಟಿಸಿರುವ, ಯೋಗರಾಜ್ ಭಟ್ ನಿರ್ದೇಶಿಸಿರುವ 'ಡ್ರಾಮಾ' ಚಿತ್ರ ತೆರೆ ಕಾಣುವುದು ಬಹುತೇಕ ಖಚಿತವಾಗಿದೆ. ಅದೇದಿನ ಚಿರಂಜೀವಿ ಸರ್ಜಾ ನಾಯಕನಾಗಿ ನಟಿಸಿರುವ, ಸುದೀಪ್ ಅತಿಥಿ ನಟನಾಗಿ ನಟಿಸಿರುವ 'ವರದನಾಯಕ' ಚಿತ್ರವೂ ಬಿಡುಗಡೆಯಾಗುವ ಸುದ್ದಿ ಕೇಳಿಬಂದಿದೆ.



ಈ ಎರಡೂ ಚಿತ್ರಗಳ ಯುವನಟರಾದ ಯಶ್ ಮತ್ತು ಚಿರು ನಡುವೆ ವೈಮನಸ್ಸಿಲ್ಲ. ಆದರೆ ಸುದೀಪ್ ಮತ್ತು ಯೋಗರಾಜ್ ಭಟ್ ನಡುವೆ ಅಂತಹ ಒಳ್ಳೆಯ ಸಂಬಂಧವಿಲ್ಲ. ಅದರಲ್ಲೂ ಯೋಗರಾಜ್ ಭಟ್ ಮತ್ತು ದುನಿಯಾ ಸೂರಿ ರಾಜ್ ಕ್ಯಾಂಪ್‌ನ ಚಿತ್ರಗಳನ್ನು ಮಾಡಲು ಹೊರಟನಂತರ ಅವರ ನಡುವಿನ ಸಂಬಂಧ ಇನ್ನು ಹದಗೆಟ್ಟಿದೆಯಂತೆ. ಹೀಗಾಗಿ 'ಡ್ರಾಮಾ' ಮತ್ತು 'ವರದನಾಯಕ' ಚಿತ್ರಗಳು ಒಟ್ಟಿಗೆ ಬಿಡುಗಡೆಯಾಗುವ ಮುಖಾಂತರ ಸುದೀಪ್ ಮತ್ತು ಭಟ್ ನಡುವೆ ಮೊದಲ ಸುತ್ತಿನ ತಾರಾ ಸಮರ ನಡೆಯಲಿದೆ ಎಂಬುದು ಗಾಂಧಿನಗರದ ಗೂಢಚಾರರ ವರದಿ.



ಪತ್ರಿಕೆಯಿಂದಾಗಿ ನಮ್ಮೂರಿನ ಜನರಿಗೆ ಸಂತೋಷವಾಗಿದೆ

ಗೌರಿ ಲಂಕೇಶ್ ಪತ್ರಿಕೆಯಲ್ಲಿ ಹೊನ್ನಾವರ ಪಟ್ಟಣ ಪಂಚಾಯತಿಯ ಅಧ್ಯಕ್ಷ(ಅದಕ್ಷ)ನ ಘನಂದಾರಿ ಕಾರ್ಯ ವೈಖರಿ, ಹೀನಜಾತಕ, ಆತನ ಸಹಚರರ ಕಾರ್ಯವ್ಯಾಪ್ತಿ ಆತನ ಸಹೋದರನ ಅವ್ಯವಹಾರಗಳನ್ನು ವಿವರವಾಗಿ ಬರೆದು ಆತನ ಜನ್ಮಜಾತಕ ಹೊರಗೆಡವಿದ್ದನ್ನು ಕಂಡು ನಮಗೆಲ್ಲ ಸಂತೋಷವಾಗಿದೆ. ಅಷ್ಟೇ ಅಲ್ಲ, ಪೊಲೀಸರು ಹಣಕ್ಕಾಗಿ ನಡೆಸುದ 'ಅಂದರ್-ಬಾಹರ್' ವ್ಯವಹಾರವೂ ಈ ವರದಿಯಿಂದಾಗಿದೆ. ನಿಮ್ಮ ಪತ್ರಿಕಾ ವರದಿಯನ್ನು ನೋಡಿ ಊರಿಗೇ ಊರೇ ಸಂತಸ ವ್ಯಕ್ತಪಡಿಸಿದೆ.

ಇಲ್ಲಿ ನಿಮ್ಮ ಪತ್ರಿಕೆಯ ಪ್ರತಿಗಳು ಸಿಗದೇ ಜೆರಾಕ್ಸ್ ಕಾಪಿಗಳನ್ನೇ ಓದಿ ತೃಪ್ತಿ ಪಡುವಂತಾಯಿತು. ಪತ್ರಿಕೆ ಯಾವ ಆಮಿಷಕ್ಕೂ ಒಳಗಾಗಿಲ್ಲ ಎಂಬುದು ಸಾಬೀತಾಗಿದೆ. ಪತ್ರಿಕೆಯ ನಿಲುವು ಹೀಗೇ ಮುಂದುವರಿಯಲಿ ಎಂದು ಹಾರೈಸುತ್ತೇವೆ. ಇಂಥ ರೋಚಕ ವರದಿಗಳು ಪತ್ರಿಕೆಗೆ ಶೋಭೆ ತರುತ್ತವೆ.

-ಗುರುದಾಸ್ ಡಿ. ನಾಯ್ಕ್, ವಿಜಯ ಶೇಟ್, ಸಂತೋಷ್ ರೇಮಣಕರ ಮತ್ತು ಬಾಬು ನಾಯ್ಕ, ಮಂಕಿ, ಹೊನ್ನಾವರ ತಾಲೂಕು



ಮುಖವಾಡಗಳನ್ನು ಅರ್ಥಮಾಡಿಕೊಳ್ಳಲಾಗದಷ್ಟು ಕನ್ನಡ ಜಿಲ್ಲೆಯ ಬುದ್ಧಿವಂತರು ದಡ್ಡರೆ? ಆ ಬ್ರಹ್ಮ ಕಳಶಗಳೇ ಹೇಳಬೇಕು.

ಇಲ್ಲೊಂದು ತಮಾಷೆಯ ವಿಷಯ. ಮಹಾನ್ ವಂಚಕ ಮತ್ತು ಬಿಜೆಪಿಯ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿಗೆ ಹೇಳಲಾಗದ ಸತ್ಯ ಯಾವುದು ಗೊತ್ತಾ? ಭಯೋತ್ಪಾದಕ ಒಸಾಮಾ ಬಿನ್ ಲ್ಯಾಡೆನ್ ಮತ್ತು ನರಹಂತಕ ನರೇಂದ್ರ ಮೋದಿಯ 'ಐಕ್ಯು' ಒಂದೇ ಮಟ್ಟದ್ದು ಎಂಬುದು.

-ರವಿಕುಮಾರ್, ಹಾಸನ

ಗೌರಿ ಅವರ ಕಂಡಹಾಗೆ ಅಂಕಣದಲ್ಲಿ ಬಂದ "ರಜತ್ ಗುಪ್ತಾನಿಗೆ ಆದ ಶಿಕ್ಷೆ ಮುಖೇಶ್ ಅಂಬಾನಿಗೆ ಆಗುವುದೆಂದು" ಎಂಬ ಲೇಖನ ತುಂಬಾ ಚೆನ್ನಾಗಿತ್ತು.

ಸತ್ಯವಾಗಿಯೂ ನಮ್ಮ ಮುಖೇಶ್ ಅಂಬಾನಿಗಾಗಲಿ ಅಥವಾ ಅವನಂಥವರಿಗಾಗಲಿ ನಮ್ಮ ದೇಶದಲ್ಲಿ ಯಾವ ಶಿಕ್ಷೆಯೂ ಆಗುವುದಿಲ್ಲ.

ಇದು ನಮ್ಮ, ನಿಮ್ಮ ದುರಂತ.

-ಶ್ರೀ ಅರ್ಯತೇಜ, ಈ ಮೇಲ್ ಮೂಲಕ

ಲ್ಯಾಡೆನ್ ಅಂದರೆ ಮೋದಿ

ಶಿಕ್ಷಣ ಎಂಬ ಬೆಳಕು ಮತ್ತು ಶಿಕ್ಷಣ ಎಂಬ ಹಕ್ಕು ಎರಡೂ ಮುಖ್ಯ ಎಂದು ಪಾಕಿಸ್ತಾನದ ಬಾಲಕಿ ಮಲಾಲಾ ಯೂಸಫ್‌ಜಾಯ್ ತೋರಿಸಿಕೊಟ್ಟಿದ್ದಾಳೆ.


ಇನ್ನು ಕರಾವಳಿ ಪ್ರದೇಶದ ವಿಷಯಕ್ಕೆ ಬಂದರೆ, ದಕ್ಷಿಣ ಕನ್ನಡದ ಪ್ರಸಿದ್ಧ ಸಾಂಸ್ಕೃತಿಕ ಉತ್ಸವಗಳೆಲ್ಲ ಆತ್ಮವಂಚಕ ಧೋರಣೆಯವು ಎಂದು ನನಗೆ ಮೊದಲಿನಿಂದಲೂ ಅನುಮಾನವಿತ್ತು. ಸಂಘ ಪರಿವಾರದ ಹಿಂಸಾ ಸಂಸ್ಕೃತಿಯನ್ನು ಇವು ಖಂಡಿಸುವುದಿಲ್ಲ, ಸಂಘ ಪರಿವಾರದ ವೇದಿಕೆಗಳನ್ನು ನಿರಾಕರಿಸುವುದಿಲ್ಲ. ಇಂಥ

ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪತ್ರಿಕೆಯುಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ಯಶ್ ಓರ್ವ ಪ್ರತಿಭಾವಂತ ನಟ

...ತ್ತೀಚೆಗೆ ಚಿತ್ರನಟ ಯಶ್‌ನ ಮುಖಪುಟವಿರುವ ...ಪತ್ರಿಕೆ (10.10.2012) ಕೊಂಡು ಓದಲು ತಂದೆ. ...ಮುಖ್ಯ ಕಾರಣ ನಟ ಯಶ್ ತನ್ನ ಪ್ರತಿ ...ದಲ್ಲೂ ಹೆಸರಿಸುವ, ಅವನನ್ನು ರಂಗಭೂಮಿಗೆ ...ಯಿಸಿದ "ಚಿನಕ ಕಿಟ್ಟಿ" ಅಂದರೆ ನಾನೆ. ಸುದ್ದಿ ...ಸಿಗಳಲ್ಲಿ ಅವನ ತೇಜೋವಧೆ ಗೋಸ್ಕರವೇ ...ಸಲಾಗಿದ್ದ ಕಾರ್ಯಕ್ರಮಗಳನ್ನು ನೋಡಿ ಮನಸ್ಸಿಗೆ ...ವಾಗಿತ್ತು. ಇನ್ನು ನಿಮ್ಮ ಪತ್ರಿಕೆಯಲ್ಲಿ ...ಮನೆಮಗನಂತಿರುವ ಯಶ್ ಬಗ್ಗೆ ...ಬರೆದಿರುವಿರೋ ಎಂಬ ಕುತೂಹಲ ...ಪತ್ರಿಕೆ ಕೊಂಡು ಓದಲು ...ಸಿತು. ಅದರಲ್ಲಿ ನೀವು ಬರೆದಿರುವ ...ಲೇಖನ ವಿವರಗಳು ನನಗೆ ಮೆಚ್ಚುಗೆ ...

...ಯಶ್‌ನನ್ನು ನಾನು ಬಹಳ ಹತ್ತಿರದಿಂದ ...ಡಿದವನು. ಅವನ ಬಗ್ಗೆ ನಿಮ್ಮ ಅನಿಸಿಕೆಗಳು ಹೆಚ್ಚೂಕಡಿಮೆ ಸರಿಯಾಗೇ ಇದೆ. ಚಿತ್ರರಂಗಕ್ಕೆ ಆತ ಹೋದ ಮೇಲೆ ಅವನಲ್ಲಿ ಬದಲಾವಣೆಗಳು ಆಗಿದ್ದರೆ ಅದರ ಬಗ್ಗೆ ನನಗೆ ಅಷ್ಟಾಗಿ ಮಾಹಿತಿ ಇಲ್ಲ. ಆದರೆ ರಂಗಭೂಮಿಯಲ್ಲಿ ಆತನೊಬ್ಬ ಪ್ರಾಮಾಣಿಕ, ಕಷ್ಟಜೀವಿ, ಪ್ರತಿಭೆಯುಳ್ಳ ಕಲಾವಿದನಾಗಿದ್ದ. Back stage ಕೆಲಸಗಳಲ್ಲಿ ನಿಸ್ಸೀಮ. ನಮ್ಮ ತಂಡ 'ಚಿನಕ' ಜತೆ ದೇಶದ ಹಲವಾರು ಭಾಗಗಳಿಗೆ ಅವನನ್ನು ನಾಟಕ ಪ್ರದರ್ಶನಗೋಸ್ಕರ ಕರೆದುಕೊಂಡು ಹೋಗಿ, ಮಾರ್ಗದರ್ಶನ ನೀಡಿದ್ದ ನನಗೆ ಅವನ ಬಗ್ಗೆ ಅಪಾರ ಹೆಮ್ಮೆ.




ಕ್ಷುಲ್ಲಕ ಕಾರಣಗಳಿಗಾಗಿ ಮಾಧ್ಯಮದ ಮತ್ತು ಚಿತ್ರರಂಗದ ಅಸಹ್ಯ ರಾಜಕೀಯಗಳಿಗೆ ಅಂತಹ ಪ್ರತಿಭೆ ಬಲಿಯಾಗಬಾರದು ಎಂಬುದೇ ನನ್ನ ಆಶಯ. ನಿಮ್ಮನ್ನು ಹಲವು ಬಾರಿ ಭೇಟಿಯಾಗಿದ್ದರೂ, ನಿಮ್ಮ ಮನೋವಿಶಾಲತೆ ಬಗ್ಗೆ ಅರಿವಾದದ್ದು ಈಗಲೇ.

-ಚಿನಕ ಕಿಟ್ಟಿ, ಬೆಂಗಳೂರು

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/-

ಮಗನನ್ನು ಅಪ್ಪ, ಅಪ್ಪನನ್ನು ಮಗ ಪಾಸ್ ಮಾಡಬೇಕು





ಜಗ್ಗೇಶ್ ತನ್ನ ವೃತ್ತಿಜೀವನದಲ್ಲಿ ಹೊಸ ಕವಲುದಾರಿಯಲ್ಲಿದ್ದಾರೆ. ಅದೇನೆಂದರೆ ಅವರ ಚೊಚ್ಚಲ ನಿರ್ದೇಶನದ 'ಗುರು' ಚಿತ್ರ ಈ ವಾರ ತೆರೆ ಕಾಣುತ್ತಿದೆ. ಈ ಚಿತ್ರದಲ್ಲಿ ಜಗ್ಗೇಶ್ ಅವರ ಹಿರಿಯ ಮಗ ಗುರುರಾಜ್ ನಾಯಕ ನಟನಾಗಿ ನಟಿಸಿದ್ದಾನೆ.

ಹೀಗಾಗಿ ಈ ಚಿತ್ರದ ಸೋಲುಗೆಲುವು ಅಪ್ಪ ಮತ್ತು ಮಗ ಇಬ್ಬರಿಗೂ ಬಹಳ ಮುಖ್ಯವಾಗುತ್ತದೆ. "ನನ್ನ ಮಗನ ಪ್ರತಿಭೆಯನ್ನು ಯಾವ ನಿರ್ದೇಶಕನೂ ಸರಿಯಾಗಿ ಬಳಸಿಕೊಳ್ಳಲಿಲ್ಲ, ಆ ಕಾರಣಕ್ಕಾಗಿ ನಿರ್ದೇಶಕನಾಗಿ ನಾನೇ ಅಖಾಡಕ್ಕೆ ಇಳಿದಿದ್ದೇನೆ. ನನ್ನ ನಿರ್ದೇಶನದ ಈ ಚಿತ್ರದಲ್ಲಿ ನನ್ನ ಮಗ ಗುರುಗೆ ಒಂದು ಹೊಸ ತಾರಾಮೌಲ್ಯವನ್ನು ತಂದುಕೊಡುತ್ತೇನೆ" ಎಂದು ಜಗ್ಗೇಶ್ ಚಿತ್ರ ಆರಂಭವಾದಾಗ ಹೇಳಿದ್ದರು.

ಈ ಕಾರಣಕ್ಕಾಗಿ ಈಗ ಈ ಚಿತ್ರದಲ್ಲಿ ಗುರುವಿನ ನಟನೆ ಹೇಗಿರುತ್ತದೆ ಎಂಬ ಕುತೂಹಲ ಇದ್ದೇ ಇದೆ. ಅದಕ್ಕಿಂತ ಮುಖ್ಯವಾಗಿ ಗುರುವಿನ ಪ್ರತಿಭೆಯನ್ನು ಆತನ ಅಪ್ಪ ಜಗ್ಗೇಶ್ ಹೇಗೆ ಬಳಸಿಕೊಂಡಿದ್ದಾರೆ ಎಂಬ ಪ್ರಶ್ನೆಯೂ ಇದೆ. ಈ ಚಿತ್ರದಲ್ಲಿ ಗುರುರಾಜ್ ಚೆನ್ನಾಗಿ ನಟಿಸಿದ್ದರೆ ಈ ಅಗ್ನಿಪರೀಕ್ಷೆಯಲ್ಲಿ ಜಗ್ಗೇಶ್ ಗೆದ್ದಂತೆ. ಅಂದರೆ ಜಗ್ಗೇಶ್‌ನ ಸೋಲುಗೆಲುವು ಆತನ ಮಗನನ್ನು ಅವಲಂಬಿಸಿದೆ. ಒಟ್ಟಾರೆಯಾಗಿ ಮಗನನ್ನು ಅಪ್ಪ ಪಾಸ್ ಮಾಡಬೇಕು. ಹಾಗೆಯೇ ಅಪ್ಪನನ್ನು ಮಗ ಪಾಸ್ ಮಾಡಬೇಕು ಎಂಬ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿದೆ.

ಇಲ್ಲಿ ಒಂದು ಮಾತನ್ನು ನೆನಪಿಟ್ಟುಕೊಳ್ಳಬೇಕು. ಅದೇನೆಂದರೆ ಜಗ್ಗೇಶ್ 26 ವರ್ಷಗಳ ಹಿಂದೆ ಚಿತ್ರೋದ್ಯಮಕ್ಕೆ ಬಂದಿದ್ದೇ ಚಲನಚಿತ್ರ ನಿರ್ದೇಶಕನಾಗಬೇಕು ಎಂಬ ಕನಸು ಹೊತ್ತುಕೊಂಡು. ಒಂದೆರಡು ಚಿತ್ರಗಳಲ್ಲಿ ನಿರ್ದೇಶಕರಿಗೆ ಸಹಾಯಕನಾಗಿ ದುಡಿದಿದ್ದ ಜಗ್ಗೇಶ್ ಅನಂತರ ದಿಢೀರ್‌ನೆ ನಟನಾಗಿ ರೂಪಾಂತರಗೊಂಡರು. ಇಂದು ರಾಜಕಾರಣಿಯೂ ಆಗಿರುವ ಜಗ್ಗೇಶ್ ಕೊನೆಗೂ ನಿರ್ದೇಶಕನ ಕುರ್ಚಿಯಲ್ಲಿ ಕುಳಿತುಕೊಂಡಿರುವುದು ವಿಶೇಷವೇ ಸರಿ. ■

ಒಳ್ಳೆಯ ಸಿನಿಮಾ ಮಾಡುವತ್ತ ಪ್ರೇಮ್ ಪ್ರತಿಭೆ-ಸಮಯ ಉಪಯೋಗಿ



'ಯಾರೇ ಕೂಗಾಡಲಿ' ಭಾವನಾ

ಸುದೀಪ್ ಮತ್ತು ಪ್ರೇಮ್ ಇದೇ ಮೊದಲ ಬಾರಿಗೆ ಒಟ್ಟಾಗುತ್ತಿದ್ದಾರೆ. ಸುದೀಪ್ ನಾಯಕನಾಗಿ ನಟಿಸಲಿರುವ, ಪ್ರೇಮ್ ನಿರ್ದೇಶಿಸಲಿರುವ ಚಿತ್ರವನ್ನು ನಿರ್ಮಿಸುತ್ತಿರುವವರು ಚಂದ್ರಶೇಖರ್. ಅಂದಹಾಗೆ ಈ ಚಿತ್ರಕ್ಕೆ ಪ್ರೇಮ್ ಇನ್ನು ಹೆಸರಿಟ್ಟಿಲ್ಲ, ಹಾಗೆಯೇ ಈ ಚಿತ್ರ ಯಾವಾಗ ಸೆಟ್ಟೇರುತ್ತದೆ ಎಂಬುದೂ ಇನ್ನೂ ನಿಕ್ಕಿ ಆಗಿಲ್ಲ, ಆದರೆ ಡಿಸೆಂಬರ್ 31ರ ಮಧ್ಯೆ ರಾತ್ರಿ 12 ಗಂಟೆಗೆ - ಅಂದರೆ 2012 ವರ್ಷಕ್ಕೆ ವಿದಾಯ ಹೇಳುತ್ತಾ ಹೊಸ ವರ್ಷ 2013ರನ್ನು ಸ್ವಾಗತಿಸುವ ಶುಭ ಸಂದರ್ಭದಲ್ಲಿ - ಪ್ರೇಮ್ ಈ ಚಿತ್ರದ ಹೆಸರನ್ನು ಅನೌನ್ಸ್ ಮಾಡಲಿದ್ದಾರಂತೆ. ಪ್ರಚಾರಪ್ರಿಯ ಪ್ರೇಮ್ ಹೊಸ ಚಿತ್ರದ ಪ್ರಚಾರಕ್ಕೂ ಆರಂಭದಿಂದಲೇ ಹೊಸ ದಾರಿಗಳನ್ನು ಹುಡುಕಿದ್ದಾರೆಂದಾಯಿತು.

ಈ ಚಿತ್ರವನ್ನು ಮೂರು ಭಾಷೆಗಳಲ್ಲಿ ಏಕಕಾಲದಲ್ಲಿ ನಿರ್ಮಿಸುವ ಯೋಜನೆ ನಿರ್ಮಾಪಕ ಚಂದ್ರಶೇಖರ್ ಅವರದ್ದು. ತೆಲುಗಿನಲ್ಲಿ ಸುದೀಪ್ ಖಳನಾಯಕನಾಗಿ ನಟಿಸಿದ 'ಈಗ' ಚಿತ್ರ ಭಾರತಾದ್ಯಂತ ಸೂಪರ್ ಹಿಟ್ ಆಗಿರುವ ಹಿನ್ನೆಲೆಯಲ್ಲಿ ಸುದೀಪ್‌ಗೆ ಒದಗಿಬಂದಿರುವ ಹೊಸ ತಾರಾಮೌಲ್ಯವನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಚಂದ್ರಶೇಖರ್ ಹೊರಟಿದ್ದಾರೆ. ಇದರ ಅರ್ಥ ಪ್ರೇಮ್‌ಗೆ ಇದೊಂದು ದೊಡ್ಡ ಅಗ್ನಿಪರೀಕ್ಷೆ. ಏಕೆಂದರೆ ಅತ್ಯಂತ ಅದ್ದೂರಿಯ ಈ ಚಿತ್ರವನ್ನು ಗೆಲ್ಲಿಸುವುದು ಪ... ಅದರ ಜೊತೆಗೆ ಸುದೀಪ್ ಇಮೇಜಿಗೆ ತಕ್ಕಂತೆ ಚಿತ್ರಕತೆಯನ್ನು ಹೆಣೆ... ಕೂಡ ಪ್ರೇಮ್ ಪಾಲಿಗೆ ದೊಡ್ಡ ಸವಾಲು.

ಸುದೀಪ್ ಈಗಾಗಲೇ ಆಲ್ ಇಂಡಿಯಾ ಸ್ಟಾರ್ ಆಗಿದ್ದಾರೆ... ಮಂಡ್ಯದ ಹೈದ ಪ್ರೇಮ್ ಇಂಡಿಯಾ ಲೆವಲ್‌ಗೆ ಈ ಚಿತ್ರದ ಮ... ಏರುತ್ತಾರಾ ಎಂಬುದು ಸದ್ಯಕ್ಕೆ ಇರುವ ಕುತೂಹಲ.

ಈ ಕಾರಣದಿಂದ ಇಂತಹ ದೊಡ್ಡ ಚಿತ್ರ ನಿರ್ದೇಶಿಸಲು ಹೊ... ಪ್ರೇಮ್‌ಗೆ ಒಂದು ಕಿವಿಮಾತು. ಅದೇನೆಂದರೆ ಬರಿ ಪಬ್ಲಿಸಿಟಿ... ಪ್ರಚಾರಕ್ಕೆ ಒತ್ತುಕೊಡದೇ ಒಂದು ಒಳ್ಳೆಯ ಸಿನಿಮಾವನ್ನು ಮಾಡು... ಪ್ರತಿಭೆ ಮತ್ತು ಸಮಯವನ್ನು ಪ್ರೇಮ್ ಉಪಯೋಗಿಸಲಿ.

ಈ ಚಿತ್ರದಲ್ಲಿ ಮೂರು ನಾಯಕಿಯರಿರುತ್ತಾರೆ ಎಂಬ ಸುದ್ದಿ ಈ... ಹರಡಿದೆ. ಉಳಿದಂತೆ ಈ ಚಿತ್ರದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು... ಇನ್ನು ಬಹಿರಂಗಪಡಿಸಿಲ್ಲ. ಸ... ಕಂತುಕಂತುಗಳಲ್ಲಿ ನೀಡು... ಸುಖವನ್ನು ಕಾಣುವ ಪ್ರೇ... ಚಿತ್ರಕ್ಕೂ ಅದೇ ತಂತ್ರಗಾ... ಉಪಯೋಗಿಸಿದ್ದಾರೆ ಎ... ಆರಂಭದಲ್ಲೇ ಜಗಜ್ಜಾಹೀ... ■



ಕಲಾವಿದರ ಭವನ ಒಗ್ಗಟ್ಟ... ಪ್ರದರ್ಶಿಸುವ ವೇದಿಕೆಯಾ...

ಕರ್ನಾಟಕ ಕಲಾವಿದರ ಭವನ ಕೊನೆಗೂ ಈ ತಿಂಗಳಲ್ಲಿ ಉದ್ಘಾಟನೆಯಾಗಲಿದೆ. ಮೂರು ಅಂತಸ್ತುಗಳನ್ನು ಹೊಂದಿರಬೇಕಿದ್ದ ಈ ಕಟ್ಟಡದ ಒಂದು ಅಂತಸ್ತು ಮಾತ್ರ ಈಗ ರೆಡಿಯಾಗಿದ್ದು ಅಲ್ಲೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಬೇಕೆಂಬುದು ಹೆಚ್ಚಿನವರ ಆಸೆಯಂತೆ. ಹೀಗಾಗಿ ನವೆಂಬರ್ ತಿಂಗಳೊಳಗೆ ಕಲಾವಿದರ ಭವನ ಉದ್ಘಾಟಿಸಲು ಕಲಾವಿದರ ಸಂಘ ನಿರ್ಧರಿಸಿದೆ.

ಅದೇನೇ ಇರಲಿ, ತಮ್ಮದೇ ಆದ ಒಂದು ಭವನವನ್ನು ಹೊಂದಬೇಕೆಂಬ ಕಲಾವಿದರ ಬಹಳ ವರ್ಷಗಳ ಕನಸು ಕೊನೆಗೂ ಈಡೇರುವ ಕಾಲ ಕೂಡಿಬಂದಿದೆ. ಈ ಕಲಾಭವನ ಆರಂಭಿಸಬೇಕೆಂದು ರಾಜ್‌ಕುಮಾರ್ ಸಂಘದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲೇ ಒಂದು ಪ್ರಯತ್ನ ನಡೆದಿತ್ತು, ಗುಂಡೂರಾಯರು ಮುಖ್ಯಮಂತ್ರಿಯಾಗಿದ್ದಾಗ ಇದಕ್ಕೆಂದು ಒಂದು ನಿವೇಶನವನ್ನೂ ನೀಡಿದ್ದರು. ಆದರೆ ಅದು ವಿವಾದಾತ್ಮಕ ನಿವೇಶನ ಆಗಿದ್ದರಿಂದ ಆ ವಿಷಯ ಕೋರ್ಟ್ ಮೆಟ್ಟಿಲೇರಿತ್ತು, ಅನಂತರ ಅದು ಏನಾಯಿತೋ ಗೊತ್ತಿಲ್ಲ.

ಅಂಬರೀಷ್ ಸಂಘದ ಅಧ್ಯಕ್ಷರಾದ ನಂತರ ಕಲಾಭವನ ನಿರ್ಮಾಣಕ್ಕೆ ಮತ್ತೆ ಜೀವ ಬಂತು. ಅದರಲ್ಲೂ ಮುಖ್ಯವಾಗಿ ಎರಡು ವರ್ಷಗಳ ಹಿಂದೆ ದಿಢೀರನೆ ಕಲಾಭವನ ಆರಂಭವಾಗಲು ಮುಖ್ಯ ಕಾರಣ ಯುವ ಕಲಾವಿದರು ಎಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಯಾಕೆಂದರೆ ಈ ಕಲಾಭವನದ ನಿರ್ಮಾಣಕ್ಕೆ ನಿಜವಾಗಿಯೂ ಜೀವಬಂದದ್ದು ಸೆಲೆಬ್ರಿಟಿ ಕ್ರಿಕೆಟ್ ಟೂರ್ನ... ಆರಂಭವಾದ ನಂತರ. ಸುದೀಪ್ ನಾಯಕತ್ವದ ಕರ್ನಾಟಕ ಬುಲ್‌ಡೋ... ತಂಡದ ಎಲ್ಲಾ ಆಟಗಾರರು ತಾವು ಆಡಿದ ಪಂದ್ಯಕ್ಕೆ ಪಡೆದ ಸಂಭಾವ... ಕಲಾವಿದರ ಸಂಘಕ್ಕೆ ದಾನ ಮಾಡಿದರು. ಹೀಗಾಗಿ ಇದರ... ಸಂಪೂರ್ಣವಾಗಿ ಅಂಬರೀಷ್ ಮತ್ತು ಸುದೀಪ್‌ಗೆ ಸಲ್ಲಬೇಕು.

ಸುಮಾರು 70 ವರ್ಷಗಳ ಇತಿಹಾಸವಿರುವ ಕನ್ನಡ ಚಿ... ಕೊನೆಗೂ ಒಂದು ಸ್ವಂತ ಕಟ್ಟಡ ಆಗುತ್ತಿರುವುದು ಸಂ... ವಿಷಯವೇನೋ ನಿಜ. ಆದರೆ ಒಂದು ಸ್ವಂತ ಕಟ್ಟಡ ಹೊ... ಇಷ್ಟೊಂದು ವರ್ಷ ಬೇಕಾಗಿತ್ತಾ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ... ಇದು ಕನ್ನಡ ಚಿತ್ರರಂಗದ ಜನರ ಒಗ್ಗಟ್ಟನ್ನು ತೋರಿಸುತ್ತದೆ ... ಹೇಳಬಹುದು.

ಅದೇನೇ ಇರಲಿ, ಈ ಕಟ್ಟಡ ತಲೆ ಎತ್ತಿ ನಿಲ್ಲಲು ಅ... ಹಗಲಿಗೆ ಹಗಲು ಕೊಟ್ಟು ದುಡಿದವರೆಂದರೆ ದೊಡ್ಡಣ್ಣ, ರ... ವೆಂಕಟೇಶ್, ಮುನಿರತ್ನಂ ನಾಯ್ಡು, ಸೂರಪ್ಪ ಬಾಬು ಮತ್ತು ... ನಾಯಕತ್ವದ ಯುವ ಕಲಾವಿದರ ಕ್ರಿಕೆಟ್ ತಂಡ.

ಈ ಕಲಾವಿದರ ಭವನ ಕನ್ನಡ ಕಲಾವಿದರ ಸ್ವಾಭಿಮಾನದ... ಸ್ವಾವಲಂಬನೆಯ ಸಂಕೇತ ಮಾತ್ರವಲ್ಲದೆ, ಮುಂಬರುವ ದಿನಗಳ... ಕನ್ನಡ ಚಿತ್ರರಂಗದ ಒಗ್ಗಟ್ಟನ್ನು ಪ್ರದರ್ಶಿಸುವ ವೇದಿಕೆಯೂ ಆಗಲಿ ... ನಮ್ಮ ಆಶಯ. ●

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com